# ತರಬೇತಿ ಕಾರ್ಯಕ್ರಮ

# “ಜೀವನಾಧಾರದ ಅಭಿವೃದ್ಧಿಯ ಪರಿಕಲ್ಪನೆ ಮತ್ತು ಜೀವನಾಧಾರದ ವಿನ್ಯಾಸದ ನಡುವಿನಲ್ಲಿ ಮಧ್ಯಸ್ಥಿಕೆ”




ದಿ ಲೈವಲೀಹುಡ್ ಸ್ಕೂಲ್, 2ನೇ ಮಹಡಿ, 6–3–456/18 & 19, ಎ.ಬಿ.ಎಸ್. ದ್ವಾರಕಾಪುರಿ ಕಾಲೋನಿ, ಎನ್.ಐ.ಎಂ.ಎಸ್ ಪಕ್ಕ
ಪಂಜಗುಟ್ಟ, ಹೈದರಾಬಾದ್ – 500 082

---

ಪ್ರಕಟಣೆ
ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು,
ಕರ್ನಾಟಕ

# ಮೊದಲ ಮಾತು



ಡಾ॥ (ಶ್ರೀಮತಿ) ಅಮಿತಾ ಪ್ರಸಾದ್
ಮಹಾ ನಿರ್ದೇಶಕರು

ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ದೇಶಾದ್ಯಂತ ಸ್ವರ್ಣ ಜಯಂತಿ ಗ್ರಾಮ ಸ್ವರಾಜ್ ಯೋಜನೆಯನ್ನು ಪುನರ್ ರಚಿಸಿ ನ್ಯಾಷನಲ್ ರೂರಲ್ ಲೈವ್ಲೀಹುಡ್ ಮಿಷನ್ (ಎನ್.ಆರ್.ಎಲ್.ಎಂ) ಜಾರಿಗೆ ತಂದಿದೆ. ಅದರನ್ವಯ ಕರ್ನಾಟಕದಲ್ಲಿ ಆಜೀವಿಕಾ– ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆಯನ್ನು ಸರ್ಕಾರದ ವತಿಯಿಂದ ಸ್ಥಾಪಿಸಿ ತನ್ಮೂಲಕ ಗ್ರಾಮೀಣ ಜನತೆಯನ್ನು ಅಭಿವೃದ್ದಿಯ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವ ನೈಜ ಪ್ರಯತ್ನವನ್ನು ಮಾಡಲಾಗುತ್ತಿದೆ.

ಈ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನದ ಪ್ರಮುಖ ಅಂಶವೇನೆಂದರೆ ಸ್ವಯಂ ನಿರ್ವಹಣೆ ಮಾಡಬಹುದಾದ ಸಾಂಸ್ಥಿಕ ವೇದಿಕೆಗಳನ್ನು ನಿರ್ಮಿಸಲು ಗ್ರಾಮೀಣ ಬಡಜನರನ್ನು ಪ್ರೋತ್ಸಾಹಿಸುವುದು ಮತ್ತು ಬೆಂಬಲ ಸಂಸ್ಥೆಗಳನ್ನು ಸ್ಥಾಪಿಸುವುದಾಗಿರುತ್ತದೆ. ಈ ಸಾಂಸ್ಥಿಕ ರೂಪದ ವೇದಿಕೆಗಳು, ಗುಂಪುಗಳು, ಒಕ್ಕೂಟಗಳು ಮತ್ತು ಉತ್ಪಾದಕ ಗುಂಪುಗಳಾಗಿದ್ದು ಇವು ಎನ್.ಆರ್.ಎಲ್.ಎಂ ಸಂಪನ್ಮೂಲಗಳನ್ನು ಒಳಗೊಂಡಂತೆ ವಿವಿಧ ಆರ್ಥಿಕ ಮತ್ತು ತಾಂತ್ರಿಕ ಸೇವೆಗಳನ್ನು ಎನ್.ಆರ್.ಎಲ್.ಎಂ. ಮಾದರಿಯ ಇತರ ಸರ್ಕಾರಿ ಕಾರ್ಯಕ್ರಮಗಳಿಂದ ಪಡೆಯುತ್ತದೆ. ಮತ್ತು ಮುಖ್ಯವಾಗಿ ವಾಣಿಜ್ಯ ಬ್ಯಾಂಕುಗಳಿಂದ ಸಾಲವನ್ನು ಪಡೆಯುತ್ತವೆ. ಇದರಿಂದ ಬಡಜನರಿಗೆ ಮಾರು ಕಟ್ಟೆಯನ್ನು ತಲುಪಲು ಬಂಡವಾಳ ಹಾಗೂ ಸಾಮರ್ಥ್ಯಗಳನ್ನು ನೀಡುತ್ತವೆ. ಮತ್ತು ಸಬಲೀಕರಣ ಹಾಗೂ ಗುಂಪು ಬೆಂಬಲದಿಂದ ಅಂತಿಮ ಘಟ್ಟದವರೆಗೆ ಸೇವೆ ಪಡೆಯುವುದನ್ನು ಖಚಿತಗೊಳಿಸುತ್ತದೆ.

ರಾಜ್ಯದಲ್ಲಿನ ಅತಿ ಬಡವರು ಮತ್ತು ತೊಂದರೆಗೊಳಗಾಗಿರುವ ಜನರ ವಿತ್ತೀಯ ಹಾಗೂ ಆರ್ಥಿಕ ಸೇರ್ಪಡೆ ಗಳನ್ನು ಸಾಧಿಸಲು ಕಾರಣವಾಗುವ ಎನ್.ಆರ್.ಎಲ್.ಎಂ.ಯೋಜನೆ ಪರಿಣಾಮಕಾರಿಯಾಗಿ ಅನುಷ್ಠಾನ ಗೊಳಿಸಲು ಅನುಕೂಲವಾಗುವಂತೆ ಅನುಷ್ಠಾನಾಧಿಕಾರಿಗಳಿಗೆ ಲೈವಲೀಹುಡ್ ಸ್ಕೂಲ್ ಹೈದರಾಬಾದ್ ಇವರಿಂದ 4 ದಿನಗಳ ತರಬೇತಿ ಕಾರ್ಯಕ್ರಮ ಆಯೋಜಿಸಲಾಗಿದ್ದು ಈ ಸಂದರ್ಭದಲ್ಲಿ ರಚಿಸಿರುವ ಕೈಪಿಡಿಯ ಕನ್ನಡ ಆವೃತ್ತಿಯನ್ನು ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣಾಭಿವೃದ್ದಿ ಸಂಸ್ಥೆಯಿಂದ ಪ್ರಕಟಿಸುತ್ತಿದ್ದು, ಈ ಕೈಪಿಡಿಯ ಪ್ರಯೋಜನ ಪಡೆಯಲು ಕೋರಿದೆ.

ANSSIRD

ಡಾ॥ (ಶ್ರೀಮತಿ) ಅಮಿತಾ ಪ್ರಸಾದ್
ಮಹಾ ನಿರ್ದೇಶಕರು

# ಶುಭ ಹಾರೈಕೆ



**ಎಸ್.ಎ. ಅಶ್ರಫುಲ್ ಹಸನ್**
ನಿರ್ದೇಶಕರು

ಭಾರತ ಸರ್ಕಾರವು ಸ್ವರ್ಣಜಯಂತಿ ಗ್ರಾಮ ಸ್ವರಾಜ್ ಯೋಜನೆಯನ್ನು **ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ (ಕೆ.ಎಸ್.ಆರ್.ಎಲ್.ಎಂ.)** ಎಂದು ಪುನರ್ ರೂಪಿಸಲು ನಿರ್ಧರಿಸಿದೆ. ಕರ್ನಾಟಕದಲ್ಲಿ ಮೊದಲ ಹಂತದಲ್ಲಿ ಬೆಳಗಾಂ, ಧಾರವಾಡ, ಗುಲ್ಬರ್ಗಾ, ತುಮಕೂರು ಮತ್ತು ಮೈಸೂರು ಜಿಲ್ಲೆಗಳ ಒಟ್ಟು 20 ತಾಲ್ಲೂಕುಗಳಲ್ಲಿ ಅನುಷ್ಠಾನಗೊಳ್ಳುತ್ತಿದೆ. ಈ ಕಾರ್ಯಕ್ರಮದ ಯಶಸ್ವಿ ಕಾರ್ಯಾಚರಣೆಗಾಗಿ ಅನುಷ್ಠಾನಾಧಿಕಾರಿಗಳು ಹಾಗೂ ಸರ್ಕಾರೇತರ ಸಂಸ್ಥೆಗಳ ಪದಾಧಿಕಾರಿಗಳಿಗೆ ದಿ ಲೈವಲೀಹುಡ್ ಸ್ಕೂಲ್, ಹೈದರಾಬಾದ್ ಇವರಿಂದ ತರಬೇತಿ ಏರ್ಪಡಿಸಲಾಗಿದೆ. ಈ ತರಬೇತಿ ಅವಧಿಯಲ್ಲಿ ನೀಡುವ ಕೈಪಿಡಿಯ ಕನ್ನಡ ಆವೃತ್ತಿಯನ್ನು ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯಿಂದ ಪ್ರಕಟಿಸಲಾಗುತ್ತಿದೆ. ಈ ಕೈಪಿಡಿಯ ಕನ್ನಡ ಪ್ರಕಟಣೆಗೆ ಶ್ರೀ ಕೆ.ಕೃಷ್ಣಸ್ವಾಮಿ ಇವರ ನೇತೃತ್ವದಲ್ಲಿ ಸಹಾಯಕ ಯೋಜನಾಧಿಕಾರಿಗಳಾದ ಶ್ರೀಮತಿ ಮೇಘಲಾ, ಶ್ರೀ ಸಿ.ಲಿಂಗರಾಜಯ್ಯ, ಶ್ರೀ ಭೀಮಪ್ಪ ಎನ್ ಮಾದರ, ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳಾದ ಡಾ॥ ಕೃಷ್ಣರಾಜು, ಮತ್ತು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಾದ ಶ್ರೀಮತಿ ಉಷಾ, ಶ್ರೀ ರಾಮಪ್ಪ ಜಿ, ಶ್ರೀ ಟಿ.ಎಂ.ಜಯಶೀಲ, ಶ್ರೀ ಚೇತನ್‌ಕುಮಾರ್ ಹಾಗೂ ಎಂ.ಪಿ. ಮಾಸಮಡ್ಡಿ, ಮತ್ತು ಸಮುಥ್ಥಾನ ಸಂಸ್ಥೆಯ ಶ್ರೀ ಪ್ರದ್ಯುಮ್ನ ಇವರ ಸಹಕಾರವಿದ್ದು ಸಂಸ್ಥೆಯ ಹಿರಿಯ ಬೆರಳಚ್ಚುಗಾರರಾದ ಶ್ರೀ ವಿ.ನಾಗರಾಜರಾವ್ ರವರು ಅಂದವಾಗಿ ವಿನ್ಯಾಸಗೊಳಿಸಿರುತ್ತಾರೆ. ಈ ಕೈಪಿಡಿಯ ಸದುಪಯೋಗ ಪಡಿಸಿಕೊಳ್ಳಲು ಹಾರೈಸುತ್ತೇನೆ.

**ಎಸ್.ಎ. ಅಶ್ರಫುಲ್ ಹಸನ್**
ನಿರ್ದೇಶಕರು

ANSSIRD

# ಪರಿವಿಡಿ


| ಅಧ್ಯಾಯ ಸಂಖ್ಯೆ | ವಿವರ | ಪುಟ ಸಂಖ್ಯೆ |
|---|---|---|
| 01 | ಜೀವನಾಧಾರದ ಪರಿಕಲ್ಪನೆ ಮತ್ತು ಜೀವನಾಧಾರದ ಉತ್ತೇಜನ | 01–06 |
| 02 | ಜೀವನಾಧಾರದ ಚಟುವಟಿಕೆಗಳನ್ನು ಪ್ರೋತ್ಸಾಹಿಸುವಲ್ಲಿನ ಸಾಮಾನ್ಯ ನಿಯಮಗಳು ಅಥವಾ ಮೂಲ ತತ್ವಗಳು. | 07–14 |
| 03 | ಜೀವನಾಧಾರದ ಚೌಕಟ್ಟು | 15–19 |
| 04 | ಜೀವನಾಧಾರದ ಚಟುವಟಿಕೆಯಲ್ಲಿ ಮಧ್ಯಸ್ಥಿಕೆ | 20–28 |
| 05 | ಸನ್ನಿವೇಶವನ್ನು ಅರ್ಥಮಾಡಿಕೊಳ್ಳುವುದು | 29–34 |
| 06 | ಚಟುವಟಿಕೆ ನಕ್ಷೆ ತಯಾರಿಸುವುದು | 35–37 |
| 07 | ಆವರ್ತನಾ ಸ್ಥಿತಿಯ ವಿಶ್ಲೇಷಣೆ | 38–48 |
| 08 | ಬೇಡಿಕೆ ನಿಯಮಗಳ (ಪರಿಸ್ಥಿತಿ) ಅರ್ಥೈಸುವಿಕೆ | 49–52 |
| 09 | ತ್ರಿಕೋನಾಕೃತಿ ರಚನೆ | 53–56 |
| 10 | ಬಾಹ್ಯ ಪರಿಸರದ ಅನ್ವೇಷನೆ | 57–61 |
| 11 | ಜೀವನಾಧಾರದ ಯೋಜನಾ ನಿರ್ವಹಣೆ | 62–68 |


ANS SIRD

# ಅಧ್ಯಾಯ–1

## –: ಜೀವನಾಧಾರದ ಬಗ್ಗೆ ಸಾಮಾನ್ಯ ಜ್ಞಾನ ಮತ್ತು ಉತ್ತೇಜನ :–

### 1.1 ಜೀವನಾಧಾರ ಎಂದರೇನು ?

ಪ್ರತಿನಿತ್ಯದ ಬಳಕೆಯಲ್ಲಿ "ಜೀವನಾಧಾರವನ್ನು" "ಜೀವನೋಪಾಯಕ್ಕಾಗಿ ಸಂಪಾದನೆ" (ಎಂದು ಉಲ್ಲೇಖಿಸ ಬಹುದಾಗಿರುತ್ತದೆ) "ಜೀವನೋಪಾಯಕ್ಕಾಗಿ ನೀವು ಹೇಗೆ ಸಂಪಾದಿಸುತ್ತೀರಿ" ? ಎಂದು ಯಾವ ವ್ಯಕ್ತಿಗಾದರು ಕೇಳುವುದು "ಬದುಕಿಗಾಗಿ ಏನು ಮಾಡುತ್ತೀದ್ದಿರಿ" ? ಎಂದು ಕೇಳುವುದಕ್ಕೆ ಸಮನಾಗಿ ಕಾಣಬಹುದಾಗಿರುತ್ತದೆ. ಆ ನಿಮಿತ್ತದಿಂದ "ಜೀವನೋಪಾಯಕ್ಕಾಗಿ ಗಳಿಸುವುದನ್ನು" ಆದಾಯ ಉತ್ಪಾದನೆ ಎಂದು ವ್ಯಾಖ್ಯಾನಿಸ ಬಹುದು. ಹೇಗಾದರೂ ಜೀವನಾಧಾರವು ಆದಾಯ ಉತ್ಪಾದನೆಯ ಹಿಂದೆ/ಜೊತೆಗೆ ನಡೆಯುತ್ತಿದೆ.

**<u>ಜೀವನಾಧಾರವು ಆರ್ಥಿಕ ಚಟುವಟಿಕೆಗಳನ್ನು ನಿಶ್ಚಯಿಸುತ್ತದೆ.</u>**

- ಜೀವನಾಧಾರವು ಸ್ವ ಉದ್ಯೋಗವನ್ನು ಮತ್ತು / ಅಥವಾ ಸಂಬಳಕ್ಕಾಗಿ ದುಡಿಯುವುದನ್ನು ಒಳಗೊಂಡಿರುತ್ತದೆ.
- ಜೀವನಾಧಾರವು ಒಪ್ಪಿಗೆಯಾದ ಕೂಲಿಯನ್ನು ನೀಡುವುದು. (ಮಾನವ ಮತ್ತು ಪದಾರ್ಥ)
- ಜೀವನಾಧಾರವು ಅನುರೂಪದ ಸಂಪನ್ಮೂಲ ಉತ್ಪಾದನೆಯನ್ನು ಹೊಂದಿದೆ (ನಗದು ಮತ್ತು ನಗದಲ್ಲದ)
- ಜೀವನಾಧಾರವು ನಷ್ಟಕ್ಕೀಡಾಗುವುದು ಮತ್ತು ಆತಂಕ್ಕೊಳಗಾಗುವುದರಲ್ಲಿ ಸರಿಸಮನಾಗಿ ಹೋರಾಡಲು ಸಹಾಯ ಮಾಡುತ್ತದೆ.
- ಜೀವನಾಧಾರವು ಸ್ವಂತ ಹಾಗೂ ಕುಟುಂಬದ ಬೇಡಿಕೆಗಳನ್ನು ಈಡೇರಿಸುವುದು.
- ಜೀವನಾಧಾರವು ದಿನಗಳೆದಂತೆ ಜೀವನದ ದಾರಿಯಾಗಿ ಸಂಭವಿಸುತ್ತದೆ.

> ಬಾರತದಲ್ಲಿ ಶೇಕಡಾ 10 ಕ್ಕಿಂತ ಕಡಿಮೆ ಗ್ರಾಮೀಣ ಕಾರ್ಮಿಕರು ವ್ಯವಸ್ಥಿತರಾಗಿ ಉದ್ಯೋಗಸ್ಥ ರಾಗಿರುತ್ತಾರೆ. ಗ್ರಾಮೀಣ ಬಡಕುಟುಂಬಗಳು ತಮ್ಮ ಜೀವನಾಧಾರ ಕ್ಕಾಗಿ ಒಂದಕ್ಕಿಂತ ಹೆಚ್ಚಿನ ಚಟುವಟಿಕೆ ಗಳನ್ನು ತೊಡಗಿಸಿಕೊಂಡಿರುತ್ತಾರೆ

**<u>ಆದರ್ಶವಾಗಿ</u>**

- ಒಬ್ಬ ವ್ಯಕ್ತಿಯು ವ್ಯಕ್ತಿಗತವಾಗಿ.
- ನಿರಂತರವಾದ ವಿಧಾನದಲ್ಲಿ ಮತ್ತು
- ಗೌರವಯುತವಾಗಿ ಉದ್ಯೋಗಿಯಾಗುವುದನ್ನು ಜೀವನಾಧಾರ ಎನ್ನಬಹುದು

ಜೀವನಾಧಾರವು ಉದ್ಯೋಗಕ್ಕಿಂತ ಹೆಚ್ಚಿನದಾಗಿರುತ್ತದೆ. ನಿಜವಾಗಿಯೂ ಉದ್ಯೋಗ ಎನ್ನುವುದು ಜನರು ನಿಶ್ಚಯಿಸಿ ಕೊಂಡು ತೊಡಗಿಸಿರುವ ಜೀವನಾಧಾರದ ವಿವಿಧ ಚಟುವಟಿಕೆಗಳನ್ನು ಹೊಂದಿರುತ್ತದೆ.

ANS SIRD

## 1.2 ಜೀವನಾಧಾರವನ್ನು ಯಾಕೆ ಉತ್ತೇಜಿಸ ಬೇಕು ?

ಇಂದು ಜೀವನಾಧಾರವು ಭಾರತದಲ್ಲಿ ಪ್ರಮುಖ ಸವಾಲಾಗಿರುತ್ತದೆ ಲಕ್ಷಾಂತರ ಹೊಸ ಜೀವನಾಧಾರ ಅವಕಾಶಗಳನ್ನು ಸೃಷ್ಟಿಸುವ ಅವಶ್ಯಕತೆಯಿರುತ್ತದೆ, ಮತ್ತು ಈ ಕ್ಷೇತ್ರದಲ್ಲಿ ಬರುವ ಅಸಂಖ್ಯಾಂತ ಜನರಿಗೆ ನಾವು ನಿದಾನವಾಗಿ ಸಹಕರಿಸಿ, ತಾಂತ್ರಿಕತೆಗಳನ್ನು ನವೀಕರಿಸುವುದು, ನೌಕರರನ್ನು ಭರ್ತಿ ಮಾಡುವುದು, ಮಾರುಕಟ್ಟೆಯನ್ನು ಜಾಗತೀಕರಣಗೊಳಿಸುವುದು ಮತ್ತು ಕನಿಷ್ಟ ಸಂಪನ್ಮೂಲಾಧಾರಿತ ಗೊಳಿಸುವುದು. ಬದಲಾದ ಸಾಮಾಜಿಕ ಆರ್ಥಿಕ ಸನ್ನಿವೇಶದಲ್ಲಿ ಬಡವರ ಜೀವನಾಧರ ತುಂಬ ಕಷ್ಟಕರವಾಗಿರುತ್ತದೆ. ಹೆಚ್ಚುತ್ತಿರುವ ಜನಸಂಖ್ಯೆಯಲ್ಲಿ ಬಹುಜನರು ದುಡಿಯುವ ವಯಸ್ಸಿನವರಾಗಿದ್ದು ಮುಂದಿನ ದಿನಗಳಲ್ಲಿ ಇಂತಹವರಿಗೆ ಉದ್ಯೋಗವನ್ನು ನೀಡುವುದು ದೇಶಕ್ಕೆ ಒಂದು ದೊಡ್ಡ ಸವಾಲಾಗಿದೆ. ಈ ಸಮಸ್ಯಗಳಿಗೆ ಪರಿಣಾಮಕಾರಿಯಾದ, ಕ್ರಮ ಕೈಗೊಳ್ಳಬೇಕಾದದ್ದು ಅತ್ಯವಶ್ಯಕ ವಾಗಿರುತ್ತದೆ. ಇದಕ್ಕೆ ಪ್ರಮುಖ ಕಾರಣ ಪ್ರತಿಯೊಬ್ಬ ನಾಗರೀಕನಿಗೂ ಕನಿಷ್ಟ ಜೀವನಾಧಾರ ಒದಗಿಸುವುದಾಗಿದೆ. ಬಡವರಿಗೆ ಇದಕ್ಕಿಂತ ಜೀವನ ನಡೆಸಲು ಆಯ್ಕೆ ಮತ್ತು ಅವಕಾಶವಿರುವುದಿಲ್ಲ ಇದನ್ನು ಮನಗೊಂಡು ಬಡವರಿಗೆ ನಿರಂತರವಾದ ಆದಾಯೋತ್ಪನ್ನ ಚಟುವಟಿಕೆಗಳನ್ನು ನಿರ್ಧಿಷ್ಟ ಸಮಯದಲ್ಲಿ ಒದಗಿಸ ಬೇಕಾಗಿರುತ್ತದೆ.

> ಯೋಜನಾ ಆಯೋಗವು ಇನ್ನು 10 ವರ್ಷಗಳಲ್ಲಿ ಎಲ್ಲರಿಗೂ ಉದ್ಯೋಗ ಕಲ್ಪಿಸುವ ಮತ್ತು ಹತ್ತು ಲಕ್ಷಗಳಿಗೂ ಹೆಚ್ಚಿನ ಜೀವನಾಧಾರ ಸೃಷ್ಟಿಸುವ ಅಂದಾಜು ಹೊಂದಿದೆ.

ಜೀವನಾಧಾರವನ್ನು ಹೆಚ್ಚಿಸುವ ಎರಡನೇ ಮುಖ್ಯ ಕಾರಣ ಆರ್ಥಿಕ ಬೆಳವಣಿಗೆ. ಜೀವನಾಧರಕ್ಕೆ ಸಂಬಂಧಿಸಿದ ಎಲ್ಲಾ ಚಟುವಟಿಕೆಗಳು ಆರ್ಥಿಕವಾದವು. ಆದ್ದರಿಂದ ಹೆಚ್ಚು ಆರ್ಥಿಕ ಚಟುವಟಿಕೆಗಳಿಂದ, ಹೆಚ್ಚು ಉತ್ಪಾದನೆಯಿಂದ ಜೀವನಾಧಾರವನ್ನು ಧೃಡೀಕರಸಬಹುದು. ಇದು ಬಡವರಿಗೆ ಜೀವನಾಧಾರವನ್ನು ಉತ್ತೇಜಿಸುವ ಮೂರನೇ ಹಂತದ ಕಾರಣವನ್ನು ಹೊಂದಿರುತ್ತದೆ.

"ಗೋಪುರದ ಕೆಳಹಂತ"ದಲ್ಲಿರುವ ವಿಶ್ವದ 6 ಲಕ್ಷ ಕೋಟಿ ಜನರಲ್ಲಿ 4 ಲಕ್ಷ ಕೋಟಿಗೆ ಹತ್ತಿರದ ಜನರು ತಮ್ಮ ಜೀವನದ ಮೂಲ ಅವಶ್ಯಕತೆಗಳಾದ ಆಹಾರ, ಬಟ್ಟೆ, ಮತ್ತು ವಸತಿಯನ್ನು ಖರೀದಿಸುವ ಶಕ್ತಿಯನ್ನು ಹೊಂದಿರುವುದಿಲ್ಲ. ಆದರೆ ಜೀವನಾಧಾರ ಉತ್ತೇಜನವು ಸ್ಥಿರವಾದ ಆದಾಯವನ್ನು ಧೃಢೀಕರಿಸಿ ಅವರನ್ನು ಆರ್ಥಿಕ ಬೆಳವಣಿಗೆಗನುಗುಣವಾಗಿ ಬಹಳ ವಸ್ತು ಮತ್ತು ಸೇವೆಗಳ ಗ್ರಾಹಕರನ್ನಾಗಿ ಪರಿವರ್ತಿಸುತ್ತದೆ. ಜೀವನಾಧಾರವನ್ನು ಉತ್ತೇಜಿಸುವ ನಾಲ್ಕನೇ ಕಾರಣವೆಂದರೆ ಸಾಮಾಜಿಕ ರಾಜೀಕಿಯ ದೃಢತೆಯನ್ನು ಹೆಚ್ಚಿಸುವುದು ಯಾವಾಗ ಜನರಿಗೆ ಹಸಿವು ಆಗುತ್ತದೋ, ಯಾವಾಗ ಅವರಿಗೆ ಜೀವನಾಧಾರದ ಆಯ್ಕೆ ಮುಚ್ಚಿರುತ್ತದೋ, ಆಗ ಅವರು ದೌರ್ಜನ್ಯ ಅಥವಾ ಅಪರಾಧಗಳಿಗೆ ಆಶ್ರಯ ಹೋಗುವ ಹೆಚ್ಚಿನ ಸಂಭಾವ್ಯತೆಯಿರುತ್ತದೆ.

ಆದ್ದರಿಂದ ಒಂದು ಆರ್ಥಿಕ ಅಥವಾ ರಾಜಕೀಯ ಸಿದ್ಧಾಂತಕ್ಕೆ ತಳಹದಿಯಾಗಿರುವ ವಿಚಾರಗಳು, ಪ್ರಾಯೋಜಕತೆಯೊಂದೇ ಗುರಿಯಾಗಿರುವ ಚರ್ಚೆಗಳನ್ನು ನಾವು ನೋಡಬೇಕಾಗಿರುತ್ತದೆ. ಮತ್ತು ಸಾಮಾನ್ಯ ಸ್ವ-ಆಸಕ್ತಿಯ ಮೇಲೆ ಜೀವನಾಧಾರವನ್ನು ಉತ್ತೇಜಿಸಬಹುದು. ಆದರೆ ಕಾರಣ ಯಾವುದೇ ಆಗಿರಲಿ, ನಾವು "ಜೀವನಾಧಾರವನ್ನು ಹೇಗೆ ಉತ್ತೇಜಿಸುವುದು" ಎಂಬುದರ ಬಗ್ಗೆ ಯೋಚಿಸುವುದು ಅವಶ್ಯಕತೆ ಇರುತ್ತದೆ.

**"ಜೀವನಾಧಾರ ಉತ್ತೇಜನವು ಅಸ್ತಿತ್ವದಲ್ಲಿರುವ ಜೀವನಾಧಾರವನ್ನು ಪ್ರೋತ್ಸಾಹಿಸುವುದು ಮತ್ತು ಹೊಸ ಜೀವನಾಧಾರ ಸೃಷ್ಟಿಸುವುದನ್ನು ಒಳಗೊಂಡಿರುತ್ತದೆ".**

ANS SIRD

## 1.3 ಜೀವನಾಧಾರದ ಮಧ್ಯವರ್ತನೆ ಎಂದರೇನು ?

ಜೀವನಾಧಾರ ಮಧ್ಯವರ್ತನೆ ಎಂದರೇ ಜಾಗೃತವಾಗಿರುವ ಉದ್ಯಮವನ್ನು ತಿಳಿದಿರುವ ಸಂಸ್ಥೆ ಅಥವಾ ಪಾರುಪತ್ಯಗಳಿಂದ ಉತ್ತೇಜಿಸಿ ಮತ್ತು ಬಹು ಸಂಖ್ಯಾ ಜನರಿಗೆ ಜೀವನಾಧಾರ ಅವಕಾಶಗಳನ್ನು ಪ್ರೋತ್ಸಾಹಿಸುವುದು (ಅವರಿಂದ ಪ್ರತ್ಯೇಕ್ಷವಾಗಿ ಅಥವಾ ಪರೋಕ್ಷವಾಗಿ ಉದ್ಯೋಗಸ್ಥರಾದವನ್ನು ಹೊರೆತುಪಡಿಸಿ).

ಭಾರತ ಸರ್ಕಾರವು ಜೀವನಾಧಾರ ಉತ್ತೇಜನ ಉದ್ಯಮಗಳನ್ನು ಮತ್ತು ಸಾಮಾಜಿಕ ರಕ್ಷಣಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಒಂದು ದೊಡ್ಡ ಪಾರಪತ್ಯತೆಯನ್ನು ಹೊಂದಿರುತ್ತದೆ. ಹಾಗಾದರೂ ಸಹಕಾರಿ ವಲಯ, ಸಾಮೂದಾಯಿಕ ವಲಯ ಮತ್ತು ಸರ್ಕಾರೇತರ ಸಂಸ್ಥೆಗಳ ವಲಯಗಳು ಕೂಡ ಜೀವನಾಧಾರ ಉತ್ತೇಜನದಲ್ಲಿ ನೆರವಾಗುತ್ತಿದೆ.

**ಕೆಲವು ಉದಾಹರಹಣೆಗಳು ಒಳಗೊಂಡಂತೆ :**

- ನೀರಾವರಿ ಅಭಿವೃದ್ದಿಗಾಗಿ ಸರ್ಕಾರಿ ಕಾರ್ಯಕ್ರಮ, ಭಾರತ ಸರ್ಕಾರವು ಸ್ವಾತಂತ್ರ್ಯಾ ನಂತರ ಇತಿಹಾಸದಲ್ಲೇ ದೊಡ್ಡದಾದ 40 ದಶಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯವನ್ನು ಒದಗಿಸಿದೆ. ಈ ಯೋಜನೆಯು ಲಕ್ಷಾಂತರ ಜನರ ಜೀವನಾಧಾರವಾಗಿದೆ.
- 1960 ರಲ್ಲಿ ವ್ಯವಸಾಯ ಕ್ಷೇತ್ರದಲ್ಲಿ ಜೀವನಾಧಾರ ಮಧ್ಯವರ್ತನೆಯು ಪ್ರಮುಖವಾಗಿ ದೊಡ್ಡ ಅಣೆಕಟ್ಟುಗಳು ಮತ್ತು ಸಣ್ಣ ಕಾಲುವೆಗಳ ಮೂಲಕ ನೀರಾವರಿಯನ್ನು ಒದಗಿಸಿ ಹಸಿರು ಕ್ರಾಂತಿಯ ವೇಳೆಯಲ್ಲಿ ಹೆಚ್ಚು ಉತ್ಪನ್ನವಾಗುವ ವಿವಿಧತೆಯನ್ನು ಪ್ರಸ್ತಾಪಿಸಿ, 40 ಲಕ್ಷಾಂತರ ರೈತರ ಮತ್ತು ಭೂ ರೈತರ ಕೂಲಿ ಕಾರ್ಮಿಕರ ತಾಕಲಾಟವನ್ನು ಹೋಗಲಾಡಿಸಿದೆ.
- ಬಡವರಲ್ಲಿ ಸ್ವ–ಉದ್ಯೋಗವನ್ನು ಉತ್ತೇಜಿಸಿ, ಹಣಕಾಸು ಸಂಸ್ಥೆಗಳಿಂದ ಸಾಲ ಸೌಲಭ್ಯ ಮತ್ತು ಸರ್ಕಾರದವತಿಯಿಂದ ಸಹಾಯಧನವನ್ನು ನೀಡಿ ಆದಾಯೋತ್ಪನ್ನ ಆಸ್ತಿಯನ್ನು ಹೊಂದುವಂತೆ ಮಾಡುವ ಸರ್ಕಾರಿ ಕಾರ್ಯಕ್ರಮಗಳಾದ ಸಮಗ್ರ ಗ್ರಾಮೀಣಾಭಿವೃದ್ದಿ ಕಾರ್ಯಕ್ರಮವು (ಐ.ಆರ್.ಡಿ.ಪಿ) ಮರು ನಾಮಕರಣಿಗೊಂಡು ಸ್ವರ್ಣ ಜಯಂತಿ ಗ್ರಾಮೀಣಾ ಸ್ವರೋಜ್‌ಗಾರ್ ಯೋಜನೆಯಾಯಿತು. ಈಗ ಈ ಯೋಜನೆಯು ರಾಷ್ಟ್ರೀಯ ಗ್ರಾಮೀಣ ಜೀವನಾಧಾರ ರಾಯಭಾರಿ **(ಎನ್.ಆರ್.ಎಲ್.ಎಂ)** ಆಗಿ ಮರು ರಚನೆಗೊಂಡಿರುತ್ತದೆ.
- ಸಂಬಳಕ್ಕಾಗಿ ದುಡಿಯುವವರನ್ನಾ ಉತ್ತೇಜಿಸಲು, ಕೇಲವು ರಾಜ್ಯಗಳಲ್ಲಿ ನಡೆಯುತ್ತಿರುವ ವಿಶೇಷ ಸರ್ಕಾರಿ ಕಾರ್ಯಕ್ರಮಗಳಾದ ಮಹಾರಾಷ್ಟ್ರ ಉದ್ಯೋಗ ಖಾತರಿ ಯೋಜನೆ (ಇ.ಜಿ.ಎಸ್) ಮತ್ತು ಹೆಚ್ಚಿನ ಸಹಾಯಧನ ನೀಡಿ ಆಸ್ತಿ ಪಡೆಯಲು, ಸ್ವ–ಉದ್ಯೋಗವನ್ನು ಉತ್ತೇಜಿಸಲು, ಆಂದ್ರಪ್ರದೇಶ, ಮಧ್ಯಪ್ರದೇಶ ಮತ್ತು ರಾಜ್ಯಸ್ಥಾನದಲ್ಲಿ ಕೈಗೊಂಡಿರುವ ವಿಶ್ವ ಬ್ಯಾಂಕ್ ಪ್ರಾಯೋಜಿಸಿರುವ ಜಿಲ್ಲಾ ಬಡತನ ನಿರ್ಮೂಲನ ಪ್ರಾರಂಭದ ಕಾರ್ಯಕ್ರಮ (ಡಿ.ಪಿ.ಐ.ಪಿ).
- ವಲಯ ಸಂಸ್ಥೆಗಳ ಮೂಲಕ ನಡೆಯುತ್ತಿರುವ ಕಾರ್ಯಕ್ರಮಗಳಾದ ರಾಷ್ಟ್ರೀಯ ಕ್ಷೀರಕ್ಷೇತ್ರ ಅಭಿವೃದ್ದಿ ನಿಗಮ, ಕೇಂದ್ರೀಯ ರೇಷ್ಮೆ ನಿಗಮ, ತೆಂಗಿನ ನಾರು ನಿಗಮ, ರಾಷ್ಟ್ರೀಯ ತೋಟಗಾರಿಕಾ ನಿಗಮ ಮತ್ತು ಕೈಮಗ್ಗ ಮತ್ತು ಕರಕುಶಲತೆಯ ಅಭಿವೃದ್ದಿ ಆಯುಕ್ತರುಗಳು.

ANS SIRD

- ಸರ್ಕಾರೇತರ ಸಂಸ್ಥೆಗಳು ನಡೆಸುತ್ತಿರುವ ಕಾರ್ಯಕ್ರಮಗಳಾದ SEWA, BAIF, MYRADA, AKRSP, PRADAN, RGVN, ಮತ್ತು BASIX ಗಳು ಜೀವನಾಧಾರವನ್ನು ವಿವಿಧ ಪ್ರದೇಶ ಮತ್ತು ವಲಯಗಳಲ್ಲಿ ಉತ್ತೇಜಿಸುತ್ತಿವೆ. ಅವುಗಳಲ್ಲಿ ಕೆಲವು ಸಂಸ್ಥೆಗಳ ಬಗ್ಗೆ ಮಾಹಿತಿಯನ್ನು ಅಧ್ಯಾಯ–2 ರಲ್ಲಿ ಕಾಣಿಸಿದೆ.
- ಸ್ವ–ಉದ್ಯೋಗಸ್ಥ ಮಹಿಳಾ ಸಂಘವು (ಎಸ್.ಇ.ಡಬ್ಲ್ಯೂ.ಎ) 750,000 ಸಂಖ್ಯೆಯ ಕಡಿಮೆ ಆದಾಯವುಳ್ಳ ಸ್ವ–ಉದ್ಯೋಗ ಮಹಿಳೆಯರ ಮೂಲಕ ಕಾರ್ಯನಿರ್ವಹಿಸುತ್ತದೆ.
- ಭಾರತೀಯ ಕೃಷಿ – ಕೈಗಾರಿಕೆಗಳ ಸ್ಥಾಪನೆ (ಬಿ.ಎ.ಐ.ಎಫ್) (ಭಾರತೀಯ ಆಗ್ರೋ ಇಂಡಸ್ಟ್ರಿಸ್ ಫೌಂಡೇಷನ್) ಕಾರ್ಯಕ್ರಮವು ಒಂದು ಲಕ್ಷ ಜೀವನಾಧಾರರು ಒಳಗೊಂಡಿರುವ ಚಟುವಟಿಕೆಗಳಾದ ಜಾನುವಾರು ಮಿಶ್ರ ಜಾತಿ ಪ್ರಾಣಿ ಸಾಕಾಣಿಕೆ, ಗೋಮಾಳ ಅಭಿವೃದ್ದಿ, ತೋಟಗಾರಿಕೆ ಇತ್ಯಾದಿಗಳನ್ನು ಪ್ರೋತ್ಸಾಹಿಸುವುದು.
- "ವೆಂಕಟೇಶ್ವರ ಹ್ಯಾಚರೀಸ್" ಮಧ್ಯವರ್ತನೆಯು ಕೋಳಿಸಾಕಾಣಿಕಾ ವಲಯವನ್ನು ಅಭಿವೃದ್ದಿಸಿ, ರಾಷ್ಟ್ರೀಯ ಮೊಟ್ಟೆ ಸಮನ್ವಯ ಪರಿಷತ್‌ನಲ್ಲಿ ಉಚ್ಚ ಸ್ಥಾನ ಪಡೆದು, 200,000 ಕೋಳಿ ಸಾಕಾಣಿಕೆದಾರರಿಗೆ ಸೇವೆ ನೀಡುತ್ತಿದೆ.

ಕೃಷಿ ವ್ಯಾಪಾರ ಸಂಸ್ಥೆಗಳು ಅಥವಾ ಸಹಕಾರಿ ಸಂಸ್ಥೆಗಳು ಉತ್ಪನ್ನಗಳು ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದು ಅಂತಹುದರಲ್ಲಿ ಭಾರತೀಯ ರೈತರುಗಳ ರಸಗೊಬ್ಬರ ಸಹಕಾರಿ ಸಂಸ್ಥೆಯೂ (ಐ.ಎಫ್.ಎಫ್.ಸಿ.ಓ) ಒಂದು. ಇದು ತನ್ನ ಉತ್ಪನ್ನಗಳನ್ನು ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ಜಾಲದ ಮೂಲಕ ಮಾರಾಟ ಮಾಡುತ್ತದೆ. ಮತ್ತು ಟಾಟಾ ರಸಾಯನಿಕದ ಕಿಸಾನ್ ಕೇಂದ್ರಗಳು ರಸಗೊಬ್ಬರ ಮಾರಾಟ ಮಾಡುತ್ತದೆ. ಆದಾಗ್ಯೂ ಅವುಗಳನ್ನು ಜೀವನಾಧರ ಮಧ್ಯವರ್ದನೆಗಳೆಂದು, ಕಠಿಣವಾಗಿ ಹೇಳಲು ಸಾಧ್ಯವಿಲ್ಲ ಇತರೆ ಸಂಸ್ಥೆಗಳು ಅವುಗಳ ಸರಬರಾಜು ಸರಪಳಿಯನ್ನು ಬಲಪಡಿಸಲು ಕಾರ್ಯನಿರ್ವಹಿಸುತ್ತಿದ್ದು. ಅಂತಹವುದರಲ್ಲಿ (ಐ.ಟಿ.ಸಿ) ಕೃಷಿ ವ್ಯಾಪಾರ ವಿಭಾಗವು ಸೋಯಾಬೀನ್, ಪ್ರಾನ್, ಮತ್ತು ಕಾಫಿಗೆ ಗಳಿಕೆಯ ಜಾಲವನ್ನು ನಡೆಸುತ್ತದೆ. ಹಿಂದೂಸ್ಥಾನ ಲೀವರ್ ಸಂಸ್ಥೆಯು ಹಾಲಿನ ಸಂಪಾದನೆ ಮತ್ತು ಈಥ್‌ನಲ್ಲಿ ವ್ಯಾಪಾರ ಸಾಗಾಣಿಕೆ ಮತ್ತು ಪಂಜಾಬನ ವರ್ಕಾದಲ್ಲಿ ನೆಸ್ಲೆ, ಗೋಧಿ ಮತ್ತು ಅಕ್ಕಿಯನ್ನು ಗುತ್ತಿಗೆ ಆಧಾರದಲ್ಲಿ ಬೆಳೆಯಲು ಮತ್ತು ಪೆಪ್ಸಿಯವರಿಂದ ಟಮೋಟೋ ಮತ್ತು ಆಲೂಗಡ್ಡೆ, ಹೀಗೆ ಗ್ರಾಮೀಣ ಜನರ ಜೀವನಾಧರದಲ್ಲಿ ಪ್ರಾಮುಖ್ಯತೆಯನ್ನು ಹೊಂದಿರುತ್ತದೆ.

- ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ (ಎನ್.ಆರ್.ಇ.ಜಿ.ಎ) 2005, ಯೋಜನೆಯೂ ಹೆಚ್ಚು ಕಡಿಮೆ ಎಲ್ಲ ರಾಜ್ಯದಲ್ಲಿ ಅನುಷ್ಠಾನಗೊಳ್ಳುತ್ತಿದೆ ಮತ್ತು ಗ್ರಾಮೀಣ ಕುಟುಂಬ್ಗಳಿಗೆ ಒಂದು ಆರ್ಥಿಕ ವರ್ಷದಲ್ಲಿ 100 ಮಾನವ ದಿನಗಳ ಕೂಲಿ ಉದ್ಯೋಗವನ್ನು ನೀಡಿ ಗ್ರಾಮೀಣ ಪ್ರದೇಶದ ಜನರ ಜೀವನಾಧಾರ ರಕ್ಷಣೆಯನ್ನು ಹೆಚ್ಚುವ ಗುರಿಯನ್ನು ಹೊಂದಿರುತ್ತದೆ.

- ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆಯೂ ಬಾಳಿಕೆ ಬರುವ ಆಸ್ತಿಯನ್ನು ಸೃಷ್ಟಿಸುವ ವಾಸ್ತವತೆಯನ್ನು ಮತ್ತು ಜೀವನಾಧಾರ, ಸಂಪನ್ಮೂಲ ಆಧಾರವನ್ನು ಬಲಪಡಿಸುವುದು, ಈ ಯೋಜನೆಯ ಬಗ್ಗೆ ಅಭಿಪ್ರಾಯಗಳು ವಿಭಾಗಗೊಂಡಿರುತ್ತದೆ. ಕೆಲವರು ಪರ್ಯಾಲೋಚಿಸಿದಂತೆ ಈ ಯೋಜನೆಯು ಕೂಲಿ ಉಧ್ಯೋಗದ ಮೂಲಕ ಜೀವನಾಧಾರದ ಉಗಮ ಮತ್ತು ಸಾಮೂಹಿಕ ಆಸ್ತಿಯನ್ನು ಸೃಷ್ಟಿಸುವುದು, ಅದೇ ವೇಳೆ ಇತರರು ಇದನ್ನು ಸಾಮಾಜಿಕ ರಕ್ಷಣಾ ಕಾರ್ಯಕ್ರಮದ ಜಾಲ ಎಂದು ಪರಿಗಣಿಸುತ್ತಾರೆ.



ANSSIRD

## 1.4 ಜೀವನಾಧಾರ ಉತ್ತೇಜನಾ ಸಂಸ್ಥೆಗಳು (LPOs)

ಒಂದು ನವೀನ ರೀತಿಯ ಸಂಸ್ಥೆಯು ಹೊರಬರುವುದು, ಈ ಗುಂಪಿನ ಅಸ್ತಿತ್ವಕ್ಕೆ ಒಳಪಡುವ ಸಂಸ್ಥೆಗಳನ್ನು "ಜೀವನಾಧಾರ ಉತ್ತೇಜನಾ ಸಂಸ್ಥೆಗಳು" ಅಥವಾ **ಐಕಥಿ** ಎಂದು ನಮ್ಮಿಂದ ಗುರುತಸಲ್ಪಡುತ್ತವೆ. ಎಲ್.ಪಿ.ಓಗಳು ವಿಶೇಷತೆಯಿಂದ ಅಸ್ತಿತ್ವಗೊಳ್ಳುವ ಸರ್ಕಾರೇತರ ಸಂಸ್ಥೆಗಳಿಂದ ಪ್ರಾರಂಭದಿಂದಲೂ ಉತ್ತೇಜಿಸಲ್ಪಟ್ಟ ಅಥವಾ ಒಂದು ವಾಣಿಜ್ಯ ಅಸ್ತಿತ್ವ ಮತ್ತು ನಂತರ ಸಾಮೂಹಿಕತೆಯಿಂದ ಸ್ವಂತವಾಗಿಸುವ ಮತ್ತು ವ್ಯವಸ್ಥಾಪಿಸುವ, ಸಹಕಾರಿ ಸಂಸ್ಥೆಗಳಾಗಿ, ಅಥವಾ "ಉತ್ಪಾದಕ ಸಂಸ್ಥೆ" ಎಂದು, ನೂತನವಾಗಿ ತಿದ್ದುಪಡಿಯಾದ ಕಾಯ್ದೆಯಡಿಯಲ್ಲಿ ನೊಂದಾಯಿಸಬಹುದು.

ಎಲ್.ಪಿ.ಓ ಗಳು ಅಸಂಖ್ಯಾತ ವಿಮರ್ಶಾತ್ಮಕ ಕಾರ್ಯಗಳನ್ನು ನೇರವೇರಿಸುವ ಶಕ್ತಿಯನ್ನು ಹೊಂದಿದ್ದು ಎಂ.ಎಫ್.ಐ ಗಳು ಮತ್ತು ಹಣಕಾಸು ಸಂಸ್ಥೆಗಳ ಸಾಲ ನೀಡುವ ಕಾರ್ಯವನ್ನು ಹೆಚ್ಚಿಗೆ ಸೇರಿಸುತ್ತವೆ. ಹಾಗೂ ಈ ಕರ್ತವ್ಯಗಳನ್ನು ಒಳಗೊಂಡಿರುತ್ತದೆ. ಜೀವನಾಧಾರ ಅವಕಾಶಗಳು ಗುರುತಿಸುವುದ, ಪ್ರೇರೆಪಿಸುವುದು, ತರಬೇತಿ ಮತ್ತು ಬಡವರಿಗೆ ಈ ಅವಕಾಶಗಳ್ನನು ಉಪಯೋಗಿಸಿಕೊಳ್ಳಲು ನಿರೂಪಿಸುವುದು. ಸಾಲ ಮತ್ತು ಮೂಲಭೂತ ಸೌಕರ್ಯವನ್ನು ಒದಗಿಸುವುದು ಸರಬರಾಜು ಸರಪಳಿಯನ್ನು ಸ್ಥಾಪಿಸುವುದು ಮತ್ತು ಉತ್ಪಾದನಾ ಕಾರ್ಯವಿಧಾನ, ಮಾರುಕಟ್ಟೆ ಸಂಬಂಧ ಅಭಿವೃದ್ಧಿ ಅವರಿಗೆ ಯುಕ್ತವಾದ ಕಾರ್ಯನೀತಿ ಬದಲಾವಣೆಗಳನ್ನು ಹುಡುಕುವುದು, ಮುಂದಾಗಿ ಕೆಲಸ ಮಾಡುವ ಘಟಕಗಳಿಗೆ ಸ್ಥರ್ಯಾ ತುಂಬುವುದು ಮತ್ತು ವಿಸ್ತ್ರೀರ್ಣವಾದ ಮೂಲದ ಬಗ್ಗೆ

ದೃಢೀಕರಿಸುವುದು. ಇದರ ಉದ್ದೇಶ ಅಥವಾ ಆಸಕ್ತಿಯು ಕೂಡ ವಿಮರ್ಶಾತ್ಮಾಕ ಉದಾಹರಣೆಗೆ ಒಂದು ತಯಾರಿಕಾ ಕೈಗಾರಿಕೆಯೂ ಬಹಳ ಸಂಖ್ಯೆಯ ಜನರಿಗೆ ಉದ್ಯೋಗ ಒದಗಿಸಿದರೂ ಜೀವನಾಧಾರವನ್ನು ಪ್ರಭಾವಿಸುವ ಸಾಮರ್ಥ್ಯವನ್ನು ಹೊಂದಿರುತ್ತದೆ. ನಿಜವಾಗಿಯೂ ಜೀವನಾಧಾರವನ್ನು ಸೃಷ್ಟಿಸುವುದನ್ನು ಹೇಳುವುದಕ್ಕಿಂತ ಅಥವಾ ಉಧ್ಯೋಗ ಕಲ್ಪಿಸುವುದಕ್ಕಿಂತ ಹೇಗಾದರೂ ಲಾಭಗಳಿಸುವುದನ್ನು ಗುರಿಯಾಗಿಸುವುದರ ಕಡೆ ಹೆಚ್ಚು ಪ್ರಯತ್ನಿಸುವುದು. ಈ ಕೆಳಕಂಡ ಪೆಟ್ಟಿಗೆ ಎಸ್.ವೈ.ಎಫ್.ಎಫ್.ಎಸ್.ಯು ಸಂಸ್ಥೆಯು ಎಲ್.ಪಿ.ಓ ಮತ್ತು ವ್ಯವಹಾರದ ಬಗ್ಗೆ ವಿವರಿಸುತ್ತದೆ. "ಕಡಲಿನ ಮೀನುಗಾರರ ಜೀವನಾಧಾರದ ಮಧ್ಯವರ್ತನೆಯ ಬಗ್ಗೆ : ಎಸ್.ಐ.ಎಫ್.ಎಫ್.ಎಸ್‌ನ ಅನುಭವ.

ANS SIRD

ಒಂದು ಜೀವನಾಧಾರ ಉತ್ತೇಜನ ಸಂಸ್ಥೆ :– SIFFS ಕೇರಳ

ದಕ್ಷಿಣ ಭಾರತ ಮೀನುಗಾರರ ಒಕ್ಕೂಟದ ಸಂಘಗಳು, ತ್ರಿವೇಂಡ್ರಂ. ಇದು ತಮಿಳುನಾಡು ಕೇರಳ ಸಮುದ್ರ ತೀರದ ಬಹಳ ಸಂಖ್ಯೆಯ ಮೀನುಗಾರರೂ ಆದ ಕಡಲಿನ ಕುಶಲಕರ್ಮಿಗಳಿಂದ ಕಾರ್ಯನಿರ್ವಹಿಸುತ್ತಿದೆ. ಮೀನು ಹಿಡಿಯುವ ಕಲೆ ಮತ್ತು ಬಲೆಗಳ ಅಭಿವೃದ್ಧಿಗೆ ತಾಂತ್ರಿಕ ಸಲಹೆಯನ್ನು ಮಾರುಕಟ್ಟೆ ಸೌಲಭ್ಯವನ್ನು ಒದಗಿಸುವುದರೊಂದಿಗೆ , ಸಾಲ ಸೌಲಭ್ಯವನ್ನು ವ್ಯವಸ್ಥೆ ಮಾಡುತ್ತದೆ SIFFS ಸಂಸ್ಥೆಯು ಸದಸ್ಯರಿಂದ ಸಾಲದ ಕಾರ್ಯಕ್ರಮವನ್ನು ಪ್ರಾರಂಭಿಸುವ ಒತ್ತಡಕ್ಕೆ ಒಳಗೊಂಡು, ಈಗಾಗಲೇ ಚಾಲ್ತಿಯಲ್ಲಿರುವ ಅವರ ಸ್ವಂತ ಉಳಿತಾಯದ ಸುತ್ತುನಿಧಿಯಿಂದ ಸಾಲ ನೀಡುವ ವಿಧಾನ ಮತ್ತು ಜಿಲ್ಲಾ ಒಕ್ಕೂಟದಿಂದ ಸಾಲ ನೀಡುವ ವಿಧಾನಗಳು ಅವರಿಗೆ ಅವಶ್ಯಕತೆ ಇದ್ದ ಸಾಲದ ಮೊತ್ತವನ್ನು ನೀಡಲು ಸಾಧ್ಯವಾಗಿರುವುದಿಲ್ಲ. ಮತ್ತೊಂದು ರೀತಿಯಲ್ಲಿ, ಹಣಕಾಸು ಸಂಸ್ಥೆಗಳು ಮೀನುಗಾರರ ಬೇಡಿಕೆಯನ್ನು ಪೂರೈಸಿಲ್ಲ, ಮತ್ತು ಅಕ್ಕ–ಪಕ್ಕದಿಂದ ದೃಢೀಕರಣ ಆಗ್ರಾಹ ಮಾಡಿರುತ್ತದೆ. SIFFS ಸಂಸ್ಥೆಯ ಸಾಲ ಯೋಜನೆಯ ಜಾಲವು (SIFFS ಜಿಲ್ಲಾ ಒಕ್ಕೂಟ ಮತ್ತು ಪ್ರಾಥಮಿಕ ಸಂಘವು) ಮೀನುಗಾರರ ಸಲಕರಣೆಗಳ ಖರೀದಿ ಮತ್ತು ಹೊಸದು ಮಾಡುವುದು, ರಿಪೇರಿ ಮತ್ತು ಜೋಡಣೆ, ಮೀನು ಮಾರಾಟ ಚಟುವಟಿಕೆಗೆ ವ್ಯಾಪಾರಸ್ಥರ (ಮೀನು ಮಾರಾಟ, ಮೀನು ಸಂಸ್ಕರಣೆ), ಆಹಾರಕ್ಕಾಗಿ ಸಾಲ ಉದ್ಯೋಗ ಬದಲಾವಣೆ ಮತ್ತು ಇತರೆ ಬಳಕೆ ಸಾಲ (ಹಬ್ಬಗಳು, ವಿವಾಹ, ವಿಧ್ಯಾಭ್ಯಾಸ, ಆಸ್ಪತ್ರೆ ಮತ್ತು ಸಾಲ ಮರಳಿ ಕೊಳ್ಳುವಿಕೆ).

ANS SIRD

# ಅಧ್ಯಾಯ–2

ಜೀವನಾಧಾರ ಚಟುವಟಿಕೆಗಳನ್ನು ಪ್ರೋತ್ಸಾಹಿಸಲು ಗಮನದಲ್ಲಿರಿಸಬೇಕಾದ ಸಾಮಾನ್ಯ ನಿಯಮಗಳು ಜೀವನಾಧಾರ ಚಟುವಟಿಕೆಗಳ ಚೌಕಟ್ಟಿನ ತಳಹದಿಯಲ್ಲಿ ಹಲವಾರು ಸಾಮಾನ್ಯ ನಿಯಮಗಳಿರುತ್ತವೆ. ಜೀವನಾಧಾರ ಚಟುವಟಿಕೆಗಳ ಸ್ಥಿತಿಗತಿಗಳನ್ನು ವಿಶ್ಲೇಷಿಸುವಾಗ ಈ ಸಾಮಾನ್ಯ ನಿಯಮಗಳನ್ನು ಈ ಸಾಮಾನ್ಯ ನಿಯಮಗಳನ್ನು ಗಮನದಲ್ಲಿರಿಸಿಕೊಳ್ಳಬೇಕಾಗಿದೆ. ಈ ನಿಯಮಗಳು ಜೀವನಾಧಾರ ಚಟುವಟಿಕೆಗಳನ್ನು ಪ್ರೋತ್ಸಾಹಿಸುವವರಿಗೆ ಗಣನೀಯವಾಗಿ ಮಾರ್ಗದರ್ಶಕವಾಗಿದೆ.

1. ಜೀವನಾಧಾರ ಚಟುವಟಿಕೆಗಳ ನಿರ್ಧಾರದ ಮೇಲೇ ಹಲವಾರು ಅಂಶಗಳು ಪರಿಣಾಮಬೀರುತ್ತವೆ. ಜೀವನಾಧಾರ ಚಟುವಟಿಕೆಗಳನ್ನು ಕೈಗೊಳ್ಳುವ ನಿರ್ಧಾರದ ಮೇಲೆ ಹಲವಾರು ಅಂಶಗಳು ಪರಿಣಾಮ ಬೀರುತ್ತವೆ. ಸಾಮಾನ್ಯವಾಗಿ ಜನರುಜೀವನಾಧಾರ ಚಟುವಟಿಕೆಕೈಗೊಳ್ಳಲು ಆಸಕ್ತರಾಗಿದ್ದರೂ ಸಹ ಕಚ್ಚಾ ವಸ್ತುಗಳ ಲಭ್ಯತೆ, ಮೂಲಭೂತ ಸೌಕರ್ಯಗಳು, ಉತ್ಪನ್ನಗಳಿಗೆ ಬೇಡಿಕೆ, ಚಟುವಟಿಕೆ ನಡೆಸಲು ಸಹಕಾರ ಶಾಸಕಾಂಗದ ಪ್ರೋತ್ಸಾಹ , ಎಲ್ಲದಕ್ಕಿಂತ ಪ್ರಮುಖವಾಗಿ ಪ್ರತಿ ಅಂಶಗಳು ಸುಸ್ಥಿರ ಜೀವನಾಧಾರ ಚಟುವಟಿಕೆಗಳ ಮೇಲೆ ಪರಸ್ಪರ ಪರಿಣಾಮ ಬೀರುತ್ತವೆ. ಆದ್ದರಿಂದ ಜೀವನಾಧಾರ ಚಟುವಟಿಕೆಗಳನ್ನು ಪ್ರೋತ್ಸಾಹಿಸುವಾಗ ಈ ಎಲ್ಲಾ ಅಂಶಗಳ ಬಗ್ಗೆ ಅರಿವನ್ನು ಹೊಂದಿರಬೇಕು.

## 2. ಬಡಜನರಿಗೆ ಹಲವಾರು ಜೀವನೋಪಾಯಗಳಿರುತ್ತವೆ.

ಈವರೆಗೆ ಹಲವಾರು ಅಧ್ಯಯನಗಳಿಂದ ಈ ಅಂಶವು ಸಾಬೀತಾಗಿರುತ್ತದೆ. ಅಭಿಜಿತ್ ಬ್ಯಾನರ್ಜಿ ಮತ್ತು ಎಸ್ತರ್ ಡುಫ್ಲೋ ರವರು ಮಧ್ಯಮ ವರ್ಗದ ಕುಟುಂಬಗಳ ಬಗ್ಗೆ ನಡೆಸಿದ ಅಧ್ಯಯನದಲ್ಲಿ 03 ಸದಸ್ರನ್ನೊಳಗೊಂಡ ಒಂದು ಕುಟುಂಬವು 07 ಬೇರೆ ಬೇರೆ ಚಟುವಟಿಕೆಗಳನ್ನು ನಿರ್ವಹಿಸುತ್ತಿದೆಂದು ಪ್ರತಿಪಾದಿಸಿರುತ್ತಾರೆ. ಏಕೆಂದರೆ ಗ್ರಾಮೀನ ಭಾಗದಲ್ಲಿ ವಾಸಿಸುವ ಬಡಜನರು/ ಬುಡಕಟ್ಟು ಜನರು ತಮ್ಮ ಜೀವನ ನಿರ್ವಹಣೆಗೆ ಬೇಕಾದ ವಸ್ತುಗಳನ್ನು ಬೇಟೆಯಾಡುವ ಮೂಲಕ ತಮ್ಮ ಸುತ್ತಲಿನ ಪರಿಸರದಿಂದ ಹುಡುಕುವ ಮೂಲಕ ಬೇರೆ ವಸ್ತುಗಳಿಗೆ ಅವುಗಳನ್ನು ಬದಲಯಿಸಿಕೊಳ್ಳುವ ಮೂಲಕ ತಮ್ಮ ಸುತ್ತಮುತ್ತಲಿನ ಸಮುದಾಯದೊಂದಿಗೆ ಸಂತೋಷವಾಗಿರುತ್ತಾರೆ. ಇದಕ್ಕೆ ವ್ಯತಿರಿಕ್ತವಾಗಿಒಂದೇ ಕುಟುಂಬದ ಸದಸ್ಯರ ಜೀವನಾಧಾರ ಚಟುವಟಿಕೆ ವಿಭಿನ್ನವಾಗಿರ ಬಹುದು.

ಬಹು ಜೀವನಾಧಾರ ಚಟುವಟಿಕೆಗಳು ಒಂದು ಕುಟುಂಬವು ಕೈಗೊಳ್ಳುತ್ತದೆಂದರೆ ಅಲ್ಲಿ ಹಣದ ಹರಿವು ಹಾಗೂ ನಷ್ಟಕ್ಕೊಳಗಾಗುವ ಸಾಧ್ತೆಗಳು ಅಸಂಖ್ಯಾತ ಹಾಗೂ ಆಸಕ್ತಿಕರವಾಗಿರುತ್ತವೆ. ಕೆಲವೊಮ್ಮೆಪರಸ್ಪರ ಸಹಾಯ ಪಡೆದು /ಪಡೆಯದೆಯೂ ಸಹ , ಜೀವನೋಪಾಯದ ಸ್ಪಷ್ಟ ದಾರಿ ಕಾನದೇ ಅಪ್ರಜ್ಞಾಪೂರ್ವಕವಾಗಿ 9ತಮ್ಮ ಪ್ರಕಾರ) ಉತ್ತಮ ಸಮತೋಲನ ಸಾಧಿಸಿರುತ್ತವೆ. ಈ ಸಂದರ್ಭದಲ್ಲಿ ಅದರ ಜೀವನದ ಯಾವುದೇ ಒಂದುಮೂಲಾಧರವಾಗಿರುವ ಅತ್ಯಗತ್ಯ ಅಂಶಗಳಲ್ಲಿ ಬದಲಾವಣೆ ಮಾಡಬೇಕಾದರೂ ಅದರೊಂದಿಗೆ ಬೆಸೆದುಕೊಂಡಿರುವ ಹಾಗೂ ಎಲ್ಲಾ ಜೀವನಾಧಾರ ವ್ಯವಸ್ಥೆಯನ್ನು ಅಪಾಯಕ್ಕೀಡುಮಾಡುವ ಸಾಧ್ಯತೆಯಿರುತ್ತದೆ.

## 3. ಬಡಜನರು ಉತ್ಪಾದಕರು ಹಾಗೂ ಗ್ರಾಹಕರಾಗಿರುತ್ತರೆ.

ಬಡ ಕುಟುಂಬಗಳ ಜೀವನೋಪಾಯದ ಬಗ್ಗೆ ಗಮನಹರಿಸಿದಾಗ, ಪ್ರೋತ್ಸಾಹ ನೀಡುವ ಸಂಸ್ಥೆಗಳು ಸಾಮಾನ್ಯವಾಗಿ ಉತ್ಪಾದನೆಯ ಹೊಸ ವಿಧಾನಹುಡುಕುತ್ತವೆಯೇಹೊರತು ಸದರಿ ಕುಟುಂಬಗಳು ಹಾರಿ ನಡೆಸುತ್ತಿರುವ ಚಟುವಟಿಕೆಗಳನ್ನು ವೃದ್ಧಿಸುವ ಬಗ್ಗೆ ಗಮನಹರಿಸುವುದಿಲ್ಲ. ಬಡಕುಟುಂಬಗಳು

ANSSIRD

ಉತ್ಪಾದಕರಾದ್ದರಿಂದ ಕುಟುಂಬ ದಲ್ಲಿರುವ ಉತ್ಪಾದನೆ , ಉತ್ಪಾದನಾ ವ್ಯವಸ್ಥೆ, ಉತ್ಪಾದನೆಗೆ ಅಗತ್ಯವಾದ ಬಂಡವಾಳ ಮತ್ತು ಬಡ ಕುಟುಂಬಗಳ ದಿನನಿತ್ಯದ ಕೌಟುಂಬಿಕ ಅವಶ್ಯಕತೆಗಳನ್ನು ಪರಿಗಣಿಸಬೇಕಾಗಿದೆ. ಆದಾಯೋತ್ಪನ್ನ ಚಟುವಟಿಕೆಗಳ ಬಗ್ಗೆ ಗಮನಹರಿಸುವಾಗ ಕುಟುಂಬಗಳ ಬಳಕೆಗಳ ಖರ್ಚುಗಳನ್ನು ಪರಿಗಣಿಸದಿದ್ದಲ್ಲಿ ಉತ್ತನ ಫಲಿತಾಂಶಗಳನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಆದ್ದರಿಂದ ಉತ್ಪಾದನಾ ಪ್ರಕ್ರಿಯೆಯಲ್ಲಿ ಸಾಧ್ಯವಾದಷ್ಟು ಅಗತ್ಯ ಬಂಡವಾಳ ತೊಡಗಿಸುವುದರ ಮೇಲೆಆಗುವ ವೆಚ್ಚಗಳನ್ನು ಹಾಗೂ ಕುಟುಂಬಗಳ ದಿನನಿತ್ಯದ ಉಪಯೋಗದ ವೆಚ್ಚಗಳನ್ನು ಕಡಿಮೆಗೊಳಿಸಲು ಹೆಚ್ಚು ಪ್ರಯತ್ನ ಮಾಡಬೇಕಾಗಿದೆ.

ಬಡಕುಟುಂಬಗಳು ಉತ್ಪಾದನಾ ಹಂತದಲ್ಲಿ ಉತ್ಪನ್ನಗಳ ಮೌಲ್ಯವರ್ಧನೆ ಮಾಡಿಕೊಳ್ಳುವ ಬಗ್ಗೆ ಹೆಚ್ಚು ಗಮನಹರಿಸಬೇಕಾಗಿದೆ. ಜೀವನಾಧಾರ ಚಟುವಟಿಕೆಗಳ ಬಗ್ಗೆ ಪ್ರೋತ್ಸಾಹ ನೀಡುವ ಸಂಸ್ಥೆಗಳು ವಸ್ತುಗಳ ಮೌಲ್ಯವರ್ಧನೆಮಾಡಬೇಕಾದ ಅಗತ್ಯಗಳನ್ನು ತಿಳಿಯಪಡಿಸದಿದ್ದಲ್ಲಿ ಭವಿಷ್ಯದಲ್ಲಿ ಸುಸ್ಥಿರ ಜೀವನಾಧಾರ ಚಟುವಟಿಕೆಗಳನ್ನು ರೂಪಿಸಲು ಸಾಧ್ಯವಾಗಲಾರದು.

## 4. ಸ್ಥಳೀಯವಾಗಿ ಜೀವಂತವಾಗಿರುವ ಉತ್ತಮ ಪದ್ದತಿಗಳನ್ನು ಅಳವಡಿಸಿಕೊಳ್ಳುವುದು.

ಗ್ರಾಮಮಟ್ಟದಲ್ಲಿ ಕೆಲವು ಉತ್ಪಾದನೆಗಳು ಹಾಗೂ ಉತ್ಪಾದನಾ ವ್ಯವಸ್ಥೆಗಳು ಉತ್ತಮ ಲಾಭತರಬಲ್ಲವುಗಳಾಗಿರುತ್ತವೆ. ಏಕೆಂದರೆ ಸ್ಥಳೀಯವಾಗಿ ಉತ್ತಮ ಪದ್ದತಿಗಳನ್ನು ತಲೆತಲಾಂತರದಿಂದ ಕೈಗೊಂಡು ಯಶಸ್ವಿಯಾಗಿರುತ್ತವೆ. ಅವರು ಅಳವಡಿಸಿಕೊಂಡಿರುವಈ ಉತ್ತಮ ಪದ್ದತಿಗಳನ್ನು ಅಗತ್ಯ ಬದಲಾವಣೆಗಳ ಜೊತೆಗೆ ಬೇರೊಂದೆಡೆ ಯಥಾವತ್ತಾಗಿ ಯಶಸ್ವಿಯಾಗಿ ಜಾರಿಗೊಳಿಸಬಹುದಾಗಿದೆ. ಆದ್ದರಿಂದ ಸಮುದಾಯದಲ್ಲಿ ಜಾರಿಯಲ್ಲಿರುವ ಉತ್ತಮ ಪದ್ದತಿಗಳನ್ನು ಹಾಗೂ ಉತ್ತಮ ಪದ್ದತಿಗಳನ್ನು ಅಳವಡಿಸಿಕೊಂಡವರನ್ನು ಗುರುತಿಸಿ, ಪ್ರೋತ್ಸಾಹಿಸುವ ಅಗತ್ಯವಿದೆ.

## 5. ಕೌಶಲ್ಯ, ಅರಿವು ಹಾಗೂ ಸಂಪನ್ಮೂಲಗಳನ್ನು ಹೊಂದಾಣಿಕೆ ಮಾಡಬೇಕಾಗಿದೆ.

ಬಡಕುಟುಂಬಗಳ ಜೀವನೋಪಯದ ಬಗ್ಗೆ ಬಡವರಿಗಾಗಿ, ನುರಿತ ತಜ್ಞರಿಗಾಗಲಿ ಹಾಗೂ ಪ್ರೋತ್ಸಾಹ ನೀಡುವ ಸಂಸ್ಥೆಗಳಿಗಾಗಲಿ ಸಂಪೂರ್ಣ ಅರಿವು ಇರುವುದಿಲ್ಲ. ಜನರಲ್ಲಿರುವ ಕೌಶಲ್ಯ, ಅರಿವು ಹಾಗೂ ಸಂಪನ್ಮೂಲಗಳನ್ನು ಪ್ರೋತ್ಸಾಹ ನೀಡುವ ಸಂಸ್ಥೆ ಹಾಗೂ ತಾಂತ್ರಿಕ ತಜ್ಞರು ಒಂದೆಡೆ ಸೇರಿಸುವ ಹಾಗೂಇದರ ಒಳ್ಳೆಯ ಫಲಿತಾಂಶವನ್ನು ಸಮುದಾಯಕ್ಕೆ ದೊರಕುವಂತೆ ಮಾಡುವ ಅಗತ್ಯವಿದೆ. ಈ ಒಗ್ಗೂಡಿಸುವಿಕೆ ಹಾಗೂ ಪ್ರತಿಫಲಿಸುವಿಕೆ ಸಮುದಾಯಕ್ಕೆ ಉತ್ತಮ ಜೀವನಾಧಾರ ಚಟುವಟಿಕೆ ಕೈಗೊಳ್ಳಲು ಆಯ್ಕೆ ಹಾಗೂ ಸಮುದಾಯ ಆಧಾರಿತ ಯೋಜನೆ ತಯಾರಿಸಲು ಸಹಕಾರಿಯಾಗಲಿದೆ.

- ಪ್ರೋತ್ಸಾಹ ನೀಡುವ ಸಂಸ್ತೆಯು ಸಮುದಾಯದ ಕೌಶಲ್ಯ ಹಾಗು ತಜ್ಞರ ಜ್ಞಾನವನ್ನು ಒಗ್ಗೂಡಿಸುವ ಸಂವಹನಾ ಕೌಶಲ್ಯವನ್ನು ಹೋಮದಿರಬೇಕು.
- ಅವಶ್ಯಕತೆ ಇದ್ದಾಗ ತಜ್ಞರ ತಿಳುವಳಿಕೆಯನ್ನು ಸಾಮಾನ್ಯರು ಅರ್ಥ ಮಾಡಿಕೊಳ್ಳಲು ಸುಲಭವಾಗುವಂತಹ ಸರಳ ಭಾಷೆಗೆ ಅನುವಾದಿಸಬೇಕು.
- ಸಾಮಾನ್ಯ ಜನರ ಜ್ವಲಂತ ಸಮಸ್ಯೆಗಳ ಬಗ್ಗೆ ತಜ್ಞರಿಗೆ ಮನವರಿಕೆ ಮಾಡಿಕೊಡಬೇಕು.
- ಜ್ಞಾನ, ಕೌಶಲ್ಯ ಮತ್ತು ಸಂಪನ್ಮೂಲಗಳನ್ನು ಒಗ್ಗೂಡಿಸಿಯೂ ಸಹ ವೈಜ್ಞಾನಿಕವಾಗಿ ಪರಿಸ್ಥಿತಿಗಳನ್ನು ವಿಶ್ಲೇಷಣೆ ಮಾಡುವ ಸಾಮರ್ಥ್ಯವನ್ನು ಹೊಂದಿರಬೇಕು.

ANS SIRD

## 6. ಅತಿ ಚಿಕ್ಕ ಹಾಗೂ ದೊಡಮಟ್ಟದ ಯೋಜನೆಗಳಬಗ್ಗೆ ಗೊಂದಲವನ್ನು ದೂರ ಮಾಡುವುದು.

ಬಡ ಜನರ ಜೀವನೋಪಾಯದ ಅತಿ ಜಟಿಲತೆಯೆಂದರೆ ಯಾವ ಯೋಜನೆ ಚಿಕ್ಕ ಹಂತದಲ್ಲಿ ಯಶಸ್ವಿಯಾಗುತ್ತದೆಯೋ ಅದನ್ನು ದೊಡ್ಡ ಹಂತದಲ್ಲಿ ಯಶಸ್ವಿಗೊಳಿಸಲು ಸಾಧ್ಯವಾಗುವುದಿಲ್ಲ.
ಉದಾ: ಅತ್ಯಂತ ಕುಶಲಕರ್ಮಿಯಾಗಿದ್ದರೂ ಸಹ ಗುಡಿ ಕೈಗಾರಿಕೆಗಳು ಸೇವಾ ವಲಯವನ್ನು ವಿಸ್ತರಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

ಕೆಲವೊಮ್ಮೆ ಹೊಸ ಅವಿಷ್ಕಾರಗಳು ಅವರ ಜೀವನೋಪಯವನ್ನು ಇನ್ನು ಹೆಚ್ಚಿನ ನಷ್ಟಕ್ಕೆ ಸಿಲುಕಿಸಬಹುದು. ಆದ್ದರಿಂದ ಜೀವನಾಧಾರ ಚಟುವಟಿಕೆಗಳ ಬಗ್ಗೆವಿಶ್ಲೇಷಣೆ ಮಾಡುವಗ ಪ್ರಸಕ್ತ ಸಮಾಜದ ಅಲೆ ಹಾಗೂ ಸಾಮಾನ್ಯರ ಜೀವನೋಪಾಯವನ್ನು ಅಪಾಯಕ್ಕೆ ಸಿಲುಕಿಸದೆ ಯಾವ ಹಂತದಲ್ಲಿ ಸುಸ್ಥಿರತೆ ಕಾಪಾಡ ಬಹುದಾಗಿದೆ ಎನ್ನುವ ಬಗ್ಗೆ ಎಚ್ಚರಿಕೆಯಿಂದಿರಬೇಕಾಗಿದೆ.

## 7. ಉತ್ಪಾದನೆಯ ಹಂತದಿಂದ ಗ್ರಾಹಕರಿಗೆ ತಲುಪುವವರೆಗೂ ಪ್ರತಿ ಹಂತದಲ್ಲು ಸಹಕಾರ ನೀಡುವ ಅಗತ್ಯವಿದೆ.

ಬಡಜನರು ಉಪಯುಕ್ತತಾ ಸರಪಳಿಯ ಒಂದು ಭಾಗವಾಗಿರುತ್ತಾರೆ. ಅವರ ಪಾತ್ರ ಉತ್ಪಾದಕರು , ಸಂಸ್ಕರಿಸುವವರು, ಅಥವಾ ಎಲ್ಲದಕ್ಕೀಂತ ಕಡಿಮೆಯೆಂದರೆ ಕೂಲಿಕಾರ್ಮಿಕರಾಗಿರಬಹುದು. ಆದರೆ ಬಡಜನರು ಸ್ಥಿರವಾಗಿ ಲಾಭಗಳಿಸಬೇಕಾದಲ್ಲಿ ಸರಪಳಿಯ ಪ್ರತಿ ಹಂತದಲ್ಲಿ ಅಥವಾ ಕ್ಲಿಷ್ಟಕರ ಹಂತದಲ್ಲಾ ಪ್ರೋತ್ಸಾಹ ನೀಡುವ ಸಂಸ್ಥೆ ಮಧ್ಯಸ್ಥಿಕೆವಹಿಸಬೇಕಾಗಿದೆ.

ಉದಾ: ರಫ್ತು ಮಾಡಬಹುದಾದ ಪದಾರ್ಥಗಳನ್ನು ಬೆಳೆಯಲು ರೈತರಿಗೆ ಪ್ರೋತ್ಸಾಹ ನೀಡಿ, ಮಧ್ಯಸ್ಥಿಕೆ ವಹಿಸುವ ಸಂಸ್ಥೆಯು ರೈತ ಹಾಗೂ ಮಾರುಕಟ್ಟೆಯ ಮಧ್ಯೆ ಸಂಪರ್ಕದ ಕೊಂಡಿಯಾಗಿರುವವರೆಗೂ ರೈತರು ಲಾಭ ಪಡೆಯುತ್ತಾರೆ. ಸಂಸ್ಥೆಯು ಒಮ್ಮೆ ಹಿಂದೆ ಸರಿದಲ್ಲಿ ದಲ್ಲಾಳಿಗಳಿಗೆ ಸುಲಭದ ತುತ್ತಾಗುತ್ತಾರೆ.

ಆದ್ದರಿಂದ ಜೀವನಾಧಾರ ಚಟುವಟಿಕೆಗಳನ್ನು ಬಲಗೊಳಿಸಲು ಅಥವಾ ಸಮರ್ಥ ಜೀವನಾಧಾರ ಚಟುವಟಿಕೆಗಳನ್ನು ಸೃಷ್ಠಿಸಬೇಕಾದಲ್ಲಿ ವಿಭಿನ್ನ ದೃಷ್ಠಿಕೋನದಿಂದ ಉಪಯುಕ್ತತಾ ಸರಪಳಿಯ ಪ್ರತಿ ಹಂತದಲ್ಲಿ ವೈವಿಧ್ಯವಾದ ಸೇವೆಗಳನ್ನು ಒದಗಿಸುವ ಸಾಮರ್ಥ್ಯವನ್ನು ಪ್ರೋತ್ಸಾಹ ನೀಡುವ ಏಜೆನ್ಸಿಯು ಹೊಂದಿರಬೇಕಾಗಿದೆ.

## 8. ಸಮುದಾಯಿಕ ಹಾಗೂ ವ್ಯಕ್ತಿಗತವಾಗಿ ಮಧ್ಯಸ್ಥಿಕೆ ವಹಿಸುವ ಅವಶ್ಯಕತೆಯಿದೆ.

ಸಾಮಾನ್ಯವಾಗಿ ಸಾಮರ್ಥ್ಯ ನಿರ್ಮಾಣ ಏಜೆನ್ಸಿಯು ಸಮುದಾಯಿಕ ಪರಿಹಾರವನ್ನು ಹುಡುಕಲು ಪ್ರಯತ್ನಿಸುತ್ತದೆ. ಆದರೆಹಲವಾರು ವಿಷಯಗಳಿಗೆ ಸಮುದಾಯಿಕ ವಿಧಾನಗಳು ಸೂಕ್ತವಾಗಿರುವುದಿಲ್ಲ. ಆದ್ದರಿಂದ ಜೀವನಾಧಾರ ಚಟುವಟಿಕೆಗಳನ್ನು ಅಳೆಯುವಾಗ ಸಮುದಾಯಿಕ ಹಾಗೂ ವ್ಯಕ್ತಿಗತ ಉಪಯುಕ್ತತಾ ಸರಪಳಿಯ ಬಗ್ಗೆ ಗಮನಹರಿಸಬೇಕಾಗಿದೆ.ಹಾಗೂ ಸಮುದಾಯಿಕ ಪರಿಹಾರಗಳೇ ಎಲ್ಲಾ ಪರಿಸ್ಥಿತಿಗಳಲ್ಲಿಯೂ ಸರಿ ಎನ್ನುವ ಭಾವನೆಯನ್ನು ಕೈಬಿಡಬೇಕಾಗಿದೆ.



ANSSIRD

## 9. ಬಡಜನರಿಗೆ ಸೇವಾ ದೊರಕಿಸುವಸಂಸ್ಥೆಗಳ ಸಹಾಯದ ಅವಶ್ಯಕತೆಯಿದೆ.

ಬಡಜನರು ನಿರ್ವಹಿಸುವ ಜೀವನಾಧಾರ ಚಟುವಟಿಕೆಗಳ ನಿರ್ವಹಣೆಯಲ್ಲಿ ಸೇವಾ ಸಂಸ್ಥೆಗಳು ಪ್ರಮುಖ ಪಾತ್ರವಹಿಸಬೇಕಾಗಿದೆ.ಸಾಮಾನ್ಯವಾಗಿ ಬಡಜನರಿಗೆ ಗುಣಮಟ್ಟದ ಸೇವೆಗಳ ಲಭ್ಯತೆಯ ಮಾರ್ಗೋಪಾಯ ಸಿಗುವಂತಾಗಲು ಸಂಬಂಧಿಸಿದ ತಜ್ಞರ ಸೇವೆ ಒದಗಿಸಲು ಹಾಗೂ ಸಮುದಾಯವು ತನ್ನಖರ್ಚಿನಲ್ಲಿ ಸೇವೆ ಪಡೆಯುವಂತೆ ವ್ಯವಸ್ಥೆಮಾಡಿಕೊಳ್ಳುವ ಅಥವಾ ತಜ್ಞರು ಸರ್ಕಾರಿ ಇಲಾಖೆಗಳ ಸಂಪರ್ಕದಿಂದ ಸೇವೆ ಒದಗಿಸಿ ಸರ್ಕಾರದಿಂದ ವೆಚ್ಚ ಭರಿಸಲು ಅಗತ್ಯ ಕ್ರಮ ಕೈಗೊಳ್ಳುವ ಅಗತ್ಯವಿದೆ.

## 10. ಬಡಜನರ ಜೀವನಾಧಾರ ಚಟುವಟಿಕೆ ಗಂಭೀರ ಪರಿಸ್ಥಿತಿಯಲ್ಲಿರುತ್ತವೆ.

ಜಡಜನರು ತಮ್ಮ ಜೀವನಾಧಾರ ಚಟುವಟಿಕೆಗಳಿಂದ ಹಲವಾರು ಸವಾಲುಗಳನ್ನು ಎದುರಿಸುತ್ತಾ ನಲುಗುವ ಸ್ಥಿತಿಯಲ್ಲಿರುತ್ತಾರೆ. ಅವರು ಜೀವನಾಧಾರ ಚಟುವಟಿಕೆಯಿಂದ ಲಾಭ ಅಥವಾ ನಷ್ಟ ಎರಡನ್ನು ವಿಶ್ಲೇಷಣೆ ಮಾಡದೆ ಯಾಂತ್ರಿಕವಾಗಿ ನಿರ್ವಹಣೆ ಮಾಡುತ್ತಿರುತ್ತಾರೆ. ಆದ್ದರಿಂದ ಜೀವನಾಧಾರ ಚಟುವಟಿಕೆಗಳನ್ನು ವಿಶ್ಲೇಷಿಸುವಾಗಾದಾಯೋತ್ಪನ್ನದ ಜೊತೆಗೆ ಅದರಿಂದ ಅವರಿಗೆ ಒದಗಬಹುದಾದ ನಷ್ಟಗಳನ್ನು ಕಡಿಮೆಗೊಳಿಸುವ ಮಾರ್ಗೋಪಾಯಗಳನ್ನು ಹುಡುಕಬೇಕಾಗಿದೆ. ಈ ಮಾರ್ಗಗಳು ಗ್ರಾಹಕರ ಜೀವನದ

ಸಾಂಪ್ರದಾಯಿಕ ಆಚರಣೆಯ ಸಂಬಂಧವನ್ನು ಹೊಂದಿರುವ ಕಾರಣಗಳಿಂದ ಈ ವಿಧಾನಗಳು ಹೆಚ್ಚು ಸಹಜವಾಗಿರಬೇಕು. ಆದ್ದರಿಂದ ಮೊದಲಿಗೆ ಬಡಜನರ ಜೀವನೋಪಾಯಗಳು ಎದುರಿಸುವ ಸವಾಲುಗಳ ನಕ್ಷೆಯನ್ನು ತಯಾರಿಸಿ ನಂತರ ನಷ್ಟಗಳನ್ನು ಕಡಿಮೆಗೊಳಿಸುವ ಬಗ್ಗೆ ಪ್ರತ್ಯೇಕವಾಗಿ ಯೋಜನೆ ತಯಾರಿಸಬೇಕು.

## 11. ಆರ್ಥಿಕ ಸಹಾಯ ಒದಗಿಸುದಕ್ಕಿಂತ ಉದ್ಯಮಶೀಲತಾ ಮನೋಭಾವನೆ ಬೆಳೆಸುವುದು ಪ್ರಮುಖವಾಗಿದೆ.

ಸಾಮಾನ್ಯವಾಗಿ ಜನರಿಗೆ ಸಂಪನ್ಮೂಲಗಳಿಗಿಂತ ಮಾರುಕಟ್ಟೆಯ ಬೇಡಿಕೆಯ ಲಭ್ಯತೆ ದುಸ್ತರವಾಗಿರುತ್ತದೆ. ಆದ್ದರಿಂದ ಜೀವನಾಧಾರ ಚಟುವಟಿಕೆಗಳನ್ನು ಪ್ರೋತ್ಸಾಹಿಸುವಾಗ ಉದ್ಯಮಶೀಲತಾ ಮನೋಭಾವನೆ ಯನ್ನು ಹಾಗೂ ಪ್ರಚಲಿತ ಮಾರುಕಟ್ಟೆ ಬೇಡಿಕೆಯನ್ನು ಹೊಂದಾಣಿಕೆ ಮಾಡುವ ಮೂಲಕ ಸದಾಕಾಲ ಸುಸ್ಥಿರ ಜೀವನಾಧಾರ ಚಟುವಟಿಕೆಗಳನ್ನು ಸಮುದಾಯಕ್ಕೆ ಒದಗಿಸುವ ಅವಕಾಶ ಮಾಡಿಕೊಟ್ಟಂತಾಗುತ್ತದೆ. **" ಉದ್ಯಮಶೀಲತಾ ಮನೋಭಾವನೆ ಆರ್ಥಿಕ ಸಹಾಯಕ್ಕಿಂತ ಮುಖ್ಯವಾದದ್ದು ಆದರೆ ಆರ್ಥಿಕ ಸಹಾಯ ಉದ್ಯಮಶೀಲತೆಯ ಒಂದು ಭಾಗವಷ್ಟೇ".**

## 12. ಮೆಟಾ ಫಿಶ್ ಕೌಶಲ್ಯ ತುಂಬಾ ಪ್ರಮುಖವಾದದ್ದು.

ಚೀನೀ ಪದೋಕ್ತಿಯ ಪ್ರಕಾರ **"ಮೀನನ್ನು ನೀಡುವುದಕ್ಕಿಂತ ಮೀನನ್ನು ಹಿಡಿಯಲು ಕಲಿಸು"** ಈ ಪದೋಕ್ತಿ ಅಭಿವೃದ್ಧಿ ಕಾರ್ಯಕರ್ತರಿಗೆ ಉತ್ತಮ ಸಂದೇಶ ಎನಿಸಬಹುದು, ಆದರೆ ಜೀವನಾಧಾರ ಚಟುವಟಿಕೆಗಳನ್ನು ಪ್ರೋತ್ಸಾಹಿಸುವವರು ಈ ಬಗ್ಗೆ ಇನ್ನು ಹೆಚ್ಚಿನದನ್ನು ಯೋಚಿಸಬೇಕಾಗಿದೆ.

ಉದಾ: ಮೀನನ್ನು ಹಿಡಿಯಲು ಕಲಿಸುವುದು ಉಪಯೋಗಗವಾಗಬೇಕಾದರೆ ಅವರ ಕಲಿಕೆಗೆ ಪೂರಕವಾಗಿ ಕೆರೆ ಕೊಳ ಮತ್ತು ಮೀನನ್ನು ಹೊಂದಿರಬೇಕು. ಇಲ್ಲದಿದ್ದಲ್ಲಿ ಈ ಕೌಶಲ್ಯ ಯಾವುದೇ ರೀತಿಯಲ್ಲಿ ಪ್ರಯೋಜನಕಾರಿ ಯಾಗುವುದಿಲ್ಲ.

ANS SIRD

ಆದ್ದರಿಂದ ಜೀವನಾಧಾರ ಚಟುವಟಿಕೆಗಳನ್ನು ಪ್ರೋತ್ಸಾಹಿಸಲು ಮೊದಲಿಗೆ ಸಂಪನ್ಮೂಲಗಳನ್ನು ತಲುಪುವ ಬಗ್ಗೆ, ಪರ್ಯಾಯ ಚಟುವಟಿಕೆಗಳಲ್ಲಿತೊಡಗಿಸಿಕೊಳ್ಳುವ ಬಗ್ಗೆ, ತಮ್ಮ ಪರಿಸರಕ್ಕೆ ತಕ್ಕಂತೆ ಆದಾಯೋತ್ಪನ್ನ ಚಟುವಟಿಕೆ ಕೈಗೊಳ್ಳುವ ಬಗ್ಗೆ, ತಮ್ಮ ಚಟುವಟಿಕೆಯನ್ನು ಮಾರುಕಟ್ಟೆಯ ಬೇಡಿಕೆಗೆ ತಕ್ಕಂತೆ ರೂಪಿಸುವಂತೆ, ಹೆಚ್ಚಿನ ಪ್ರಾಮುಖ್ಯತೆ ನೀಡಬೇಕಾಗಿದೆ.

## 2.2 ಪ್ರಮುಖ ಜೀವನಾಧರ ಚಟುವಟಿಕೆಯಿಂದ ಹೆಚ್ಚಿನ ಆದಾಯ ಗಳಿಸುವುದು.

ಹೆಚ್ಚಿನ ಕುಟುಂಬಗಳು ಜೀವನಾಧಾರಕ್ಕಾಗಿ ಹಲವಾರುಚಟುವಟಿಕೆಗಳನ್ನು ಅನುಸರಿಸಿದರೂ ಮುಖ್ಯವಾಗಿ ಒಂದು ಅಥವಾ ಎರಡು ಆದಾಯೋತ್ಪನ್ನ ಚಟುವಟಿಕೆಗಳನ್ನು ಅವಲಂಬಿಸಿರುತ್ತವೆ. ಆದ್ದರಿಂದ ಈ ಮೂಲಕ ಉತ್ಪಾದಕರುತಮ್ಮ ನಿವ್ವಳ ಆದಾಯವನ್ನು ಹೆಚ್ಚಿಸಿಕೊಳ್ಳುವುದು ಹೇಗೆ ಎನ್ನುವ ಬಗ್ಗೆ ಈ ಕೆಳಗಿನಂತೆ ಹೆಚ್ಚಿನ ವಿಶ್ಲೇಷಣೆ ಮಾಡಬೇಕಾಗಿದೆ.

### ಅ) ಉತ್ಪಾದನಾ ಪ್ರಮಾಣ ಹಾಗೂ ಸಾಮರ್ಥ್ಯವನ್ನು ಹೆಚ್ಚಿಸುವುದು:-

ಉತ್ಪಾದನಾ ಪ್ರಮಾಣವನ್ನು ಹೆಚ್ಚಿಸುವುದೆಂದರೆ ಉದಾ: ಉಳುಮೆ ಮಾಡುವ ಪ್ರದೇಶವನ್ನು ಹೆಚ್ಚಸುವುದು, ವ್ಯವಸಾಯಕ್ಕೆ ಬಳಸುವ ಪರಿಕರಗಳನ್ನು ಹೆಚ್ಚಿಸುವುದು, ಕೈಮಗ್ಗದ ವಸ್ತುಗಳು ಆಧುನಿಕ ತಂತ್ರಜ್ಞಾನದ ವಿನ್ಯಾಸದ ಬಳಕೆ, ಮೀನುಗಾರಿಕೆಗೆ ಆಧುನಿಕ ಹಡಗುಗಳ ಬಳಕೆ, ಉತ್ತಮ ಗುಣಮಟ್ಟದ ಬಲೆಗಳನ್ನು ಬಳಸುವುದು.

ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಸಲು ಪೂರಕ ವಾತಾವರಣದ ಆಧಾರದ ಮೇಲೆ ಬೇರೆ ಬೇರೆ ಚಟುವಟಿಕೆಗಳನ್ನು ಆಶ್ರಯಿಸುವುದು,ವಸ್ತುಗಳ ಬೇಡಿಕೆ, ಸಂಪನ್ಮೂಲಗಳ ಲಭ್ಯತೆ ಹಾಗೂ ಸವಾಲುಗಳನ್ನು ಎದುರಿಸಲು ಕುಟುಂಬಗಳ ಸಾಮರ್ಥ್ಯವನ್ನು ಸಹ ಅವಲಂಬಿಸಿರು ತ್ತದೆ. ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲು

- ಉತ್ತಮ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬಹುದು.
- ಉತ್ತಮ ಪದ್ದತಿಗಳನ್ನು ಅನುಸರಿಸಬಹುದು.
- ಉತ್ತಮತರಬೇತಿ ಪಡೆಯಬಹುದು
- ಉತ್ತಮ ಬೀಜಗಳ ಪೂರೈಕೆ
- ರಸಗೊಬ್ಬರ ಮತ್ತು ಇತರೆ ಪರಿಕರಗಳನ್ನು ಬಳಸಬಹುದಾಗಿದೆ.

ಕೃಷಿಯೇತರ ಚಟುವಟಿಕೆಗಳಲ್ಲಿ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲು ಬಳಸುವ ಸಾಧನಗಳೆಂದರೆ: ಕೌಶಲ್ಯ ಅಭಿವೃದ್ಧಿಗೊಳಿಸುವುದು, ಉತ್ಪನ್ನಕ್ಕೆ ಅಗತ್ಯ ಸಲಕರಣೆಗಳನ್ನು ಸಬ್ಸಿಡಿ ದರಗಳಲ್ಲಿ ಒದಗಿಸುವುದು.

### ಆ) ಉತ್ಪನ್ನಕ್ಕೆ ಉತ್ತಮ ವಾಸ್ತವಿಕ ಬೆಲೆ ಲಭ್ಯತೆ:-

ಉತ್ಪಾದಕರು ತಮ್ಮ ಉತ್ಪನ್ನಗಳಿಗೆ ಉತ್ತಮ ಬೆಲೆ ಪಡೆಯಲು ಸಾಧ್ಯವಾಗದ್ದಕ್ಕೆ ಮುಖ್ಯ ಕಾರಣವೆಂದರೆ ಅವರಿಗೆ ತಮ್ಮ ಉತ್ಪನ್ನದ ವಾಸ್ತವಿಕ ಬೆಲೆಯ ಅರಿವಿರುವುದಿಲ್ಲ ಹಾಗೂ ದಲ್ಲಾಳಿಗಳನ್ನು ಅಲವಂಬಿಸಿರುವುದರಿಂದ ಮಾರುಕಟ್ಟೆಯ ಮೇಲೆ ಹಿಡಿತವಿರುವುದಿಲ್ಲ.

ANS SIRD

- ✓ ಸ್ಥಳಿಯವಾಗಿ ಉತ್ಪನ್ನಗಳ ಮೌಲ್ಯವರ್ಧನೆ ಮಾಡುವ ಮೂಲಕ ಪರ್ಯಾಯ ಮಾರುಕಟ್ಟೆಯ ದಾರಿಗಳನ್ನು ಅನ್ವೇಷಣೆ ಮಾಡುವ ಮೂಲಕ ಉತ್ತಮ ಬೆಲೆ ಪಡೆಯಬಹುದಾಗಿದೆ.
- ✓ ರೈತರು ಧಾನ್ಯಗಳನ್ನು ಸ್ಥಳೀಯ ಮಾರುಕಟ್ಟೆಯಲ್ಲಿ ಮಾರುವ ಬದಲು ದೊಡ್ಡ ಮಾರುಕಟ್ಟೆಯಲ್ಲಿಮಾರಿದಾಗ ವ್ಯಾಪಾರಿಗಳ ಬದಲಾಗಿ ನೇರವಾಗಿ ಸಂಸ್ಕರಣ ಕಂಪೆನಿಗೆ ಮಾರುವ ಮೂಲಕ
- ✓ ನಿಗದಿತ ಗುತ್ತಿಗೆ ವ್ಯವಸಾಯ ಮಾಡುವ ಮೂಲಕ
- ✓ ಪ್ರಾದೇಶಿಕವಾಗಿ ಅಗತ್ಯವಿರುವ ಸಂಸ್ಕರಣಾ ಘಟಕಗಳನ್ನು ಒದಗಿಸಿ, ಉತ್ತಮ ಬೆಲೆ ಪಡೆಯಲು ಸಹಕಾರಿಯಾಗಬಹುದಾಗಿದೆ.
- ✓ ಉತ್ಪಾದನಾ ಗುಣಮಟ್ಟವನ್ನು ಹೆಚ್ಚಿಸುವ ಮೂಲಕ ಸಹ ಉತ್ತಮ ಬೆಲೆ ಪಡೆಯಬಹುದಾಗಿದೆ.

  ಉದಾ: ಹಲವಾರು ಬಹುರಾಷ್ಟ್ರೀಯ ಕಂಪೆನಿಗಳು ಗುತ್ತಿಗೆ ವ್ಯವಸಾಯ ಪದ್ಧತಿಯ ವ್ಯವಸ್ಥೆ ಮಾಡಿಕೊಂಡಿದೆ. ಈ ಮೂಲಕ ರೈತರಿಗೆ ಉತ್ತಮ ಬೆಲೆ ಹಾಗೂ ಕಂಪೆನಿಗಳಿಗೆ ತಾವು ಬಯಸಿದ ಗುಣ ಮಟ್ಟದ ಕಚ್ಚಾವಸ್ತುಗಳು ಲಭ್ಯವಾಗುತ್ತವೆ.

### ಇ) ಅನಗತ್ಯ ಖರ್ಚುಗಳನ್ನು ತಗ್ಗಿಸುವುದು.:-

ಅನಗತ್ಯ ಉತ್ಪಾದನಾ ವೆಚ್ಚಗಳನ್ನು ಕಡಿಮೆಗೊಳಿಸುವುದು ಸಹ ಆದಾಯವನ್ನು ಹೆಚ್ಚಿಸಿಕೊಳ್ಳುವ ಪರಿಣಾಮಕಾರಿ ಮಾರ್ಗವಾಗಿದೆ.ಲಭ್ಯ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸುವುದರ ಮೂಲಕ ಹಾಗೂ ಉತ್ತಮ ತಂತ್ರಜ್ಞಾನವನ್ನು ಅಳವಡಿಸುವುದರ ಮೂಲಕ ಉತ್ಪಾದನಾ ವೆಚ್ಚ ಕಡಿಮೆಗೊಳಿಸಬಹುದಾಗಿದೆ.

ಉದಾ: ಸಮಗ್ರ ಕೀಟಬಾಧೆ ನಿವಾರಣಾ ವಿಧಾನಗಳನ್ನು ಅನುಸರಿಸುವುದರ ಮೂಲಕ ಕ್ರಿಮಿ ಕೀಟ ನಾಶಕಗಳ ಅನಗತ್ಯ ಬಳಕೆಯನ್ನು ನಿಲ್ಲಿಸಬಹುದಾಗಿದೆ. ಸ್ಥಳಿಯವಾಗಿ ಲಭ್ಯವಾಗುವ ಸಾವಯವ ತ್ಯಾಜ್ಯಗಳಿಂದ ಸಾವಯವ ಗೊಬ್ಬರ ತಯಾರಿಸಿ ಗೊಬ್ಬರ ಮೇಲಿನ ಖರ್ಚುಗಳನ್ನು ಕಡಿಮೆಗೊಳಿಸಬಹುದು.

### ಈ) ಉತ್ತಮ ಜೀವನಾಧಾರ ಚಟುವಟಿಕೆಗಳಲ್ಲಿನ ಸವಾಲುಗಳನ್ನು/ನಷ್ಟಗಳನ್ನು ಕಡಿಮೆಗೊಳಿಸುವುದು.- ಸಮಸ್ಯೆಗಳನ್ನು ಹೋಗಲಾಡಿಸಲು ಎರಡು ವಿಧಾನಗಳಿವೆ.

1) **ಭೌತಿಕ ವಿಧಾನಗಳು:** ಅಭಿವೃದ್ಧಿ ಪಡಿಸಿದ ಬೇಸಾಯ ಪದ್ದತಿ, ಸಕಾಲಕ್ಕೆ ಬಿತ್ತನೆ, ಮಳೆಗಾಲದಲ್ಲಿ ಸುರಕ್ಷಿತ ನೀರಾವರಿ ಪದ್ದತಿ ಬಳಸುವಿಕೆ, ಸಮಗ್ರ ಕೀಟಬಾಧೆ ನಿವಾರಣೆಯ
   ವಿಧಾನಗಳ ಅಳವಡಿಸುವಿಕೆ, ಸಂಪನ್ಮೂಲಗಳ ಸೂಕ್ತ ಬಳಕೆ, ನೀರಾವರಿ ಸೌಕರ್ಯಕ್ಕಾಗಿ ನಾಲೆ , ಕಾಲುವೆಗಳ ನಿರ್ಮಾಣ,ಮಾರುಕಟ್ಟೆಯಾರ್ಡ ನಿರ್ಮಾಣ, ಸಂಸ್ಕರಣಾ ಘಟಕಗಳ ನಿರ್ಮಾಣ, ವಿದ್ಯುದೀಕರಣ, ರಸ್ತೆಗಳ ನಿರ್ಮಾಣ, ಸೂಕ್ತ ರೈಲ್ವೆ ಸಾಗಾಣಿಕೆ ವ್ಯವಸ್ಥೆ, ಅಂಚೆ, ಬ್ಯಾಂಕ್, ಆರೋಗ್ಯ ಸೇವೆಗಳ ವ್ಯವಸ್ಥೆ.

2) **ಆರ್ಥಿಕ ವಿಧಾನಗಳು:** ಸುರಕ್ಷತೆ ಒದಗಿಸುವುದು, ಗುತ್ತಿಗೆ ಬೇಸಾಯಪದ್ದತಿ ಅಳವಡಿಸಿಕೊಳ್ಳುವುದು,ಕಡಿಮೆ ಬಡ್ಡಿದರಗಳಲ್ಲಿ ಅಗತ್ಯ ಸಾಲ ಸೌಲಭ್ಯ, ಬೇರೆ ಬೇರೆ ರೀತಿಯ ಚಟುವಟಿಕೆ ನಿರ್ವಹಣೆ ಮಾಡುತ್ತಿರುವವರಿಗೆ ಅಗತ್ಯ ಉಳಿತಾಯಕ್ಕೆ ಲಭ್ಯವಿರುವ ವ್ಯವಸ್ಥೆಗಳು,

ANSSIRD

## ಉ) ವಿವಿಧ ಜೀವನೋಪಾಯ ಚಟುವಟಿಕೆಗಳ ಮೂಲಕ ಆದಾಯ ಹೆಚ್ಚಿಸುವುದು.:-

ಹೆಚ್ಚಿನ ಕುಟುಂಬಗಳು ಹಲವಾರು ಜೀವನಾಧಾರ ಚಟುವಟಿಕೆಗಳನ್ನು ತೊಡಗಿಸಿಕೊಂಡಿರುತ್ತಾರೆ. ಶ್ರೀಮಂತ ರೈತರು ಒಂದೇ ರೀತಿಯ ಸುಧಾರಿತ ಬೆಳೆಯನ್ನು ಬೆಳೆಯುವ ಜೊತೆಗೆ ಕೋಳಿಸಾಕಾಣಿಕೆ ಸಹ ತೊಡಗಿಸಿಕೊಂಡಿರುತ್ತಾರೆ. ಬಡ ಕುಟುಂಬಗಳು ಸಾಮಾನ್ಯವಾಗಿ ಹಲವಾರು ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರೂ, ಪ್ರತಿ ಚಟುವಟಿಕೆಯಿಂದ ನಿಗದಿತ ಸ್ಥಿರ ಆದಾಯ ಕಂಡುಕೊಳ್ಳಲು ಸಾಧ್ಯವಾಗುವುದಿಲ್ಲ. ಏಕೆಂದರೆ ದಿನನಿತ್ಯದ ಅವಶ್ಯಕತೆಗೆ ಬೇರೆ ಮಾರ್ಗೋಪಾಯಗಳಿರುವುದಿಲ್ಲ.

ಉದಾ: ಜಮೀನು ರಹಿತರು ಕೂಲಿ ಕಾರ್ಮಿಕರಾಗಿ ಕೆಲಸ ಮಾಡುವ ಜೊತೆಗೆ ಮನೆಯಲ್ಲಿ ಪ್ರಾಣಿ, ಪಕ್ಷಿಗಳ ಸಾಕಾಣಿಕೆ ಮಾಡಿಕೊಂಡು ಸ್ವಂತದ ಬಳಕೆ ಅಥವಾ ಮಾರಾಟ ಮಾಡಲು ಉಪಯೋಗಿಸಬಹುದಾಗಿದೆ.

ಅಗತ್ಯ ಕೌಶಲ್ಯ ತರಬೇತಿ ಹೊಂದಿದಲ್ಲಿ ವರ್ಷದ ಕೆಲ ತಿಂಗಳು ಬೇರೆಡೆ ವಲಸೆ ಹೋಗೆ ಕುಶಲಕರ್ಮಿಗಳಾಗಿ ಅರೆಕಾಲಿಕ ಮಾಡಬಹುದು. ಮನೆಯ ಹಿಂಭಗದಲ್ಲಿ ಲಭ್ಯವಿರುವ ಜಾಗದಲ್ಲಿ ತರಕಾರಿ ಬೆಳೆಯುವುದು, ಕೋಳಿ ಸಾಕಾಣಿಕೆ, ಕುರಿಸಾಕಾಣಿಕೆ, ಸುಧಾರಿತ ತಳಿಯ ಹಸು ಸಾಕಾಣಿಕೆ ಮಾಡಬಹುದಾಗಿದೆ. ಹೈನುಗಾರಿಕೆ ಮತ್ತು ರೇಷ್ಮೆ ಕೃಷಿಯನ್ನು ಜಂಟಿಯಾಗಿ ಮಾಡಿದಲ್ಲಿ ಬಡವರ್ಗದ ಜೀವನೋಪಯಕ್ಕೆ ಉತ್ತಮ ಮಾರ್ಗವಾಗಲಿದೆ.

ಆದ್ದರಿಂದ ಪ್ರೋತ್ಸಾಹ ನೀಡುವ ಸಂಸ್ಥೆಯು ಕುಟುಂಬದ ಪರಿಸ್ಥಿತಿಗನುಗುಣವಾಗಿ, ಲಭ್ಯ ಸಂಪನ್ಮೂಲಗಳ ಬಳಕೆಯ ಜೊತೆಗೆ, ಕ್ಷೇತ್ರ ಆಧರಿತ ಸಹಕಾರ ನೀಡಲು ಅಗತ್ಯ ಯೋಜನೆ ಮಾಡಬಹುದಾಗಿದೆ.

## ಊ) ಅನಗತ್ಯ ಹಾಗೂ ಪ್ರಯೋಜನಕ್ಕೆ ಬಾರದ ಖರ್ಚುಗಳನ್ನು ಕಡಿಮೆಗೊಳಿಸುವುದು:-

ಬಡಕುಟುಂಬಗಳ ಒಂದು ಸಾಮಾನ್ಯ ಲಕ್ಷಣವೆಂದರೆ ಅನಗತ್ಯ ಹಾಗೂ ಪ್ರಯೋಜನಕ್ಕೆ ಬಾರದ ಖರ್ಚುಗಳನ್ನು ಮಾಡುವ ಹಲವಾರು ನಿದರ್ಶನಗಳಿವೆ.

ಉದಾ: ಆರೋಗ್ಯಕ್ಕೆ ಸಂಬಂಧಿಸಿದಂತೆ ನ್ಯೂನ್ಯ ಪೋಷಣೆ, ಉತ್ತಮ ಬಟ್ಟೆ ಹಾಗೂ ವಸತಿ , ಕುಡಿಯುವ ನೀರಿನ ಅಲಭ್ಯತೆ, ಶೌಚಾಲಯ ಬಳಸದಿರುವುದು, ವೈಯಕ್ತಿಕ ಸ್ವಚ್ಚತೆಯ ಬಗ್ಗೆ ನಿರ್ಲಕ್ಷತೆ, ಸಣ್ಣ ಕಾಯಿಲೆಗಳನ್ನು ಕಡೆಗಾಣಿಸುವುದರಿಂದ ಆರೋಗ್ಯದ ಸಮಸ್ಯೆಗಳು ಹೆಚ್ಚಾಗುವುದು. ಆದ್ದರಿಂದ ಕಾಯಿಲೆಗಳು ಬರುವಸಾಧ್ಯತೆಗಳನ್ನು ಕಡಿಮೆ ಗೊಳಿಸುವ ಮೂಲಕ, ತಡೆಗಟ್ಟುವ ಮಾರ್ಗ ಅನುಸರಿಸುವ ಮೂಲಕ ಕೆಲಸ ಮಾಡುವ ಸಾಮರ್ಥ್ಯ ಹೆಚ್ಚಿಸಿ, ಅನಾರೋಗ್ಯದ ಮೇಲಿನ ಖರ್ಚುಗಳನ್ನು ಕಡಿಮೆಗೊಳಿಸಬಹುದಾಗಿದೆ. ಸಮುದಾಯ ಆಧಾರಿತ ಆರೋಗ್ಯ ಸೇವೆಯನ್ನು ಒದಗಿಸುವ ಮೂಲಕ ಉದಾ; ಯಶಸ್ವಿನಿ, ಸರ್ಕಾರಿ ಸಂಸ್ಥೆಗಳು ಕುಟುಂಬಗಳಿಗೆ ಸಹಕಾರಿಯಾಗ ಬಹುದಾಗಿದೆ.

ಕುಟುಂಬಗಳು ಸಂಪ್ರದಾಯಗಳನ್ನು ಅನುಸರಿಸಲು ಮಾಡುವ ಖರ್ಚುಗಳು, ಉದಾ: ಮದುವೆ, ಸಮಾರಂಭಗಳು, ತಿಥಿ ಕಾರ್ಯಕ್ರಮಗಳು, ಹಬ್ಬಗಳ ಆಚರಣೆಗಾಗಿ ದುಂದು ವೆಚ್ಚ, ಹಾಗೂ ಅನಗತು ಖರ್ಚುಗಳನ್ನು ಮಿತಿಗೊಳಿಸ ಬೇಕಾಗಿದೆ.

ಮದ್ಯಪಾನ ಸೇವನೆ ಬಡಕುಟುಂಬಗಳ ಅತ್ಯಂತ ಹೆಚ್ಚಿನ ಅನಗತ್ಯ ಖರ್ಚುಗಳಲ್ಲಿ ಒಂದಾಗಿದೆ.ಹಾಗಾಗಿ ಸರ್ಕಾರಿ/ಸರ್ಕಾರೇತರ ಸಂಸ್ಥೆಗಳು ಮದ್ಯಪಾನ ನ್ನಿಷೇಧ ಹಾಗೂ ಮದ್ಯವ್ಯಸನಿಗಳಿಗೆ ಪುನರ್ವಸತಿ ಕಲ್ಲಿಸುವ ಮೂಲಕ, ಸಾಮಾಜಿಕ ಜಾಗೃತಿ ಮೂಡಿಸಲು ಶ್ರಮಿಸಬೇಕಾಗಿದೆ.

ANS SIRD

ಉತ್ತಮ ಸ್ವಚ್ಚತೆ, ನೀರು ಹಾಗೂ ಗಾಳಿ ಬೆಳಕು ಲಭ್ಯತೆ, ಸಾಮಾಜಿಕ ಸಂಪ್ರದಾಯಗಳ ಆಚರಣೆಯಲ್ಲಿ ಮಿತವಾದ ಖರ್ಚುಗಳು, ಮದ್ಯಪಾನ ಸೇವನೆನಿಷೇಧಗಳ ಗಮನಾರ್ಹ ಪರಿಣಾಮವೆಂದರೆ ಅನಗತ್ಯ ಖರ್ಚುಗಳ ತಗ್ಗುವಿಕೆ, ಈ ಮೂಲಕ ಕುಟುಂಬದ ಅವಶ್ಯಕತೆಗಳಾದ ಆಹಾರ , ವಸತಿ ,ಬಟ್ಟೆ, ವಿದ್ಯಾಭ್ಯಾಸ ಹಾಗೂ ಆರೋಗ್ಯಕ್ಕಾಗಿ ಶೇ.30 ರಿಂದ ಶೇ.50 ರಷ್ಟು ಹೆಚ್ಚಿನ ಹಣಕಾಸು ಲಭ್ಯವಾಗುತ್ತದೆ. ಇದು ಯಾವುದೇ ವಿಧಾನದಲ್ಲೂ ಉತ್ತಮ ಸಾಧನೆಯಾಗಿರುತ್ತದೆ.

## ನಿವ್ವಳ ಆದಾಯವನ್ನು ಅರ್ಥ ಮಾಡಿಕೊಳ್ಳುವ ಸೂತ್ರ

### 1) ಕೃಷಿ ಚಟುವಟಿಕೆಗಳಲ್ಲಿ ನಿವ್ವಳ ಆದಾಯ :

ನಿವ್ವಳ ಆದಾಯ = ಉತ್ಪಾದನಾ ಪ್ರಮಾಣ * ಉತ್ಪನ್ನದ ಬೆಲೆ – ಉತ್ಪಾದನಾ ವೆಚ್ಚ + ನಷ್ಟ

ಉದಾ: ಒಬ್ಬ ಒಣ ಭೂಮಿಯನ್ನು ಹೊಂದಿರುವ ರೈತ 4 ಕ್ವಿಂಟಾಲ್ಗಳ ಧಾನ್ಯ ಉತ್ಪಾದಿಸುತ್ತಾನೆ. ಅದನ್ನು ಪ್ರತಿ ಕ್ವಿಂಟಾಲಿಗೆ ರೂ1,100/– ರಂತೆ ಒಟ್ಟು 4,400/– ಗಳಿಗೆ ಮಾರಾಟ ಮಾಡಿದಾಗ ಅದು ಅತನ ಒಟ್ಟು ಆದಾಯವಲ್ಲ. ಈ ಧಾನ್ಯ ಉತ್ಪಾದಿಸಲು ಆತನಿಗೆ 10 ಕೆಜಿ., ಬೀಜ ಪ್ರತಿ ಕೆಜಿಗೆ, ರೂ 20/–,ಒಂದು ಲೋಡು ಗೊಬ್ಬರಕ್ಕೆ ರೂ.450/–ರಂತೆ ಹಾಗೂ ಜಮೀನಿನ ಲೀಸ್ ಬಾಡಿಗೆಗಾಗಿ ರೂ.1,000/– ರಂತೆ ಖರ್ಚು ಮಾಡಿರುತ್ತಾನೆ .
ಆಗ ಆತನ ನಿವ್ವಳ ಆದಾಯ ರೂ.2,750/– ಆಗಿರುತ್ತದೆ.

### 2) ಜಮೀನು ಹೊಂದಿರದ ಬಡ ಕಾಮಿಕ ತನ್ನ ಶ್ರದ ಬದಲಾಗಿ ಪಡೆಯುವ ಕೂಲಿಯ ಆದಾಯದ ಉದಾಹರಣೆ ಗಮನಿಸಿದರೆ:

180 ದಿನಗಳ ಉದ್ಯೋಗ *ರೂ.40/– ಪ್ರತಿದಿನದ ಕೂಲಿ– ತನ್ನ ಜೀವನಾವಶ್ಯಕತೆಯ ಖರ್ಚು ರೂ.5,000/– = ರೂ.2,200/– ನಿವ್ವಳ ಆದಾಯ ಖರ್ಚನ್ನು ಲೆಕ್ಕ ಹಾಕುವಾಗ ನಷ್ಟ ಹಾಗೂ ಅನಿಶ್ಚಿತ ಸಮಸ್ಯೆಗಳು, ಬೆಲೆಯಲ್ಲಿ ಏರಿಳಿಕೆ, ಸಂಪನ್ಮೂಲಗಳ ಬರಿದಾಗುವಿಕೆಯನ್ನು ಪರಿಗಣಿಸಬೇಕು.

## ನಿವ್ವಳ ಆದಾಯವನ್ನು ಹೆಚ್ಚಿಸುವ ಸೂತ್ರ:

1) ಉತ್ಪಾದನಾ ಪ್ರಮಾಣ ಹೆಚ್ಚಿಸುವುದು
2) ಉತ್ತಮ ಬೆಲೆ ಲಭ್ಯತೆ
3) ಉಣಮಟ್ಟ ಸುಧಾರಣೆ
4) ಅನಗತ್ಯ ಖರ್ಚು ಇಳಿಕೆ
5) ಅನಗತ್ಯ ನಷ್ಟ ಇಳಿಕೆ.

ANSSIRD

# ಅಧ್ಯಾಯ –3

## ಜೀವನಾಧಾರದ ಚೌಕಟ್ಟು.
## ಜೀವನಾಧಾರ ಚಟುವಟಿಕೆ ಚೌಕಟ್ಟಿನಲ್ಲಿ ಮಧ್ಯನಕ್ಷೆಯ ಅವಶ್ಯಕತೆ ಏಕೆ ಬೇಕು ?

–––

ಅಸಂಖ್ಯಾತ ಗ್ರಾಮೀಣ ಬಡ ಕುಟುಂಬಗಳ ಜೀವನಾಧರ ಚಟುವಟಿಕೆಗಳ ಮದ್ಯಸ್ಥಿಕೆ ವಹಿಸಬಯಸುವ ಉತ್ತೇಜನಾ ಸಂಸ್ಥೆಗಳು ಇದನ್ನು ಪ್ರಾರಂಭಿಸುವ ಮೊದಲು ಸೂಕ್ತವಾದ ಮಧ್ಯಸ್ಥಿಕೆಯ ವಿಧಾನ ಮತ್ತು ಒಪ್ಪುವ ಮೊದಲು ಅಥವಾ ವಿನ್ಯಾಸವನ್ನು ಗುರುತಿಸುವುದು ಬಹಳ ಮುಖ್ಯವಾದದು. ಸೂಕ್ತವಲ್ಲದ ಮತ್ತು ಸರಿಯಾಗಿ ವಿನ್ಯಾಸಗೊಳಿಸಿದ ಮಧ್ಯಸ್ಥಿಕೆ ಮಾದರಿಯು ವಿಫಲವಾಗುವ ಸಾಧ್ಯತೆಯಿದ್ದು, ಜೀವನಾಧರದ ಉದ್ದೇಶಗಳನ್ನು ಸಾಧಿಸುವಲ್ಲಿ ತೊಡಗುತ್ತದೆ. ಆದುದರಿಂದ ಜೀವನಾಧರದ ಸಾಕಾರಗೊಳಿಸುವ ಒಂದು ಕ್ರಮವಾದ ಮಾರ್ಗ ಮತ್ತು ಮಾದರಿಯು ಬಹಳ ಮುಖ್ಯವಾಗಿರುತ್ತದೆ.

ಜೀವನಾಧರದ ಚೌಕಟ್ಟು ಅದರ ಮಧ್ಯಸ್ಥಿಕೆಯ ಅನುಷ್ಠಾನದಲ್ಲಿ ಅನೇಕ ಯೋಜಿತ ಅಂಶಗಳನ್ನು ಪರಿಗಣಿಸಿ ವಿಶೇಷಿತ ಅಂಶಗಳನ್ನು ಒಳಗೊಂಡಿರುವಂತಹ ಒಂದು ಉಪಕರಣ. ಜೀವನಾಧರ ಮಧ್ಯಸ್ಥಿಕೆ ವೈಫಲ್ಯದ ಕಾರಣಗಳು ಊಹಿಸಿದ ಮತ್ತು ಪೂರ್ವ ಯೋಜಿತವಲ್ಲದ ಅಂಗಳಾಗಿರುತ್ತದೆ.

ನಾನು ಕ್ರಮವಾಗಿ ಅಂಶಗಳನ್ನು ಆಯ್ಕೆ ಮಾಡಿ ಪೂರ್ಣವಾಗಿ ವಿಶ್ಲೇಷಿತ ಅನುಷ್ಠಾನಗೊಳಿಸಿದರೆ, ಆಶ್ಚರ್ಯಚರಿತ ಹಾಗೂ ಅಕಲ್ಪಿತ ತೊಂದರೆಗಳು ಬರುವ ಸಾಧ್ಯತೆಯು ಗಣನೀಯವಾಗಿ ಕಡಿಮೆಯಿರುತ್ತದೆ. ಹಾಗೂ ಯಶಸ್ವಿಗಳು ಅವಕಾಶಗಳು ಹೆಚ್ಚಾಗಿರುತ್ತದೆ ಇದು ಸೂಕ್ತವಾದ ಮಧ್ಯಸ್ಥಿಕೆ ವಿಧಾನದ ಆಯ್ಕೆ ಮತ್ತು ಲಭ್ಯವಿರುವ ಎಲ್ಲಾ ಆಯ್ಕೆಗಳ ಪೂರ್ಣ ವಿಶ್ಲೇಷಣೆಗಳೆರಡಕ್ಕೂ ಅನ್ವಯಿಸುತ್ತದೆ. ಉದ್ದೇಶಿತ ಗುರಿಯನ್ನು ತಲುಪಲು ಜೀವನಾಧರ ಚೌಕಟ್ಟು ಶಿಷ್ಟಾಚಾರ ಮತ್ತು ನಿಬಂದನೆಗಳಿಂದ ಕೂಡಿದ ಒಂದು ಉಪಕರಣವಾಗಿರುತ್ತದೆ.

### 3.1 ಸಂರಕ್ಷಿತ ಅಥವಾ ನಿರಂತರ ಜೀವನಾಧರ ಚೌಕಟ್ಟು:–

ರಾಬರ್ಟ್ ಚೇಂಬರ್ಸ್ ಮತ್ತು ನಾರ್ಡನ್ ಕಾಸ್ಟೆ ಸಂರಕ್ಷಿತ ಅಥವಾ ನಿರಂತರ ಜೀವನಾಧರ ಚೌಕಟ್ಟು (ಜಿ ರು) ಬಡ ಕುಟುಂಬಗಳ ಜೀವನಾಧರ ಚಟುವಟಿಕೆಗಳ ಮೇಲೆ ಪರಿಣಾಮ ಬೀರುವ ಅಂಶಗಳು ಮತ್ತು ಆ ಅಂಶಗಳ ನಡುವಿನ ಸಂಬಂಧಗಳ ಬಗೆಗೆ ತಿಳಿಸುತ್ತದೆ. ಹೊಸ ಅಭಿವೃದ್ಧಿ ಚಟುವಟಿಕೆಗಳ ಯೋಜನೆ ತಯಾರಿಸಲು ಹಾಗೂ ಸಂರಕ್ಷಿತ ಜೀವನಾಧರದ ಮೇಲೆ ಹಾಲಿ ಅಸ್ಥಿತ್ವದಲ್ಲಿರುವ ಚಟುವಟಕೆಗಳ ಕೊಡುಗೆಯನ್ನು ಅಳೆಯುವ ಅಳತೆಗೋಲಾಗಿ "ಜೀವನಾಧರ ಚೌಕಟ್ಟು" ಒಂದು ಉಪಕರಣವಾಗಿ ಬಳಸಬಹುದಾಗಿದೆ.

1. ಮುಖ್ಯವಾದ ಸಮಸ್ಯೆಗಳ ತಪಸೀಲು ಪಟ್ಟಿ ಮತ್ತು ಅಸಮಸ್ಯೆಗಳ ನಡುವಿನ ಸಂಭಂಧಗಳ ಬಗೆಗೆ ತಿಳಿಸುತ್ತದೆ
2. ಪ್ರಮುಖ ಪರಿಣಾಮಗಳು ಮತ್ತು ಅದರ ಗತಿಯ ಬಗ್ಗೆ ಗಮನ ಸಳೆಯುತ್ತದೆ.
3. ಜೀವನಾಧರದ ಮೇಲೆ ಪರಿಣಾಮ ಬೀರುವ ಅನೇಕ ಅಂಶಗಳ ನಡುವಿನ ಬಹುಮುಖ ಸಂವಹನಗಳ ಬಗೆಗೆ ಹೆಚ್ಚು ಒತ್ತನ್ನು ಕೊಡುತ್ತದೆ.

ಜೀವನಾಧರ ಚೌಕಟ್ಟು ಯಾವುದೇ ಒಂದು ಏಕಪಕ್ಷೀಯ ನೈಜ ಮಾದರಿಯನ್ನು ಪ್ರತಿ ಬಿಂಬಿಸುವುದಿಲ್ಲ. ಇದು ಜನರನ್ನು ಮತ್ತು ಕುಟುಂಬಗಳನ್ನು ಕೇಂದೀಕರಿಸುತ್ತದೆ. ಇದರ ಉದ್ದೇಶವು ಅವಲಂಬಿತ ಕುಟುಂಬಗಳ ಬೇರೆ ಬೇರೆ

ANSIRD

ದೃಷ್ಟಿಕೋನಗಳ ಆಧಾರದ ಮೇಲೆ ಜೀವನಾಧರದ ಮೇಲೆ ಪರಿಣಾಮ ಬೀರುವ ಅನೇಕ ಅಂಶಗಳು ಮತ್ತು ಅದರ ನಡುವಿನ ಸಂಭಂಧಗಳ ಪ್ರಾಮುಖ್ಯಕತೆ ರಚನಾತ್ಮಕ ಮತ್ತು ಸಮಂಜಸ ವಿವರಣೆ ನೀಡುತ್ತದೆ. ಇದರ ಮಧ್ಯಸ್ಥಿಕೆ ಉತ್ತೇಜನ ಸಂಸ್ಥೆಗಳು ಸೂಕ್ತವಾದ ಪ್ರವೇಶ ದ್ವಾರವನ್ನು ಕಲ್ಪಿಸಿ ಜೀವನಾಧರಕ್ಕೆ ಸಹಕಾರಿಯಾಗುತ್ತದೆ.

**<u>ನಿರಂತರ ಜೀವನಾಧರದ ಚೌಕಟ್ಟು ರಾಬರ್ಟ್ ಚೆಮಬರ್ಸ್ ಮತ್ತು ಗಾರ್ಡನ್ ಖಾನ್‌ವೆ (1991)</u>**




**ಚಿತ್ರ–1**

## 3.2:– ಒಂಭತ್ತು ಮಂಡಲ:– ಎಸ್.ಡಿ.ಸಿ ಗ್ರಾಮೀಣ ಜೀವನಾಧರ ಚೌಕಟ್ಟು:–

ಎಸ್.ಡಿ.ಸಿ ಯು ಒಂಭತ್ತು ಮಂಡಲಗಳ ಜೀವನಾಧರದ ಚೌಕಟ್ಟು ಪ್ರತಿಬಿಂಬಿಸುತ್ತದೆ. ಇದರಂತೆ ಗ್ರಾಮೀಣ ವಸತಿ ರೂಪಾಲಂಕಾರದ ಆಧಾರದ ಮೇಲೆ ಮೂರು ಹಂತಗಳ ಜೀವನಾಧರ ವಿಧಾನಗಳನ್ನು ಕಾಣಬಹುದು. ಮೊದಲನೆಯ ಹಂತ ತಳಪಾಯ ಭೌತಿಕ ಭಾವನಾತ್ಮಕ ಹಾಗೂ ಜ್ಞಾನದ ಸಂಪನ್ಮೂಲವನ್ನು ಪ್ರತಿಬಿಂಬಿಸುತ್ತದೆ.

ಎರಡನೆ ಹಂತ ರೂಪಾಲಂಕಾರವಾಗಿದ್ದು, ಮೂರು ಕೋಣೆಗಳಿರುತ್ತದೆ. ಇದರಲ್ಲಿ ಮಧ್ಯದ ಕೋಣೆಯು ಕುಟುಂಬದ ಕೋಣೆಯಾಗಿದ್ದು, ಎಲ್ಲಾ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವ ಕೋಣೆಯಾಗಿರುತ್ತದೆ.

**ಭಾವಣೆಯು ನವಜ್ಞಾನ ವಿಕಾಸದ ಮೂರು ಶಕ್ತಿಯು ಕೇಂದ್ರಗಳಾಗುತ್ತದೆ.**

1. ಸಾಮೂಹಿಕ/ ಸಾಂಘಿಕ ನವಜ್ಞಾನ ವಿಕಾಸ
2. ಕೌಟುಂಬಿಕ ನವಜ್ಞಾನ ವಿಕಾಸ
3. ವೈಯಕ್ತಿಕ ನವಜ್ಞಾನ ವಿಕಾಸ

## 9 ಮಂಡಲ ಅಥವಾ ಗ್ರಾಮೀಣ ಜೀವನಾಧರ ವ್ಯವಸ್ಥೆಯ ಚೌಕಟ್ಟು

ಮನೆ ಜೀವನಾಧಾರದ ಸಂಕೇತ

**ಗ್ರಾಮೀಣಾ ಜೀವನಾಧರ ವ್ಯವಸ್ಥೆ**



| | | |
|---|---|---|
| ವೈಯಕ್ತಿಕ ಪುನರ್‌ಮನನ ಶಕ್ತಿ ಉ: ಹೆಬ್ಬಯಾಕೆ | ಕೌಟುಂಬಿಕ ಪುನರ್‌ಮನನ ಶಕ್ತಿ ಉ: ಜಾತಿ, ಪೂರ್ವಜರು | ಸಾಮೂಹಿಕ ಪುನರ್ ಮನನ ಶಕ್ತಿ ಉ:ದರ್ಮ, ಪಾರಂಪರೆ |
| ಅಂತರಿಕ ಮಾನವ ಕೊಠಡಿ. ಉ : ನಿಷ್ಠೆ, ಸ್ವಾರ್ತ | ಕುಟುಂಬದ ಕೊಠಡಿ ಲಿಂಗ ಮತ್ತು ಸಂಬಂಧಗಳು | ಸಾಮಾಜಿಕ ಮತ್ತು ಆರ್ಥಿಕ ಕೊಠಡಿ ಉ: ಸಂಘ ಸಂಸ್ಥೆಗಳು |
| ಭಾವನಾತ್ಮಕ ತಳ ಉ: ಅಕ್ಕರೆ, ಪ್ರೀತಿ | ಜ್ಞಾನ ಮತ್ತು ಚಟುವಟಿಕೆ ತಳಪಾಯ ಉ: ತಾಂತ್ರಿಕತೆ ಅನುಭವ ಕೌಶಲ್ಯ | ಬೌತಿಕ ತಳಪಾಯ ಉ:ಪ್ರಾಕೃತಿಕ ಸಂಪನ್ಮೂಲ, ಆಸ್ತಿ |

೯ ಚೌಕಟ್ಟುಗಳ ಮಂಡಲ



"ಗೃಹ ನಿರ್ವಹಣೆ" ಅಂದರೆ ಸುಸೂತ್ರ ವಾಗಿ ಗೃಹ ನಿರ್ವಹಿಸುವ ಗ್ರಹಿಕೆಯೇ ಸುಸೂತ್ರ ವಾದ ಜೀವಾನಾಧಾರಕ್ಕೆ ನಾಂದಿ

ವಿಶ್ವ ಕೇಂದ್ರೀಕೃತ ಪ್ರಚಲಿತ ಚಿಹ್ನೆ

ಚಿತ್ರ–2

ANSIPRD

### 3.3 ಕೇರ್ (care) ಜೀವನಾಧರ ಚೌಕಟ್ಟು :–

ಕೇರ್ ವಿನ್ಯಾಸ ಜೀವನಾಧರ ಚೌಕಟ್ಟಿನಲ್ಲಿ ಪ್ರಮುಖವಾಗಿ ಮೂರು ಅಂಶಗಳನ್ನು ಗಮನಿಸಬೇಕು. ಮೊದಲನೆಯ ದಾಗಿ ಇದು ಕೇರ್ ಕಾರ್ಯಕ್ರಮಗಳ ಗುಣಮಟ್ಟವನ್ನು ಉತ್ತಮಪಡಿಸುವ ಉದ್ದೇಶದಿಂದ ವಿನ್ಯಾಸಗೊಳಿಸಲಾಗಿದೆ.

ಉದಾ:– ಈ ಚಿತ್ರದ ದಕ್ಷಿಣ ಮತ್ತು ಭಾವನೆಗಳಿಗೆ ಸಂಬಂಧಿಸಿದ ಪ್ರಚಲಿತ ಪರಿಶ್ರಮಗಳನ್ನು ಉತ್ತಮಪಡಿಸುವ ಕಾರ್ಯಕ್ರಮದ ಕ್ಷಮತೆಯನ್ನು ವೃದ್ದಿಪಡಿಸುವುದನ್ನು ಪ್ರತಿಬಿಂಬಿಸುತ್ತದೆ. ವಿವಿಧತೆಯ ಈ ಚಿತ್ರವನ್ನು ಕೇಂದ್ರೀಕೃತ ವಿಭಾಗೀಯ/ ಪ್ರಾಂತೀಯ ವಿನ್ಯಾಸವಾಗಿ ಜನವರಿ 2000ರಲ್ಲಿ ಹೊರತರಲಾಯಿತು.

ಇದನ್ನು ವಿಭಾಗೀಯ ವಾರ್ಷಿಕ ಕ್ರಿಯಾ ಯೋಜನೆಯ ತಯಾರಿಕೆ ಕಾರ್ಯಕ್ರಮದಲ್ಲಿ ಈ ವಿನ್ಯಾಸದ ಮಾದರಿಯನ್ನು ಬಳಸಿಕೊಳ್ಳಲಾಗುತ್ತದೆ. ಇದರಿಂದಾಗಿ ಕಛೇರಿಗಳು ಕಾರ್ಯರೂಪಕ್ಕೆ ತರುವ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮ/ ಕೆಲಸಗಳನ್ನು ಈ ಚೌಕಟ್ಟನ್ನು ಕೇಂದ್ರೀಕರಿಸಿ ತಯಾರಿಸಲಾಗುತ್ತದೆ.

ಈ ಚೌಕಟ್ಟನ ವಿನ್ಯಾಸದಲ್ಲಿ ಗಮನಿಸಬೇಕಾದ ಎರಡನೆ ಅಂಶವೆಂದರೆ, ಕೇರ್ ಇದನ್ನು ಜೀವನಾಧರ ಭದ್ರತೆ ಚೌಕಟ್ಟಿನಡಿ ಕಾರ್ಯರೂಪಕ್ಕೆ ತಂದಿದ್ದರೂ ಕೂಡ ಇದೊಂದು ಸ್ವಾಭಾವಿಕವಾಗಿ ಅಗತ್ಯಬಿರುವ ಚೌಕಟ್ಟಾಗಿರುವುದಿಲ್ಲ. ಪ್ರಮುಖವಾಗಿ ಬೇರೆ ಬೇರೆ ಕಾಲ್ಪನಿಕ ಮಾರ್ಗೋಪಾಯಗಳನ್ನು ಈ ಚೌಕಟ್ಟಿನಲ್ಲಿ ಕಾರ್ಯತಹ ಬಳಸಿಕೊಳ್ಳಬಹುದು. ಇದನ್ನು ಭಾಗವಹಿಸುವಿಕೆ, ಪಾಲುದಾರಿಕೆ, ವೈಯಕ್ತಿಕ ಮತ್ತು ಸಾಮಾಜಿಕ ಸಶಕ್ತೀಕರಣಗಳನ್ನು ಒಳಗೊಂಡಿರುವ ಚಿತ್ರದ ಎರಡನೇ ವೃತ್ತದಲ್ಲಿ ಭಾಗಶಃ ತೋರಿಸಲಾಗಿದೆ. ಈ ವಿಭಾಗದಲ್ಲಿ ಜೀವನಾಧರ ಚೌಕಟ್ಟಿನಡಿಯಲ್ಲಿ ತೆಗೆದುಕೊಳ್ಳುವ ಎಲ್ಲಾ ಕಾರ್ಯಕ್ರಮಗಳಿಗೆ ಹೆಚ್ಚು ಒತ್ತನ್ನು ಕೊಡಲಾಗಿದೆ. ಇದಕ್ಕೆ ತಮ್ಮದೆ ಆದ ವಿಧಾನಗಳನ್ನು ಮತ್ತು ಕಲ್ಪನೆಗಳನ್ನು ವಿನ್ಯಾಸಕ್ಕೆ ಅಳವಡಿಸಿಕೊಳ್ಳಬಹುದಾಗಿರುತ್ತದೆ.

ಅಕ್ಟೋಬರ್ 1999ರಲ್ಲಿ ಇಂಗ್ಲೆಂಡ್‌ನ ಸೆನ್ಸೆಕ್ಸ್‌ನಲ್ಲಿ ನಡೆದ ಒಂದು ಕಾರ್ಯಗಾರದಲ್ಲಿ ಕೇರ್ ಸಂಸ್ಥೆ ವತಿಯಿಂದ ಹೇಗೆ ವೈವಿದ್ಯಮಯವಾಗಿ ವಿಶ್ಲೇಷಣೆಯ ದುರ್ಬಿನುಗಳು ಜೀವನಾಧರ, ಮಾನವ ಹಕ್ಕು, ಅವಲಂಬಿತ ಗುಂಪು ಮತ್ತು ಪಾಲಿಸಿ ವಿಶ್ಲೇಷಣೆಗಳನ್ನು ಚೌಕಟ್ಟಿನಡಿ ಸಂದರ್ಭಕ್ಕನುವಾಗಿ ಅಳವಡಿಸಿಕೊಳ್ಳಬಹುದೆಂದು ತೋರಿಸಿಕೊಟ್ಟಿರುತ್ತಾರೆ. ವಿಸ್ತಾರವಾದ ವಿವಿಧ ಮಾರ್ಗಗಳಲ್ಲಿ ಜೀವನಾಧರದ ಚೌಕಟ್ಟನ್ನು ಉಪಯೋಗಿಸುವುದರಿಂದ ಸಾಂಸ್ಥಿಕ ಮಾದರಿಯಲ್ಲಿ ಆಚರಣೆಗೆ ತರುವದು ಕಷ್ಟ ಸಾಧ್ಯ.

ಇದರಿಂದಾಗಿ ವಿವಿಧ ಸಂಸ್ಥೆಗಳ ನಡುವೆ ಆರೋಗ್ಯಕರವಾದ ಚರ್ಚೆಗಳ ಬೆಳವಣಿಗೆಗೆ ಕಾರಣವಾಗಿದೆ. ಯವಿವಿಧ ಸಂಸ್ಥೆಗಳು ಉಪಯೋಗಿಸುವ ಬೇರೆ ಬೇರೆ ಕ್ರಮ ವಿಧಾನಗಳು ಹಾಗೂ ಉತ್ತಮ ಆಚರಣೆಗಳನ್ನು ಚೌಕಟ್ಟಿನಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಾಗಿದೆ. ಇದರಿಂದಾಗಿ ಸಾಂಘಿಕ ವಿಶ್ಲೇಷಣೆ, ಸಂಯೋಜನೆ, ಕೇಂದ್ರಿಕೃತ ರಣ ನೀತಿ, ಸಮಂಜಸ ಮಾಹಿತಿ ವ್ಯವಸ್ಥೆ ಮತ್ತು ಪ್ರತಿಬಿಂಬಿತ ಆಚರಣೆಯಂತಹ ಉತ್ತಮ ಆಚರಣೆಯನ್ನು ಅಳವಡಿಸಿ ಕೊಳ್ಳಬಹುದಾಗಿದೆ ಮೇಲ್ಕಂಡ ಎಲ್ಲಾ ವಿಷಯಗಳಲ್ಲಿನ ವಿವಿಧ ಅಂಶಗಳು ಚೌಕಟ್ಟಿನಲ್ಲಿ ಪ್ರಮುಖವಾಗಿ ಗೋಚರಿಸುತ್ತದೆ. ಒಂದೇ ಕುಟುಂಬದ ವಿವಿಧ ವೈಯಕ್ತಿಕ ಭಿನ್ನಾಭಿಪ್ರಾಯಗಳು ಹಾಗೂ ಅಸಮ್ಮತಿಗಳನ್ನು ಕುಟುಂಬದ ಸದಸ್ಯರಲ್ಲಿ ಕಾಣಬಹುದು. ಅದೇ ರೀತಿ ವಿಶ್ಲೇಷಣ ಕನ್ನಡಿಯನ್ನು ಸಹ ಚೌಕಟ್ಟಿನಲ್ಲಿ ಅಳವಡಿಸಿ ಅವಲಂಬಿತ ಗುಂಪುಗಳ ದೃಷ್ಟಿಕೋನದ ಆಧಾರದ ಮೇಲೆ ಜೀವನಾಧರದ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸಬಹುದು.

ಸಾಂಸ್ಥಿಕ ಮೌಲ್ಯಮಾಪನ ಮತ್ತು ಮಾನವ ಹಕ್ಕುಗಳ ಸಮಸ್ಯೆಗಳ ಬಗ್ಗೆ ಪರಿಶೀಲಿಸಿ, ಈ ಅಂಶಗಳನ್ನು ಕೂಡ ಚೌಕಟ್ಟಿನಲ್ಲಿ ಅಳವಡಿಸಿಕೊಳ್ಳಬಹುದಾಗಿದೆ.

ಈ ಚೌಕಟ್ಟಿನಲ್ಲಿ ಗಮನಿಸಬೇಕಾದ ಮೂರು ಅಂಶಗಳೆಂದರೆ, ಯೋಜನೆಯು ಅನುಮೋದನೆಯಾಗುವ ಮೊದಲು ಮತ್ತು ನಂತರ ಬೇರೆ ಬೇರೆ ಮೂಲಧಾತುಗಳ ನಡುವೆ ಎಳೆದಾಟ/ ಸಂಘರ್ಷಗಳನ್ನು ಕಾಣಬಹುದಾಗಿದೆ. ಸಂಯೋಜನೆ ಮತ್ತು ಕೇಂದ್ರೀಕೃತ ರಣನೀತಿ ವಿನ್ಯಾಸಕ್ಕೆ ಕಾರಣವಾಗುತ್ತದೆ.

## ಚರ್ಚಿಸಬಹುದಾದ ವಿಷಯಗಳು:–

1. **ಜೀವನಾಧರದ ತಿರಳು ಅಥವಾ ಕೇಂದ್ರಬಿಂದು ಯಾವುದು ?**
2. ಜೀವನಾಧರ ಚೌಕಟ್ಟನ್ನು ಉತ್ತೇಜನಪಡಿಸಲು ಹಾಗೂ ಬಲಪಡಿಸಲು ಬೇಕಾದ ಪ್ರಮುಖ ಅಂಶಗಳು ಯಾವುದು ?

ANSSIRD

## 3.4 ಜೀವನಾಧರ ಚೌಕಟ್ಟು (BASICS):

ಜೀವನಾಧರದ ಪ್ರೇತ್ಸಾಹದ ಚೌಕಟ್ಟನ್ನು ಅರ್ಥೈಸಿಕೊಳ್ಳುವದರಿಂದ ಇದು ಸೂಕ್ತವಾದ ವ್ಮದ್ಯಸ್ಥಿಕೆಯ ಅಂಶವನ್ನು ಗುರುತಿಸುವ ಅಂಶಗಳು ಹಾಗೂ ಸಂಧರ್ಭಕ್ಕನುವಾಗಿ ಮಧ್ಯಸ್ಥಿಕೆ ವಿನ್ಯಾಸವನ್ನು ರೂಪಿಸಲು ಸಹಕಾರಿಯಾಗುತ್ತದೆ. ಈ ಚೌಕಟ್ಟನ್ನು ಜೀವನಾಧರ ಮಧ್ಯಸ್ಥಿಕೆಯಿಂದಾಗುವ ಪರಿಣಾಮಗಳ ಮೌಲ್ಯಮಾಪನ ಮಾಡಲು ಸಹಕಾರಿಯಾಗುತ್ತದೆ.

ಜೀವನಾಧರವು ಅನೇಕ ಆರ್ಥಿಕ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ. ಇದು ಯಾವಾಗಲು ಒಂದು ಸಂಧರ್ಭಕ್ಕನುವಾಗಿ ಕಾರ್ಯಗತಗೊಳ್ಳುತ್ತದೆ. ಈ ಪ್ರಕರಣದಲ್ಲಿ ಕೆಲವು ಬಾಹ್ಯ ಪ್ರಕರಣಗಳಾಗಿರುತ್ತದೆ. ಹಾಗೂ ಅಂತರಿಕ ಪ್ರಕರಣಗಳಾಗಿರುತ್ತದೆ. ಇದನ್ನು ಉತ್ತಮವಾಗಿ ಅರ್ಥೈಸಿಕೊಳ್ಳಲು 1990ರಲ್ಲಿ ವಿನ್ಯಾಸಗೊಳಿಸಿದ ಫೋರ್ಟರ್ ರವರು ವಿನ್ಯಾಸಗೊಳಿಸಿದ ಡೈಮಂಡ್ ಚೌಕಟ್ಟಿನಲ್ಲಿ ಉತ್ತಮವಾಗಿ ಅರ್ಥೈಸಿಕೊಳ್ಳಬಹುದು. ಇದಲದೆ ಇದರಲ್ಲಿ 2 ಅಚಿತರಿಕ ಪ್ರಕರಣಗಳನ್ನು ಕೂಡ ಒಳಗೊಂಡಿರುತ್ತದೆ. ಇವು ಜೀವನಾಧರದ ವ್ಮಧ್ಯಸ್ಥಿಕೆಯನ್ನು ಪರಿಶೀಲಿಸುವಾಗ ಬಹಳ ಪ್ರಾಮುಖ್ಯಕತೆಯನ್ನು ವಹಿಸುತ್ತದೆ. ಅವು ಯಾವುದೆಂದರೆ ಅನುಷ್ಠಾನಗೊಳಿಸುವ ಸಂಸ್ಥೆ ಮತ್ತು ಜೀವನಾಧರ ಉತ್ತೇಜಿಸಬೇಕಾದ ಕುಟುಂಬಗಳು.

ANS SIRD

# ಅಧ್ಯಾಯ–4

## ಜೀವನಾಧಾರ ಚಟುವಟಿಕೆಯಲ್ಲಿ ಮಧ್ಯಸ್ತಿಕೆ

### ಜೀವನಾಧಾರ ಮಧ್ಯಸ್ತಿಕೆ ರೂಪಿಸುವ ಆಯ್ಕೆಗಳು

ಜೀವನಾಧಾರ ಚಟುವಟಿಕೆಯನ್ನು ನಾವು ಅರ್ಥೈಸಿಕೊಂಡಿರುವಂತೆ ಅಂತರಿಕ ಮತ್ತು ಬಾಹ್ಯ ಸಂದರ್ಭಗಳಲ್ಲಿ ಯಾವುದರ ಪಾತ್ರ ಹೆಚ್ಚು ಎಂಬುದನ್ನು ತಿಳಿದುಕೊಂಡಾಗ ಮಾತ್ರ ಇನ್ನೂ ಹೆಚ್ಚಾಗಿ ಮಧ್ಯಸ್ತಿಕೆ ವಿನ್ಯಾಸ ಸ್ವರೂಪ ಇವುಗಳ ಬಗ್ಗೆ ಆಳವಾಗಿ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಅವುಗಳಲ್ಲಿ ಮೂರು ಮುಖ್ಯವಾದ ಸಾಧನಗಳಿದ್ದು, ಅವುಗಳನ್ನು ಅಭ್ಯಾಸಿಸುವ ಮುಖೇನ ಅದು ಜೀವನಾಧಾರ ಮಧ್ಯಸ್ತಿಕೆಯನ್ನು ತಿಳಿಸಲು ಸಹಾಯಕವಾಗುತ್ತದೆ.




### ಜೀವನ ನಿರೂಪಣೆ ಮಧ್ಯಸ್ತಿಕೆಯ ಮೂರು ಸಾಧನಗಳು

### 4.1 ಗುರಿಗಳನ್ನು ರೂಪಿಸುವುದು:–

ಜೀವನಾಧಾರ ಗುರಿಗಳನ್ನು ರೂಪಿಸಲು ಬೇರೆ ಬೇರೆ ಮಾರ್ಗಗಳಲ್ಲಿ ಹೆಚ್ಚಾಗಿ ಕಂಡು ಬಂದರೂ ಅವುಗಳಲ್ಲಿ ಮುಖ್ಯವಾದವುಗಳೆಂದರೆ.

- ಉತ್ಪಾದನೆಯಲ್ಲಿ ಹೆಚ್ಚಳ
- ಉತ್ಪಾದನೆಗಳ ಉತ್ಪನ್ನ ಬೆಲೆಗಳಲ್ಲಿ ಹೆಚ್ಚಳ
- ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡುವುದು.
- ಶ್ರಮವನ್ನು ಕಡಿಮೆ ಮಾಡುವುದು/ಅನಿರೀಕ್ಷಿತ ನಷ್ಟ ಕಡಿಮೆ ಮಾಡುವುದು.

ANS SIRD

ಇವುಗಳಲ್ಲಿ ಉತ್ತಮವಾದದ್ದನ್ನು ಆಯ್ಕೆ ಮಾಡಿಕೊಳ್ಳಬೇಕಾದರೆ ನಮ್ಮಲ್ಲಿ ಮೇಲಿನ ಯಾವುದಾದರು ಒಂದು ಅಥವಾ ಒಂದಕ್ಕಿಂತ ಜಾಸ್ತಿಯಾದ ಅಂಶವನ್ನು ಆಯ್ಕೆಮಾಡಿಕೊಳ್ಳುವ ಬಗ್ಗೆ ಸ್ಪಷ್ತೆ ಇರಬೇಕು. ಆಗ ಗುರಿಯ/ ವಸ್ತುವಿನ ಮಧ್ಯಸ್ತಿಕೆಯನ್ನು ನಿರ್ಧರಿಸಲಾಗುತ್ತದೆ.

ಸರ್ಕಾರವು ಆಹಾರ ಧಾನ್ಯಗಳ ಉತ್ಪಾದನೆಯ ಹೆಚ್ಚಳಕ್ಕೋಸ್ಕರ ರಸಗೊಬ್ಬರ, ಕೀಟನಾಶಕಗಳು, ನೀರಾವರಿ ಸೌಲಭ್ಯಗಳು ಮತ್ತು ಅತ್ಯಾಧುನಿಕ ವ್ಯವಸಾಯದ ಸಲಕರಣೆಗಳಾದ ಟ್ರಾಕ್ಟರ್, ಮುಂತಾದವುಗಳನ್ನು ಸರ್ಕಾರವು ರಿಯಾಯಿತಿ ದರದಲ್ಲಿ ರೈತರಿಗೆ ಸೌಲಭ್ಯಗಳನ್ನು ಒದಗಿಸಿ, ದೇಶದಲ್ಲಿ ಹಸಿರು ಕ್ರಾಂತಿಯನ್ನು ಉಂಟು ಮಾಡಿತು. ಇಲ್ಲಿ ಸರ್ಕಾರದ ಮಧ್ಯಸ್ತಿಕೆಯ ಮುಖ್ಯ ಗುರಿ ಕೃಷಿ ಕ್ಷೇತ್ರದಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಗಣನೀಯ ಹೆಚ್ಚಳ ಮಾಡುವುದೇ ಆಗಿದೆ.

ಅದೇ ರೀತಿಯ ಮಧ್ಯಸ್ತಿಕೆಗಳೆಂದರೆ ಂಒಗಾಐ ಸಂಸ್ಥೆಯ ಮಧ್ಯ ಪ್ರವೇಶ ಮುಖೇನ ಹಾಲಿನ ವಸ್ತುಗಳಿಗೆ ಮತ್ತು ಹಾಲು ಉತ್ಪಾದಕರ ಉತ್ಪನ್ನಗಳಿಗೆ ಅತ್ಯುತ್ತಮ ಬೆಲೆ ಒದಗಿಸಿ ಕೊಡುವುದೇ ಆಗಿದೆ. ಅದೇ ರೀತಿ ಸರ್ಕಾರವು ಕರಕುಶಲ ಮಾರುಕಟ್ಟೆ ನಿಗಮಗಳ ಸ್ಥಾಪನೆ ಮುಖೇನ ಸಂಪ್ರಾದಾಯಿಕ ಕರಕುಶಲ ಉತ್ಪನ್ನಗಳ ರಕ್ಷಣೆ ಮತ್ತು ಉತ್ಪಾದಕರ ಹಿತ ಕಾಯುವುದೇ ಆಗಿದೆ. ದೊಡ್ಡ ದೊಡ್ಡ ವಿವಿದ್ದೋದ್ದೇಶ ಕೃಷಿ ಸಹಕಾರ ಸಂಘಗಳ ಸ್ಥಾಪನೆ ಮುಖೇನ [LAMPS] ಮುಖೇನ ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆ ಸಾಲ ಮತ್ತಿತರೆ ಒದಗಿಸುವುದೇ ಆಗಿದೆ.

ಇತರೆ ಪ್ರಯತ್ನಗಳೆಂದರೆ ಕೊಳವೆ ಬಾವಿ ಉಪಯೋಗಿಸುವಂತಹ ಸಂಘಗಳ ಒಟ್ಟಾರೆ ಕೊಂಡುಕೊಳ್ಳುವಿಕೆ, ಸೇರಿಸುವಿಕೆ, ಮತ್ತು ಹಂಚುವಿಕೆ. ಅಲ್ಲದೆ ದಿನನಿತ್ಯದ ಅಗತ್ಯ ವಸ್ತುಗಳನ್ನು ಗ್ರಾಹಕರಿಗೆ ಪೂರೈಕೆ ಮಾಡುವ ದೆಸೆಯಲ್ಲಿ ಉತ್ಪನ್ನಗಳ ಉತ್ಪಾದಕರುಗಳನ್ನು ಒಗ್ಗೂಡಿಸಿ ಸ್ವಸಹಾಯ ಸಂಘ ಸ್ಥಾಪನೆ ಮುಖೇನ ಅನುಕೂಲ ಕಲ್ಪಿಸುವುದಾಗಿದೆ. ಈ ದೆಸೆಯಲ್ಲಿ ಜಾಗೃತಿ ಮೊಬೈಲ್ ಕೇಂದ್ರ ಅಥವಾ ಆದರ್ಶ ಕ್ಷೇಮಾಭಿವೃದ್ಧಿ ಸಂಘಗಳು ಜೀವನಾಧಾರ ಚಟುವಟಿಕೆಗಳನ್ನು ಉತ್ತೇಜಿಸಿ ಉತ್ಪಾದಕರಿಗೆ ಆದಾಯವನ್ನು ಹೆಚ್ಚು ಮಾಡುವುದರ ಜೊತೆಗೆ ಗ್ರಾಹಕರಿಗೂ ಉತ್ತಮ ಗುಣಮಟ್ಟದ ಪದಾರ್ಥಗಳನ್ನು ಕಡಿಮೆ ಬೆಲೆಯಲ್ಲಿ ತಲುಪಿಸುವುದೇ ಆಗಿದೆ. ಇದೇ ಉದ್ದೇಶದಿಂದ ಹಲವಾರು ರೈತ ಸಹಕಾರ ಸಂಘಗಳು, ಪ್ರಸಿದ್ಧ ಮುಲ್ಕನೂರು ಸಹಕಾರ ಸಂಘಗಳು, ಶ್ರೀಧರ್‌ಪುರ್ ಸಹಕಾರ ಸಂಘಗಳು, ಇದೇ ನಿರ್ದಿಷ್ಟ ಗುರಿಗಳನ್ನು ಇಟ್ಟುಕೊಂಡು ಕೆಲಸ ನಿರ್ವಹಿಸುತ್ತಿರುವುದನ್ನು ಕಾಣಬಹುದು..

ಉತ್ಪಾದಕರು ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಪಡೆದುಕೊಳ್ಳಲು ಉತ್ಪಾದಕರುಗಳೆಲ್ಲಾ ಒಗ್ಗೂಡಿ, ಉತ್ಪಾದಕರುಗಳ ಸಂಘಗಳನ್ನು ಸ್ಥಾಪನೆ ಮಾಡಿಕೊಂಡಿರುವುದರನ್ನು ಕಾಣಬಹುದು. ಅದೇ ರೀತಿ ಕಂಪನಿಗಳು, ಸಹಕಾರ ಸಂಘಗಳು, ಇನ್ನಿತರ ಸಂಸ್ಥೆಗಳನ್ನು ಸ್ಥಾಪಿಸಿಕೊಂಡಿರುತ್ತಾರೆ. ಇದರಿಂದ ಅವರ ಹೂಡಿಕೆ ವ್ಯವಹಾರವನ್ನು ಕಾನೂನಿನ ಮುಖೇನ ಸ್ಥಾಪಿಸಿಕೊಳ್ಳುವುದರ ಜೊತೆಗೆ ಎಲ್ಲಾ ರೀತಿಯಲ್ಲೂ ಸ್ಪರ್ದೆಯನ್ನು ಎದುರಿಸಲು

ANS SIRD

ಸಿದ್ಧಗೊಳಿಸುವುದೇ ಆಗಿದೆ. ಇವೆಲ್ಲವುಗಳ ಮೂಲ ಉದ್ದೇಶ ಮಾರುಕಟ್ಟೆಯಲ್ಲಿ ಉಂಟಾಗುವ ಬೆಲೆಗಳ ಏರಿಕೆ/ಇಳಿಕೆಗಳ ನಷ್ಟಗಳಿಂದ ಹೊರ ಬರುವುದೇ ಆಗಿದೆ.

ರವೀಂದ್ರನಾಥ್ ಠಾಗೋರ್ ರವರು ಶ್ರೀನಿಕೇತನ್ ಸಂಸ್ಥೆ ಸ್ಥಾಪಿಸುವ ಮುಖೇನ ಮಾರುಕಟ್ಟೆಯ ಅಭಿರುಚಿಗೆ ತಕ್ಕಂತೆ ಗುಣಮಟ್ಟ ಹಾಗೂ ಹೊಸ ವಿನ್ಯಾಸದ ನೇಯ್ಗೆ ಬಟ್ಟೆಗಳನ್ನು ಮಾರುಕಟ್ಟೆಗೆ ಪೂರೈಕೆ ಮಾಡುವುದರ ಜೊತೆಗೆ ಬಟ್ಟೆ ನೇಯುವ ನುರಿತ ನೈಪುಣ್ಯ ಹೊಂದಿರುವ ಉತ್ಪಾದಕರುಗಳನ್ನು ಒಗ್ಗೂಡಿಸಿ ಅವರ ಕೌಶಲ್ಯಾಭಿವೃದ್ಧಿ ಹೆಚ್ಚು ಮಾಡುವುದರ ಜೊತೆಗೆ ಉತ್ಪನ್ನಗಳಿಗೆ ಉತ್ತಮ ಬೆಲೆಗಳನ್ನು ಒದಗಿಸುವ ಉದ್ದೇಶವೇ ಆಗಿದೆ..

ಅದೇ ರೀತಿಯಾಗಿ ಜೀವನಾಧಾರ ಚಟುವಟಿಕೆ ಮುಖೇನ ಉತ್ಪಾದಿಸುವ ಸಂದರ್ಭದಲ್ಲಿ ಉಂಟಾಗುವ ನಷ್ಟ ಮತ್ತು ಅವರ ಆದಾಯದಲ್ಲಿ ಉಂಟಾಗುವ ಏರಿಳಿತ ಮತ್ತು ಉತ್ಪಾದನಾ ಶ್ರಮವನ್ನು ಕಡಿಮೆ ಮಾಡಲು BASIX, SEWA ಮುಂತಾದ ವಿಮೆ ಕಂಪನಿಗಳು ಅಸ್ತಿತ್ವಕ್ಕೆ ಬಂದಿರುತ್ತದೆ. ಇದೇ ಉದ್ದೇಶದಿಂದ ಖಾಸಗಿ ವಿಮೆ ಕಂಪನಿಗಳು ಸಹ ಅಸ್ತಿತ್ವಕ್ಕೆ ಬಂದಿರುತ್ತದೆ, ವಿಮಾ ಸಂಸ್ಥೆಗಳು ಕೇವಲ ನಷ್ಟವನ್ನು ತುಂಬಿ ಕೊಡುವುದರ ಜೊತೆಗೆ ಜಾನುವಾರುಗಳಿಗೆ ಲಸಿಕೆಗಳನ್ನು ಹಾಕುವ ಮುಖೇನ ರೋಗ ಮುಕ್ತವಾಗಿ ಮಾಡುವಂತಹುದು, ಸರಿಯಾದ ಮಣ್ಣು ಪರೀಕ್ಷೆ ಮುಖೇನ ರೈತರಿಗೆ ವಾತಾವರಣಕ್ಕೆ ಹೊಂದಿಕೊಳ್ಳುವ ಬೆಳೆಗಳ ಪರಿಚಯ ಮಾಡಿಸಿ ಬೆಳೆಗಳಿಂದಾಗುವ ನಷ್ಟವನ್ನು ತಪ್ಪಿಸುವುದಾಗಿದೆ. ಇಂತಹ ವಿಧಾನಗಳನ್ನು ಈ ಪಟ್ಟಿ ಸಂಘಟನೆಗಳು ರೂಪಿಸುತ್ತವೆ.

ANS SIRD

## 4.2 ಮಧ್ಯಸ್ತಿಕೆಯ ಸ್ವರೂಪ:–

**ಈ ಜೀವನ ಮಧ್ಯಸ್ತಿಕೆಗೆ ಮುಖ್ಯವಾದ ನಾಲ್ಕು ದಿಕ್ಕುಗಳಿವೆ.**

ಮಾರುಕಟ್ಟೆಯ ಬೇಡಿಕೆ ಸ್ಥಿತಿಗತಿಗಳಿಗೆ ಅನೇಕ ಮುಖಗಳಿರುತ್ತವೆ. ಸ್ಥಳೀಯವಾಗಿ ಜನರು ಕೈಗೆತ್ತಿಕೊಳ್ಳುವ ಆರ್ಥಿಕ ಚಟುವಟಿಕೆಗಳು ಸ್ಥಳೀಯ ಬೇಡಿಕೆಯ ಪರಿಸ್ಥಿತಿಗೆ ಸಹಜವಾಗಿ ರೂಪಿತವಾಗಿರುತ್ತದೆ. ಹಿಂದೆ ನಮೂದಿಸಿದ ವ್ಯವಹಾರಗಳನ್ನು ಗುರುತಿಸುವ ಕಾರ್ಯದಲ್ಲಿ ಕೊಟ್ಟಿರುವ, ಸ್ಥಳೀಯರು ಭಾಗವಹಿಸುತ್ತಿರುವ ವ್ಯಾಪರ ವ್ಯವಹಾರಗಳ ಪಟ್ಟಿಯನ್ನು ಈಗ ಆ ಸ್ಥಳದ ಬೇಡಿಕೆಗಳಿಗೆ ಅನುಗುಣವಾಗಿ ವಿಶ್ಲೇಷಣೆ ಮಾಡಬೇಕಾಗುತ್ತದೆ.

**8.1 ಮಾರುಕಟ್ಟೆ ಅಂದಾಜು ಮಾಡುವಿಕೆ:** ಜೀವನ ನಿರ್ವಹಣೆಯ ಅಂದಾಜು ಅಥವಾ ಗಮನಿಸಬಹುದಾದ ಜೀವನಾಧಾರವಾದ ಆರ್ಥಿಕ ಚಟುವಟಿಕೆಯನ್ನು ಮಾರುಕಟ್ಟೆಯಲ್ಲಿ ಮಾತ್ರ ಅಂದಾಂಜು ಮಾಡಲು ಸಾಧ್ಯವಾಗುತ್ತದೆ. ಜೀವನಾಧಾರಕ್ಕೆ ಅವಶ್ಯಕವಾದ ಆರ್ಥಿಕ ಚಟುಟಿಕೆಗಳಲ್ಲಿ ಉತ್ಪಾದನೆಯಾದ ವಸ್ತುಗಳು ಮಾರಾಟವಾಗುವ ಸ್ಥಳಕ್ಕೆ ಮಾರುಕಟ್ಟೆ ಎಂದು ಕರೆಯುತ್ತಾರೆ. ಉತ್ಪನ್ನಗಳು ಅವು ಪದಾರ್ಥಗಳಾಗಿರಬಹುದು ಅಥವಾ ಸೇವೆಯ ಭಾಗವಾಗಿರಲೂಬಹುದು. ಉದಾಹರಣೆಗೆ ಕಮ್ಮಾರ, ಕುಂಬಾರ ಮತ್ತು ಬಡಗಿ ಆಗಿರಬಹುದು. ಆದ್ದರಿಂದ ಪ್ರಾಯೋಜಕನಾದವನು ಮಾರುಕಟ್ಟೆಯ ಸರಿಯಾದ ಅಂದಾಜನ್ನು ಮಾಡಬೇಕಾಗುತ್ತದೆ. ಈ ಕೆಳಗಿನ ಅಂಶಗಳಿಂದ ಅಭ್ಯಾಸಿಗಳ ಮಾರುಕಟ್ಟೆಯ ಅಂದಾಜು ಮಾಡುವ ಕಾರ್ಯ ಸುಲಭವಾಗುತ್ತದೆ

- **ನಡೆ ಮತ್ತು ಗುರುತುಹಾಕು:** ವ್ಯವಹಾರಗಳನ್ನು ಗಮನಿಸಿ ಅವುಗಳನ್ನು ದಾಖಲಿಸಲು ಅಭ್ಯಾಸಿಯು ಮಾರುಕಟ್ಟೆ ಸ್ಥಳದ ಪರ್ಯಟನೆ ಮಾಡಬೇಕಾಗುತ್ತದೆ. ಮಾರುಕಟ್ಟೆಯೆಂದರೆ ಯಾವುದಾದರೂ ಸ್ಥಳೀಯ ಸಂತೆ ಕೂಡ ಆಗಬಹುದು. ಈ ಕಾರ್ಯವನ್ನು ವಾರಕ್ಕೆ ಒಂದು ಬಾರಿ ಅಥವಾ ಎರಡು ಬಾರಿ ಮಾಡಬೇಕಾಗುತ್ತದೆ. ಆರ್ಥಿಕ ವ್ಯವಹಾರದ ಸರಿಯಾದ ಕಾಲಂನಲ್ಲಿ ಗುರುತುಹಾಕುವ ಮುಖಾಂತರ, ಅಭ್ಯಾಸಿಯು ಆರ್ಥಿಕ ವ್ಯವಹಾರಗಳನ್ನು ದಾಖಲಿಸುತ್ತಾನೆ ಮತ್ತು ಆತನಿಗೆ ಮಾಹಿತಿ ಕಲೆಹಾಕುವುದು ಸಾಧ್ಯವಾಗುತ್ತದೆ. ಹೀಗಾಗಿ ಯಾವ ಕಲಂಗೆ ಅತಿಹೆಚ್ಚು ಗುರುತುಗಳು ಮೂಡಿರುತ್ತವೆಯೋ ಆ ಆರ್ಥಿಕ ಚಟುವಟಿಕೆಯನ್ನು ಆ ಕ್ಷೇತ್ರದ ಪ್ರಮುಖ ಚಟುಟಿಕೆಯೆಂದು ಪರಿಗಣಿಸಬೇಕು.

- **ವ್ಯಾಪಾರಸ್ಥರಿಂದ ಮಾಹಿತಿ ಸಂಗ್ರಹಿಕೆ:** ವ್ಯಾಪಾರಸ್ಥರು ಅಕ್ಕ ಪಕ್ಕದ ಮೂಲಗಳಿಂದ ಮಾರುಕಟ್ಟೆಗೆ ಬರುವ ಪದಾರ್ಥಗಳನ್ನು ಕೊಳ್ಳುತ್ತಾರೆ ಮತ್ತು ಸ್ಥಳೀಯ ಜನರು ಅಪೇಕ್ಷಿಪಡುವ ವಸ್ತುಗಳನ್ನು ಮತ್ತು ಸೇವೆಗಳನ್ನು ಮಾರಾಟ ಮಾಡುತ್ತಾರೆ. ಈ ವ್ಯಾಪಾರಸ್ಥರ ಜೊತೆ ಮಾತನಾಡುತ್ತಾ, ಅವರಿಂದ ದೊರೆತ ಮಾಹಿತಿಗಳನ್ನು ಆಧರಿಸಿ ನಮ್ಮ ಅಭ್ಯಾಸಿಗಳು ವಾರದ ಮಾರಾಟ ಮತ್ತು ಖರೀದಿಯ ಗಾತ್ರವನ್ನು ಅಂದಾಜಿಸುತ್ತಾರೆ. ಈ ದತ್ತಾಂಶವು ಮಾರುಕಟ್ಟೆಯ ವಾರ್ಷಿಕ ವಹಿವಾಟನ್ನು , ಕಾಲಕಾಲದ ಸ್ಥಳೀಯ ಉತ್ಪನ್ನಗಳಿಗಿರುವ ಬೇಡಿಕೆ ಅಥವಾ ಸ್ಥಳೀಯರಿಗೆ ಅಗತ್ಯವಾಗುವ ವಸ್ತುಗಳನ್ನು ಮತ್ತು ಸೇವೆಗಳನ್ನು ಗುರುತಿಸಲು ಸಹಾಯ ಮಾಡುತ್ತದೆ.

- **ಸ್ಥಳೀಯ ಮಾರುಕಟ್ಟೆಯಲ್ಲಿನ ನಿಯಮಗಳನ್ನು ಅರ್ಥಮಾಡಿಕೊಳ್ಳುವುದು:** ಪ್ರತಿಯೊಂದು ವ್ಯವಹಾರಿಕ ಚಟುವಟಿಕೆಯೂ ಕೆಲವೊಂದು ರೀತಿ ನೀತಿಗಳನ್ನು ಷರತ್ತು ಮತ್ತು ನಿಯಮಗಳನ್ನು ಅನುಸರಿಸಬೇಕಾಗುತ್ತದೆ. ಉದಾ: ವಸ್ತುಗಳನ್ನು ಮಾರುಕಟ್ಟೆಗೆ ತರಲು ಕೊಡಬೇಕಾದ



ANSSIRD

ಶುಲ್ಕ. ಕೆಲವು ವಸ್ತುಗಳು ಈ ಶುಲ್ಕಗಳಿಂದ ಮುಕ್ತವಾಗಿದ್ದರೆ ಮತ್ತೂ ಕೆಲವು ವಸ್ತುಗಳ ಶುಲ್ಕದಲ್ಲಿ ಬೇರೆ ಬೇರೆ ವಿಧಾನಗಳಿರುತ್ತದೆ. ಹರಾಜಿನಲ್ಲಿ ಮಧ್ಯಸ್ಥಿಕೆ ವಹಿಸುವ ಅಥವಾ ಗಿರಾಕಿಗಳನ್ನು ಹೊಂದಿಸಿ ಕೊಡುವ ಮಧ್ಯವರ್ತಿಗಳಿಗೆ ಕೂಡ ಶುಲ್ಕ ನೀಡಬೇಕಾಗಬಹುದು.

ಮಾರುಕಟ್ಟೆಯ ಹಣಕಾಸು ವ್ಯವಹಾರಗಳು ವಾರ ಅಥವಾ ಹದಿನೈದು ದಿನಗಳಿಗೊಮ್ಮೆ ಚುಕ್ತವಾಗುವುದರಿಂದ, ವಸ್ತುಗಳನ್ನು ಉತ್ಪಾದಿಸಿದ ಉತ್ಪಾದಕರು ತಮ್ಮ ವಸ್ತುಗಳಿಗೆ ತಕ್ಷಣ ನಗದು ಹಣವನ್ನು ಅಪೇಕ್ಷಿಪಟ್ಟರೆ, ಅವರು ಬೆಲೆಯಲ್ಲಿ ಕೆಲವೊಂದು ರಿಯಾಯಿತಿಯನ್ನು ನೀಡಬೇಕಾಗುತ್ತದೆ. ಅದೇ ರೀತಿಯಲ್ಲಿ ಸರಕಾರ ಧಾನ್ಯಗಳನ್ನು ಬೆಳೆದ ವ್ಯಕ್ತಿಗಳಿಂದ ಖರೀದಿಸಿದರೆ, ಅವರು ತಮ್ಮದೇ ಆದ ಆಹಾರ ಸಂಗ್ರಹಿಸುವ ನೀತಿ ನಿಯಮಗಳನ್ನು ಅನುಸರಿಸುವ ಕಾರಣದಿಂದ ಕೆಲವೊಮ್ಮೆ ಹಣ ಪಾವತಿ ತಡವಾಗಬಹುದು. ಹಾಗೆಯೇ ಪದಾರ್ಥಗಳನ್ನು ಖರೀದಿಸುವ ಸಹಕಾರ ಸೊಸೈಟಿಗಳಿಗೂ ತಮ್ಮದೇ ಆದ ನೀತಿ ನಿಯಮಗಳು ಇರುತ್ತದೆ. ಹೀಗಾಗಿ ಜೀವನ ನಿರ್ವಹಣೆ ಕಾರ್ಯಕ್ರಮದ ಪ್ರಯೋಜಕರು ಈ ಅಂಶಗಳನ್ನು ನೆನಪಿನಲ್ಲಿರಿಸಿಕೊಂಡಿರಬೇಕು ಮತ್ತು ಈ ರೀತಿಯ ನಿಯಮಾವಳಿಗಳ ಆಧಾರದಮೇಲೆ ನಡೆಯುವ ವ್ಯವಹಾರಗಳಿಗೆ ಹೊಂದಿಕೊಳ್ಳಲು ಕ್ರಿಯಾಶೀಲ ಸಂಪರ್ಕಗಳನ್ನು ಎಲ್ಲಾ ಸಂಬಂಧಿಸಿದ ಸಂಸ್ಥೆಗಳೊಡನೆ ಏರ್ಪಡಿಸಿರಬೇಕು.

- **ಮಾರುಕಟ್ಟೆಯ ಬೆಂಬಲ ವ್ಯವಸ್ಥೆಗಳು:** ಯಾವುದೇ ವ್ಯವಹಾರ ಅಥವಾ ವ್ಯವಹಾರಿಕ ಚಟುವಟಿಕೆಯಲ್ಲಿ ಬೆಂಬಲ ವ್ಯವಸ್ಥೆಗಳು ಬಹಳ ಮುಖ್ಯವಾದ ಪಾತ್ರ ನಿರ್ವಹಿಸುತ್ತದೆ. ಒಂದು ಪಕ್ಷ ಇವುಗಳು ಸಮರ್ಪಕ ರೀತಿಯಲ್ಲಿ ಇರದಿದ್ದರೆ, ಜೀವನ ನಿರ್ವಹಣೆ ಚಟುವಟಿಕೆಗಳನ್ನು ಪ್ರಾಯೋಜಿಸುವಲ್ಲಿ ದೊಡ್ಡ ಕಂದಕಗಳಾಗಲೂಬಹುದು. ಈ ಬೆಂಬಲ ವ್ಯವಸ್ಥೆಗಳ ಇರುವಿಕೆ ಅನೇಕ ಸಂದರ್ಭಗಳಲ್ಲಿ ಜೀವನ ನಿರ್ವಹಣಾ ಕಾರ್ಯಕ್ರಮಕ್ಕೆ ಶಕ್ತಿತುಂಬುತ್ತದೆ. ಪಾಕೇಜಿಂಗ್ ಸಂದರ್ಭದಲ್ಲಿ ನಿರತರಾದ ಕುಶಲ ನೌಕರರು, ಪ್ಯಾಕಿಂಗ್ ಗೆ ಬೇಕಾದ ಸಾಮಗ್ರಿಗಳು, ತೂಕದ ವ್ಯವಸ್ಥೆಗಳು, ಮುಂತಾದ ಇಂತಹ ವ್ಯವಸ್ಥೆಗಳನ್ನೆಲ್ಲಾ ಮಾರುಕಟ್ಟೆಯ ಬೆಂಬಲ ವ್ಯವಸ್ಥೆಗಳೆಂದು ಪರಿಗಣಿಸಲಾಗುತ್ತದೆ.

ಉದಾಹರಣೆಗೆ ಅಜ್ಮೀರದ ಹೂ ಮಾರುಕಟ್ಟೆಯಲ್ಲಿ ಸೆಣಬು ನಾರನ್ನು ಪೂರೈಸುವವ ವ್ಯಕ್ತಿಗಳು, ವೃತ್ತಪತ್ರಿಕೆಗಳನ್ನು ಪೂರೈಸುವವರು, ಮಂಜುಗಡ್ಡೆಯನ್ನು ಪೂರೈಸುವವರು, ಬಿದಿರು ಬುಟ್ಟಿಗಳನ್ನು ಒದಗಿಸುವವರು, ಮತ್ತಿತರ ಸಾಮಗ್ರಿಗಳನ್ನು ಪೂರೈಸುವವರು ಮುಖ್ಯ ವ್ಯವಹಾರಕ್ಕೆ ಬೆಂಬಲವಾಗಿದ್ದಾರೆ. ಅವರು ಪೂರೈಸುವ ಪದಾರ್ಥ ಅಥವಾ ಸೇವೆಗೆ ಅವರಿಗೆ ಹಣ ನೀಡಲಾಗುತ್ತದೆ. ಅದರಂತೆ, ಹರಾಜಾದ ಹೂಗಳು ಬಾಡದಂತೆ, ಹೂವಿಗೆ ಯಾವುದೇ ಹಾನಿಯಾಗದಂತೆ ಕೌಶಲ ಪೂರ್ಣವಾಗಿ ಅವುಗಳನ್ನು ಪ್ಯಾಕ್ ಮಾಡಿ ತಡ ಇಲ್ಲದಂತೆ ಸಮರ್ಪಕವಾಗಿ ಅವು ತಲುಪುವ ಜಾಗಕ್ಕೆ ತಲುಪಿಸುವ ವ್ಯವಸ್ಥೆಮಾಡುವ ಕುಶಲ ಕೆಲಸಗಾರರೂ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರಿಗೆ ಅವರ ಕೆಲಸಕ್ಕೆ ತಕ್ಕಂತೆ ವೇತನ ಸಂದಾಯವಾಗುತ್ತದೆ.

ANSSIRD

**ಈ ಕೆಳಗೆ ವ್ಯಾಪಾರಿಗಳಿಂದ ಮಾಹಿತಿ ಸಂಗ್ರಹಿಸಲು ಅನುಕೂಲವಾಗುವಂತಹ ನಮೂನೆಯನ್ನು ನೀಡಲಾಗಿದೆ.**

**ಪಟ್ಟಿ–1: ಸ್ಥಳೀಯ ಮಾರುಕಟ್ಟೆಯ ಪರಿಸ್ಥಿತಿಯ ಮಾಹಿತಿ ಸಂಗ್ರಹಣೆಯ ಮಾದರಿ ನಮೂನೆ**

| ಮಾರುಕಟ್ಟೆಯಲ್ಲಿ ಮಾರಾಟವಾಗುವ ಪದಾರ್ಥದ ಅಥವಾ ಸೇವೆಯ ಹೆಸರು | ವ್ಯಾಪಾರಿ ಗಳ ಸಂಖ್ಯೆ | ಈ ಸ್ಥಳೀಯ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ತಂದ ಪದಾರ್ಥಗಳು ಸ್ಥಳೀಯವೇ/ ಹೊರಗಿನಿಂದತಂದವೇ | ಹೊರಗೆ ಮಾರಲು ತಂದ ಪದಾರ್ಥಗಳು ಸ್ಥಳೀಯವಾಗಿ | ಒಂದು ದಿವಸಕ್ಕೆ ವ್ಯವಹರಿಸಲ್ಪಟ್ಟ ಪರಿಮಾಣ | ವ್ಯಾವಹಾರಿಕ ಚಟುವಟಿಕೆಗಳ ಕಾಲ ಮಾನ |
|---|---|---|---|---|---|
| ಆಲೂಗೆಡ್ಡೆ | 12 | ಹೌದು | ಹೌದು | 10000 ಕೆಜಿ | ಫೆಬ್ರವರಿ– ಮಾರ್ಚ |
| ಎಲೆ ಕೋಸು | 10 | ಇಲ್ಲ | ಹೌದು | 7000 ಕೆಜಿ | ಜನವರಿ ಮಾರ್ಚ |
| ಟೊಮೆಟೊ | 07 | ಇಲ್ಲ | ಹೌದು | 12000 ಕೆಜಿ | ಜನವರಿ– ಮಾರ್ಚ |

ಮಾರುಕಟ್ಟೆಯ ಮಾಹಿತಿಗಳನ್ನು ಸಂಗ್ರಹಿಸಿದಮೇಲೆ ಮಾರುಕಟ್ಟೆಯಲ್ಲಿ ಮಾರಾಟವಾಗುವ ಸ್ಥಳೀಯ ಉತ್ಪನ್ನಗಳ ಕಾಲಾಮಾನಗಳನ್ನು ದಾಖಲಿಸುವ ಕೆಲಸ ಬಹಳ ಮುಖ್ಯವಾದುದು. ಮನೆಮನೆಗಳಲ್ಲಿ ಸಂಗ್ರಹಿಸಲ್ಪಟ್ಟ ದವಸಧಾನ್ಯಸಂಗ್ರಹಗಳನ್ನು ದಾಖಲಿಸುವ ತಂಡ ಈ ಧವಸಧಾನ್ಯ ಸಂಗ್ರಹ ದತ್ತಾಂಶವನ್ನು ಕ್ರೋಢೀಕರಿಸುವ ಕಾರ್ಯ ಮಾಡುವುದು ಅವಶ್ಯಕ. ಈ ಮಾಹಿತಿ ಉತ್ಪನ್ನಗಳು ಸಿದ್ಧವಾಗಿ ಮಾರುಕಟ್ಟೆಗೆ ಲಭ್ಯವಾಗಿದೆಯೇ ಎಂಬುದನ್ನು ಅರ್ಥೈಸಿಕೊಳ್ಳಲು ಸಹಾಯ ಮಾಡುತ್ತದೆ. ಅಲ್ಲದೆ ಈ ಮಾಹಿತಿ ಸಂಗ್ರಹ ಕಾರ್ಯದ ಸಂದರ್ಭದಲ್ಲಿ ಕಂಡು ಬಂದ ಅಡೆ ತಡೆಗಳು, ಕೆಲವು ಮಾರುಕಟ್ಟೆಯ ಪರಿಸ್ಥಿತಿಗಳ ಮೇಲೆ ಸಂಬಂಧಿಸಿರುತ್ತದೆ. ಇದನ್ನು ಮಾಹಿತಿ ಸಂಗ್ರಹ ತಂಡ ಸರಿಯಾಗಿ ಅರ್ಥಮಾಡಿಕೊಂಡಿರಬೇಕು. ತಂಡದ ಸದಸ್ಯರು, ಮಾರುಕಟ್ಟೆಯ ಕುರಿತು ಇನ್ನೂ ಹೆಚ್ಚಿನ ಮಾಹಿತಿ ಪಡೆಯಲು, ಈ ಅಡೆ ತಡೆಗಳನ್ನು, ವರ್ತಕರು ಮತ್ತು ಮಾರುಕಟ್ಟೆಯಲ್ಲಿ ಕಾರ್ಯ ನಿರ್ವಹಿಸುವ ಇತರೇ ವ್ಯಕ್ತಿಗಳ ಜೊತೆ ಚರ್ಚಿಸಬೇಕು. ಹಾಗೂ

**ಬೇಡಿಕೆ ಪರಿಸ್ಥಿತಿಗಳ ಸರಿಯಾದ ವಿಶ್ಲೇಷಣೆ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರ ನಿಡುವಂತಾಗಬೇಕು.**

ಅ) ಪರಸ್ಥಳಗಳಿಂದ ಮಾರುಕಟ್ಟೆಗೆ ಸರಬರಾಜಾಗುವ ಪ್ರಮುಖ ಉತ್ಪನ್ನಗಳು ಯಾವುವು?
ಆ) ಮಾರುಕಟ್ಟೆಯಲ್ಲಿ ವಿಕ್ರಯವಾಗುವ ಮತ್ತು ಹೊರಗೆ ರಫ್ತಾಗುವ ಸ್ಥಳೀಯವಾಗಿ ಲಭ್ಯವಾಗುವ ಉತ್ಪನ್ನಗಳಾವುವು?
ಇ) ಮಾರುಕಟ್ಟೆಗೆ ಬರುವ ಮತ್ತು ಮಾರುಕಟ್ಟೆಯಿಂದ ಮಾರಾಟವಾಗುವ ಪದಾರ್ಥಗಳ ಒಟ್ಟು ತೂಕವೆಷ್ಟು?
ಈ) ಮಾರುಕಟ್ಟೆಯಲ್ಲಿ ಮಾರಾಟ ಅಥವಾ ಖರೀದಿಯನ್ನು ಪ್ರಭಾವಿಸುವ ಕಾಲಮಾನವೇನಾದರೂ ಇದೆಯೇ ?
ಉ) ಮಾರುಕಟ್ಟೆಯ ಸಾಮಾನ್ಯ ನಿಯಮ ಅಥವಾ ಮಾರಾಟದ ಷರತ್ತುಗಳೇನು?
ಊ) ವ್ಯಾಪಾರ ವ್ಯವಹಾರದ ಚಟುವಟಿಕೆಗಳನ್ನು ಸುಗಮಗೊಳಿಸುವ ಸೇವೆಗಳಾವುವು?
ಋ) ವಿವಿಧ ಕಾಲಮಾನಗಳಲ್ಲಿ ಉಂಟಾಗುವ ಬೆಲೆಯಲ್ಲಿನ ಬದಲಾವಣೆಗಳೇನು?

ಸ್ಥಳೀಯ ಮಾರುಕಟ್ಟೆಯ ಬೇಡಿಕೆ ಸ್ಥಿತಿಗತಿಗಳನ್ನು ಪರಿಶೀಲಿಸುವ ಸಂದರ್ಭದಲ್ಲಿ ಉಪಯೋಗಿಸಲು ಅನುಕೂಲವಾಗವಂತೆ ಮಾರುಕಟ್ಟೆ ಮತ್ತು ಸಂಶೋಧನಾ ತಂಡ–(ಒಂಖಖಿ), ನವದೆಹಲಿ ಇವರು 3ಒ ಎನ್ನುವ

ANSIRD

ವಿಧಾನವನ್ನು ಕಂಡುಹಿಡಿದಿದ್ದಾರೆ ಅವೆಂದರೆ ಮೈಕ್ರೋ ಯೋಜನೆ, ಮೈಕ್ರೋ ಮಾರುಕಟ್ಟೆ ಮತ್ತು ಮೈಕ್ರೋ ಹಣಕಾಸು. ಸ್ಥಳೀಯ ಆರ್ಥಿಕತೆಯಲ್ಲಿ ಮಾರುಕಟ್ಟೆಯ ಬೇಡಿಕೆ ಸ್ಥಿತಿಗತಿಗಳನ್ನು ಅರಿಯಲು ಬೇಕಾದ ಪರಿಕರಗಳನ್ನು ಅಭ್ಯಾಸಿಯು ಅರ್ಥಮಾಡಿಕೊಳ್ಳಲು 3ಒ ವಿಧಾನದಿಂದ ಹೊಂದಿಸಿಕೊಡಿರುವ ಎರಡು ಹಂತದ ಕಾರ್ಯವಿಧನಗಳು ಸಹಕಾರಿಯಾಗುತ್ತದೆ.

## 8.2 ಒಳ ವ್ಯಾಪಾರ ಮತ್ತು ಹೊರ ವ್ಯಾಪಾರ

**ನಮೂನೆ 1 ಸ್ಥಳೀಯ ಮಾರುಕಟ್ಟೆ ಯಾವ ಪದಾರ್ಥಗಳು ಒಳಗೆ ಬರುತ್ತವೆ?**

| ಕ್ರ.ಸಂ | ಉತ್ಪಾದಿಸದ ಆದರೆ ಉಪಯೋಗಿಸಲ್ಪಡುವ ಪದಾರ್ಥ/ಸೇವೆಗಳು | **ಕ್ಷೇತ್ರದಲ್ಲಿ ವಾರ್ಷಿಕ ಉಪಭೋಗ** | | | ಸ್ಥಳೀಯ ಉತ್ಪಾದನೆ |
|---|---|---|---|---|---|
| | | ಪರಿಮಾಣ | ಬೆಲೆ /ಬಿಡಿ ಪರಿಮಾಣಕ್ಕೆ | ಒಟ್ಟು ಮೊತ್ತ | |
| ಉದಾ 1 | ಮಾರೀ ಬಿಸ್ಕತ್‌ಗಳು | 1,000 ಕೆಜಿ/ವಾರ್ಷಿಕ | ರೂ 500/ ಕೆ.ಜಿಗೆ | ರೂ.5,00,000 | ಒಂದು ಸ್ಥಳೀಯ ಬೇಕರಿ ಈರೀತಿಯ ಪದಾರ್ಥಗಳನ್ನು ಉತ್ಪಾದಿಸುತ್ತದೆ. |
| 2 | ಬೈಸಿಕಲ್ಲುಗಳು | 400 /ವರ್ಷಕ್ಕೆ | ರೂ 1,600/ ಪ್ರತಿಯೊಂದಕ್ಕೆ | ರೂ.6,40,000 | ಉತ್ಪಾದಿಸುತ್ತಿಲ್ಲ. |
| 3 | | | | | |

**ನಮೂನೆ 2 ಸ್ಥಳೀಯ ಮಾರುಕಟ್ಟೆ: ಯಾವ ಪದಾರ್ಥ ಹೊರ ಹೋಗುತ್ತದೆ**

| ಕ್ರ.ಸಂ | ಸ್ಥಳೀಯವಾಗಿ ಉೂತ್ಪಾದಿಸುವ ಮತ್ತು ಬಾಕಿ ಉಳಿಯುವ ಪದಾರ್ಥ/ಸೇವೆಗಳು | ಕ್ಷೇತ್ರದಲ್ಲಿ ವಾರ್ಷಿಕ ಉತ್ಪಾದನೆ– ಬೇಡಿಕೆ ಯಾವ ಕ್ಷೇತ್ರದಲ್ಲಿ | | | |
|---|---|---|---|---|---|
| | | ಪರಿಮಾಣ | ಬೆಲೆ /ಬಿಡಿ ಪರಿಮಾಣಕ್ಕೆ | ಒಟ್ಟು ಮೊತ್ತ | ಎಲ್ಲಿ ಬೇಡಿಕೆ |
| 1 | | | | | |
| 2 | | | | | |
| 3 | | | | | |

ANS SIRD

# ಅಧ್ಯಾಯ–9

## ತ್ರಿಕೋನ ಆಕೃತಿ ರಚನೆ

**ಈ ಚಟುವಟಿಕೆಯಲ್ಲಿ ಒಂದು ತಂಡವು ಒಂದು ಸ್ಥಳದಲ್ಲಿ ಮಾಹಿತಿಯನ್ನು ಸಂಗ್ರಹಿಸಲಾಗಿದ್ದು . ಆ ತಂಡವು 3 ಹಂತಗಳ ಮಾಹಿತಿಯನ್ನು ವಿಶ್ಲೇಷಿಸಲಾಗಿದೆ.**

1. 100 ತರಹದ ಗೃಹ ಬಳಕೆ ವಸ್ತುಗಳ ಮಾಹಿತಿ
2. ಮಾರುಕಟ್ಟೆಯಲ್ಲಿ ದೊರೆತ ಮಾಹಿತಿ, ಮಾರುಕಟ್ಟೆಯಲ್ಲಿ ದೊರೆತ ಉತ್ಪಾದಕ ವಸ್ತು, ಅವುಗಳ ವ್ಯಾಪಾರ ವಹಿವಾಟು
3.. ಮಾಹಿತಿಯನ್ನು ವಿಶ್ಲೇಷಿಸಿದಾಗ ಪೂರಕ ನಿಯಮಗಳ ದೈನಂದಿನ ಜೀವನ ಚಟುವಟಿಕೆಗಳನ್ನು ನಡೆಸಲು ವೈಯುಕ್ತಿಕ ಚಟುವಟಿಕೆಗಳನ್ನು ನಡೆಸಲು ಬೇಕಾದ ಮೂಲ ಕಚ್ಚಾ ವಸ್ತುಗಳ ಬೇಡಿಕೆ.

ಈ ಮೇಲ್ಕಂಡ ಮಾಹಿತಿಯು ಸ್ಥಳೀಯ ಮಾರುಕಟ್ಟೆಯಲ್ಲಿ ತಂಡದ ಎಲ್ಲಾ ಸದಸ್ಯರು ಭಾಗಿಯಾಗಿ ಸಂಗ್ರಹಿಸಿದ್ದಾರೆ.( 1 ರಿಂದ 3 ಹಂತಗಳ ಮೊದಲ ಘಟ್ಟ)

ಈ ಚಟುವಟಿಕೆಯು ದೈನಂದಿನ ಜೀವನದ 05 ಪ್ರಮುಖ ಹಂತಗಳನ್ನು ವಿಶಾಲ ಗಣಿತದ ಸ್ಥಿರೀಕರಣ ದರ್ಜೆಗನುಗುಣವಾಗಿ ವಿಂಗಡಿಸಲಾಗಿದೆ. ಒಂದು ತಂಡವು ಪ್ರತಿಯೊಬ್ಬನ ಜೀವನದ ದೈನಂದಿನ ಬದುಕು, ಚಟುವಟಿಕೆ ಮತ್ತು ದರ್ಜೆಗನುಗುಣವಾಗಿ ಗಣನೆಗೆ ತೆಗೆದುಕೊಳ್ಳಲಾಗಿದೆ. ದರ್ಜೆಯು 05 ಅಂಶಗಳ ಪಟ್ಟಿಯಲ್ಲಿ ವಿಂಗಡಿಸಲಾಗಿದ್ದು. 1ನೇ ದರ್ಜೆಯು ಉತ್ತಮವೆಂದು ಕೊನೆಯದಾಗಿ 5ನ್ನು ಕಡಿಮೆ ದರ್ಜೆಯೆಂದು ಈ ಚಟುವಟಿಕೆಯಲ್ಲಿ ಗುರ್ತಿಸಲಾಗಿದೆ.

1. **ಉತ್ತಮ ವ್ಯವಸ್ಥೆಗೆ ಬೇಕಾದ ಸಕಾರಾತ್ಮಕ ಅಂಶಗಳು** ನಾವು ಬಳಸುತ್ತಿರುವ ಪೂರಕ ಮಾಹಿತಿ ನಿಯಮಗಳು ನಾವು ತಿಳಿದಿರುವಂತೆ ಸಂಪನ್ಮೂಲಗಳೆಂದರೆ ( ನೈಸರ್ಗಿಕ, ದೈಹಿಕ, ಆರ್ಥಿಕ, ಸಾಮಾಜಿಕ ಹಾಗೂ ಮಾನವ ಸಂಪನ್ಮೂಲ) ದೈನಂದಿನ ಜೀವನ ಚಟುವಟಿಕೆಗಳಿಗೆ ಸಹಾಯವಾಗುವಂಥ ಅಂಶಗಳು. ಜೀವನ ಚಟುವಟಿಕೆಗಾಗಿ ಬಳಸಲಾದ ಸಂಪನ್ಮೂಲಗಳು ವಸ್ತುಗಳು ಉತ್ತಮ ಜೀವನ ಚಟುವಟಿಕೆಗೆ ಮತ್ತು ಕಾರ್ಯಗಳಿಗೆ ಸಹಾಯವಾಗುವುದು. ಉದಾ: ಉತ್ತಮ ಮಳೆಯಾಗುವ ಪ್ರದೇಶ ಮತ್ತು ನೀರಿನ ಮೂಲಗಳು ಆ ಪ್ರದೇಶದಲ್ಲಿ ತರಕಾರಿ ಬೆಳೆಯಲು ಸಹಾಯಕವಾಗಿದ್ದು ಜೀವನ ನಿರ್ವಹಣೆಗೆ ಸಹಾಯಕವಾಗಿರುತ್ತದೆ.

2. **ಸಕಾರಾತ್ಮಕ ಬೇಡಿಕೆ ನಿಯಮಗಳು ಯಾವುವೆಂದರೆ:** ಮಾರುಕಟ್ಟೆಯ ಸಾಮೀಪ್ಯತೆಯನ್ನು ಗಮನಿಸಿದಾಗ ಉತ್ಪಾದಕ ವಸ್ತುಗಳಿಗೆ ಬೇಡಿಕೆ ಹೆಚ್ಚಾಗಿದ್ದು ಧನಾತ್ಮಕ ಮಾರುಕಟ್ಟೆ ಮತ್ತು ಉತ್ತಮ ಭವಿಷ್ಯಕ್ಕಾಗಿ, ಪ್ರಗತಿ ಹಂತಗಳಲ್ಲಿ ಸೂಚಿಸಿದ ಸಕಾರಾತ್ಮಕ ಬೇಡಿಕೆ ನಿಯಮಗಳಾಗಿರುತ್ತವೆ. ಸ್ಥಳೀಯವಾಗಿ ವ್ಯಾಪಾರಸ್ಥರು ಮಾರುಕಟ್ಟೆಯಲ್ಲಿ ಹೆಚ್ಚಾಗಿ ಬಳಸುವ ಪದಾರ್ಥಗಳು ಗಮನಿಸಿ ಉದಾಹರಣೆಗೆ ಆಡಿನ ಮಾಂಸವನ್ನು ಹೆಚ್ಚಾಗಿ ಗ್ರಾಹಕರು ಬಳಸುವುದರಿಂದ, ಸುತ್ತಮುತ್ತಲ ವ್ಯಾಪಾರಸ್ಥರು ಸ್ಥಳೀಯ ಮಾರುಕಟ್ಟೆಯನ್ನು ಗಮನಿಸಿ ಹಳ್ಳಿಯಲ್ಲಿರುವ ಗ್ರಾಮಸ್ಥರ ಮನೆಗಳಿಗೆ ಭೇಟಿ ನೀಡಿ ಸ್ಥಳೀಯವಾಗಿ ಆಡು ಮತ್ತು ಕುರಿಗಳನ್ನು ಖರೀದಿಸಿ ಮಾರುಕಟ್ಟೆಗಳಲ್ಲಿ ಮಾರಾಟ ಮಾಡಿ ಉತ್ತಮ ಲಾಭವನ್ನು ಪಡೆಯುವುದರಿಂದ ಆಡು ಮತ್ತು ಕುರಿ ಸಾಕಾಣಿಕೆ ಮಾರುಕಟ್ಟೆಗೆ ತಂದು ಉತ್ತಮ ಲಾಭ ಮಾಡಬಹುದೆಂದು ಊಹಿಸಿ ಕುರಿ ಸಾಕಾಣಿಕೆ ಮತ್ತು ಆಡು ಸಾಕಾಣಿಕೆ ಮಾಡುವುದರಿಂದ ರಾಷ್ಟ್ರೀಯ ಮತ್ತು ಪ್ರಾದೇಶಿಕ ಮಾಹಿತಿ ಗನುಗುಣವಾಗಿ ಉತ್ಪಾದಕತೆ ಮತ್ತು ಬಳಕೆಯ ಅಂತರ ಹೆಚ್ಚಾಗದಂತೆ ನೋಡಿಕೊಂಡು ಉತ್ತಮ ಭವಿಷ್ಯಕ್ಕಾಗಿ ಉತ್ಪನ್ನಗಳನ್ನು ಕಾಪಾಡಿಕೊಳ್ಳುವುದು.

ANS SIRD

3. **ಸ್ಥಳೀಯವಾಗಿ ಉದ್ಯೋಗ ಚಟುವಟಿಕೆಯನ್ನು ಎಷ್ಟರಮಟ್ಟಿಗೆ ಹೆಚ್ಚಿಸಬಹುದು:** ದಿನ ನಿತ್ಯದ ಚಟುವಟಿಕೆಗಳಲ್ಲಿ ಸಾಮರ್ಥ್ಯ ಮತ್ತು ಅವಕಾಶ ಹೆಚ್ಚು ಮಾಡಲು ಜನಶಕ್ತಿಯ ಬಳಕೆ ಒಗ್ಗೂಡಿಸಿ ಉತ್ತಮ ಫಲಿತಾಂಶವನ್ನು ಕಾಣಬಹುದಾಗಿದೆ. ದಿನ ನಿತ್ಯದ ಚಟುವಟಿಕೆಗಳು ಅವಕಾಶಗಳ ಆಯ್ಕೆಯನ್ನು ಹೆಚ್ಚು ಜನರು ತಮ್ಮ ಕೆಲಸದಿಂದ ನಿರೀಕ್ಷಿತ ಫಲಿತಾಂಶ ಕಂಡು ಬರದಿದ್ದಲ್ಲಿ ಆ ಕೆಲಸವನ್ನು ಕಡಿಮೆ ದರ್ಜೆಯದೆಂದು ತೀರ್ಮಾನಿಸಬದುದಾಗಿದೆ. ಉದಾಹರಣೆಗೆ ತರಕಾರಿ ಬೇಸಾಯವು ತೀರ ಕಾರ್ಮಿಕ ವರ್ಗದವರಿಗೆ ಮಾತ್ರ ಸೀಮಿತವಾಗಿದೆ ಎಂದು ತಿಳಿಯುವುದು. ನಾವು ಆ ನಿಟ್ಟಿನಲ್ಲೇ ಯೋಚಿಸದೇ ಅದೇ ಬೇಸಾಯವನ್ನು ಬೆಳೆದು ಹೊಂದಾಣಿಕೆ ಪ್ರವೃತ್ತಿಯಿಂದ ಹಲವು ಚಟುವಟಿಕೆಗಳಿಗೆ ಮೂಲವಾಗಿದ್ದು ತರಕಾರಿ ಬೆಳೆಗಳ ಸಂಗ್ರಹ, ಬೆಳೆಗಳನ್ನು ವಿಂಗಡಿಸುವುದು ಪ್ರಾಥಮಿಕ ಹಂತದಲ್ಲಿ ಅಭಿವೃದ್ಧಿ ಮತ್ತು ವ್ಯಾಪಾರ ಮಾಡುವುದು. ಈ ಎಲ್ಲಾ ಚಟುವಟಿಕೆಗಳು ಹೆಚ್ಚು ಕೆಲಸಗಳನ್ನು ಅಭಿವೃದ್ಧಿ ಪಡಿಸುವ ಅವಕಾಶಗಳು ಸ್ಥಳೀಯವಾಗಿ ಉತ್ತಮವಾಗಿದ್ದು ಆ ಆಶಾಭಾವವು ಕೇವಲ ಒಂದು ಚಟುವಟಿಕೆಗೆ ಸೀಮಿತವಾಗಿರಬಾರದು.

4. **ಬಡವರಿಗೆ ಹಾಗು ಮಹಿಳೆಯರಿಗೆ ಈ ಚಟುವಟಿಕೆಯು ಹೊಂದುವುದೇ:** ದೈನಂದಿನ ಜೀವನಾಧಾರಿತ ಚಟುವಟಿಕೆಗಾಗಿ ಪಡುವ ಶ್ರಮವು ಹೆಚ್ಚು ಅರ್ಥಪೂರ್ಣವಾಗಿದ್ದು ಈ ಅಂಶವು ಬಡವರ ಅಭಿವೃದ್ಧಿಗಾಗಿ ಹೊಂದುವಂತಹ ಚಟುವಟಿಕೆಯು ಹೆಚ್ಚು ಸೂಕ್ತವಾಗಿರುತ್ತದೆ. ಈ ಚಟುವಟಿಕೆಗೆ ಬಂಡವಾಳ ಅವಶ್ಯಕತೆ ಇದೆಯೇ ಹಾಗೇಯೇ ಯಾವುದಾದರೂ ಕಾಲ ಮಿತಿ ನಿಗದಿ ಪಡಿಸಲಾಗಿದೆಯೇ ( ಪ್ರಾಥಮಿಕ ಹಂತದಿಂದ ಹಿಂದಿರುಗಿಸುವ ಸಮಯ ನಿಗದಿ ಪಡಿಸಿರುವುದಿಲ್ಲ) ಆಯ್ಕೆಯಾದ ಚಟುವಟಿಕೆಗಳಿಗೆ. ಈ ಚಟುವಟಿಕೆಯಲ್ಲಿ ಗುರಿ ಸಾಧಿಸಲಾಗಿದೆಯೇ? ಈ ಕಾರ್ಯ ಚಟುವಟಿಕೆಯ ಕಷ್ಟ ಸಾಧ್ಯತೆಗಳೇನು?.

5. **ದೈನಂದಿನ ಜೀವನಾಧಾರಿತ ಚಟುವಟಿಕೆಯಲ್ಲಿ ಉತ್ತೇಜಕರು ವ್ಯವಹರಿಸಬಹುದಾದ ಆಯ್ಕೆ ಚಟುವಟಿಕೆಗಳೇನು:** ಈ ಸ್ಪರ್ಧಾತ್ಮಕ ಜೀವನಾಧಾರಿತ ಕಾರ್ಯ ಚಟುವಟಿಕೆಯಲ್ಲಿ ಯಾವ ಹಂತದ ವ್ಯವಹಾರಿಕ ಕಟ್ಟುಪಾಡುಗಳು ಇರುವುದು. ಕಾರ್ಯ ಸಾಧನೆಯ ಹೆಚ್ಚಾಗಿ ಸ್ಪರ್ಧಾತ್ಮಕ ಹಾಗೂ ಉನ್ನತೀಕರಣ ಸಂಸ್ಥೆಯಾಗಿದ್ದು, ಆ ಸಂಸ್ಥೆಯ ಸ್ಪರ್ಧಾತ್ಮಕತೆ ಅತಿ ಮುಖ್ಯವಾಗಿ ಕಾಲಘಟ್ಟದಲ್ಲಿ ಅವಲಂಬಿತವಾಗಿರುವ ನಂಬಿಕೆ ಮತ್ತು ದರ್ಜೆಯಾಗಿರುತ್ತದೆ. ಉದಾಹರಣೆಗೆ ಜೀವನೋಪಾಯಕ್ಕಾಗಿ ಕಟ್ಟಿಗೆ ವ್ಯಾಪಾರಿಯು ಹೆಚ್ಚುವರಿಯಾಗಿ ಕಟ್ಟಿಗೆ ಸಂಗ್ರಹ ಮಾಡುವುದು ಜೀವನದ ಉತ್ತಮ ಭವಿಷ್ಯಕ್ಕಾಗಿ ಹಾಗೂ ಅದಕ್ಕಾಗಿ ಸಂಬಂಧಿತ ಸಂಸ್ಥೆಯೊಡನೆ ವ್ಯವಹರಿಸುತ್ತಾ ಮಾರುಕಟ್ಟೆಯಲ್ಲಿ ಪದಾರ್ಥಗಳನ್ನು ಮಾಡುತ್ತಿರುತ್ತಾರೆ. ಈ ಪ್ರಕ್ರಿಯೆಯು ಜೀವನಾಧಾರಿತ ಉನ್ನತೀಕರಣಕ್ಕಾಗಿ ಪರಿಗಣಿಸಲಾಗುವುದಿಲ್ಲ. ಈ ಪ್ರಕ್ರಿಯೆಯು ಉತ್ತಮ ಕೆಲಸವೆಂದು ಹೇಳಲಿಕ್ಕಾಗುವುದಿಲ್ಲ ಮತ್ತು ಈ ಕಾರ್ಯವು ಕಟ್ಟಿಗೆ ವ್ಯಾಪಾರಿಗಳಿಗೆ ಮಾರಾಟ ಮಾಡಲು ಸಹಾಯವಾಗಿರುತ್ತದೆ. ಎಲ್ಲಾ ಯೋಜನೆಗಳು ಮೇಲ್ದರ್ಜೆಯಾಗಿರುವುದಿಲ್ಲ ಸಂಸ್ಥೆಗಳು ಸ್ಪರ್ಧಾತ್ಮಕ ಪ್ರಪಂಚದ ಜೀವನಾಧಾರಿತ ಚಟುವಟಿಕೆಗಳಲ್ಲಿ ಆಯ್ಕೆಯ ಚಟುವಟಿಕೆಗಳಾಗಿರುತ್ತವೆ.

## ಮಾರುಕಟ್ಟೆಯಲ್ಲಿ ಒತ್ತಡಕ್ಕೆ ಸಿಲುಕಿ ಆಕ್ರಮ ಎಂದು ತಿಳಿದು ಬಂದಂತಹ ಉತ್ತಮ ಉದ್ದೇಶಗಳು:

ಒಂದು ಸಂಸ್ಥೆಯ ಉಪ್ಪು ಉತ್ಪದನಾ ಘಟಕದಲ್ಲಿ ಕೆಲಸ ಮಾಡುವಂತಹ ಕಾರ್ಮಿಕರಿಗೆ ಉತ್ತಮ ಆದಾಯ ಗಳಿಸಲು ಸಹಾಯವಾಗುವಂತ ಸವಲತ್ತು ಒದಗಿಸಲು ತೀರ್ಮಾನಿಸಿ. ಆ ಸಂಸ್ಥೆಯ ವ್ಯಾಪಾರಸ್ಥರು ಮತ್ತು ಸಾಲಗಾರರಿಂದ ಮುಕ್ತವಾಗಿ ವ್ಯವಹರಿಸಲು ಸರಾಗವಾಗಿ ನಡೆಯಲು ಅಂದಾಜಿಸಲಾಗಿತ್ತು. ಆದರೆ ಸಾಲಗಾರರು ಮಾರುಕಟ್ಟೆಯಲ್ಲಿ ಆ ಪದಾರ್ಥಕ್ಕೆ ಒಂದು ದರವನ್ನು ನಿಗದಿ ಪಡಿಸಿ ಅವರಿಂದ ಉಪ್ಪನ್ನು ಖರೀದಿಸಲು ತೀರ್ಮಾನಿಸಲಾಯಿತು. ಕಾರ್ಮಿಕರು ಸಂಸ್ಥೆಯಲ್ಲಿ ಉಪ್ಪನ್ನು ಸಗಟಾಗಿ ಖರೀದಿಸಿ ಮಾರುಕಟ್ಟೆಯಲ್ಲಿ ಮಾರಾಟ ಮಾಡಲಾಯಿತು. ಆ ಸಂಸ್ಥೆಯು ಇದರಿಂದ ತಿಳಿದು ಬಂದ ಅಂಶವೇನೆಂದರೆ ಕಾರ್ಮಿಕರಿಗೆ ಆರ್ಥಿಕವಾಗಿ ಬೆಳೆಯಲು ಸಹಾಯವಾಯಿತು.

ಸಂಸ್ಥೆಯು ಉಪ್ಪನ್ನು ಖರೀದಿಸಿ ಮಾರುಕಟ್ಟೆಯಲ್ಲಿ ಮಾರಾಟ ಮಾಡಿ ಉಪ್ಪು ಉತ್ಪಾದಿಸುವ ಕಾರ್ಮಿಕರಿಗೆ ವ್ಯಾಪಾರಸ್ಥರಿಂದ ಮೋಸ ಹೋಗದಂತೆ ತಡೆಯಲು ತೀರ್ಮಾನಿಸಿ ಮಾರುಕಟ್ಟೆಯಲ್ಲಿ ಬಹಳ ತೊಂದರೆ



ANS SIRD

ಅನುಭವಿಸಬೇಕಾಯಿತು. ಅದೇನೆಂದರೆ ಸಂಗ್ರಹಿಸಲಾದ ಉಪ್ಪನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸಲು ಸಂಪರ್ಕ ವ್ಯವಸ್ಥೆ ಬೇಕಾಗಿತ್ತು. ಇದರಿಂದ ಸರಕು ಸಾಗಾಣಿಕೆದಾರರು ಸರಕನ್ನು ಸಾಗಿಸಲು ಸಹಕರಿಸದೇ ಬೇಕು ಬೇಕಂತಲೇ ನಿಧಾನ ಮಾಡಿದುದರಿಂದ ಸಂಸ್ಥೆಯವರು ಈ ಚಟುವಟಿಕೆಯನ್ನು ಪ್ರಾರಂಭ ಮಾಡುವಾಗ ಹಾಕಿಕೊಂಡ ಯೋಜನೆಯಂತೆ ನಡೆಯಲಿಲ್ಲ, ಆದುದರಿಂದ ಆ ಸಂಸ್ಥೆಯವರಿಗೆ ಉಪ್ಪು ಮಾರಾಟ ಮಾಡುವ ವ್ಯವಹಾರದಿಂದ ಬಹಳಷ್ಟು ನಷ್ಟ ಅನುಭವಿಸಬೇಕಾಯಿತು.

**ಪಟ್ಟಿ–2**

ಜನಸಂಖ್ಯೆಗನುಗುಣವಾಗಿ ಸರ್ವೇ ಮಾಡಿದಾಗ ವಿವಿಧ ಕಾರ್ಯ ಚಟುವಟಿಕೆಗಳ ವಿವರವನ್ನು ಈ ಕೆಳಕಂಡಂತೆ ಕಾಣಬಹುದು.

| ಕ್ರ. ಸಂ | ಜೀವನೋಪಾಯ ಚಟುವಟಿಕೆಗಳು | ಆದಾಯ | ಉತ್ತಮ | | ಮಧ್ಯಮ | | ಕಡಿಮೆ | | ಅತೀ ಕಡಿಮೆ | |
|---|---|---|---|---|---|---|---|---|---|---|
| ಎ | ವ್ಯವಸಾಯ | ಒಟ್ಟು ಆದಾಯ | ರೂ | % | ರೂ | % | ರೂ | % | ರೂ | % |
| 1 | ನವಣೆ | 1547180 | 229200 | 41.9 | 87000 | 15.9 | 92300 | 16.9 | 138680 | 25.3 |
| 2 | ಉದ್ದು | 244940 | 115600 | 47.2 | 85000 | 34.7 | 23940 | 9.8 | 20400 | 8.3 |
| 3 | ಬಜ್ಜೆ | 313130 | 146200 | 46.7 | 53900 | 17.2 | 43200 | 13.8 | 69830 | 22.3 |
| 4 | ಹತ್ತಿ | 52000 | 35000 | 67.3 | 7000 | 13.5 | 0 | 0.0 | 10000 | 719.2 |
| 5 | ಜೋಳ | 88100 | 30700 | 34.8 | 12000 | 13.6 | 20300 | 23.0 | 25100 | 28.5 |
| 6 | ಗೋಧಿ | 112900 | 56500 | 50.0 | 14000 | 12.4 | 20400 | 18.1 | 22000 | 19.5 |
| 7 | ಹೂವು | 34500 | 20000 | 58.0 | 0 | 0.0 | 13500 | 39.1 | 1000 | 2.9 |
| 8 | ತರಕಾರಿ | 279800 | 250300 | 89.5 | 0 | 0.0 | 2500 | 0.9 | 27000 | 9.6 |
| | ಒಟ್ಟು | | | | | | | | | |
| | | | | | | | | | | |
| ಕ್ರ. ಸಂ | ಜೀವನ ಧಾರಿತ ಚಟುವಟಿಕೆಗಳು | ಆದಾಯ | ಉತ್ತಮ | | ಮಧ್ಯಮ | | ಕಡಿಮೆ | | ಅತೀ ಕಡಿಮೆ | |
| ಬಿ | ಪಶು ಸಂಗೋಪನೆ | ಒಟ್ಟು ಆದಾಯ | ರೂ | % | ರೂ | % | ರೂ | % | ರೂ | % |
| 12 | ಎಮ್ಮೆ ಸಾಕಾಣಿಕೆ | 1205320 | 8110800 | 67.3 | 137600 | 11.42 | 91000 | 7.54 | 165920 | 13.77 |
| 13 | ಹಸು ಸಾಕಾಣಿಕೆ | 1002230 | 721150 | 72.0 | 65700 | 6.55 | 99300 | 9.9 | 116080 | 11.58 |
| 14 | ಕುರಿ & ಮೇಕೆ ಸಾಕಾಣಿಕೆ | 315320 | 89400 | 28.4 | 50000 | 15.86 | 103700 | 32.9 | 72220 | 22.9 |
| 15 | ಕೋಳಿ ಸಾಕಾಣಿಕೆ | 0 | 0 | 0 | 0 | 0 | 0 | 0 | 0 | 0 |
| 16 | ಕುದುರೆ | 10000 | 10000 | 100 | 0 | 0 | 0 | 0 | 0 | 0 |
| | ಒಟ್ಟು | 2532870 | 1631350 | 64.4 | 253300 | 10 | 294000 | 11.6 | 354220 | 13.9 |

ಮೂಲ: ಗಣತಿ ಕಾರ್ಯ ನಡೆಸಿದವರು ಆರ್.ಸಿ.ಡಿ,ಎಸ್.ಎಸ್. ಅಜ್ಮೀರ್ ಜೂನ್–2008

ANS SIRD

ಈ ಗುರಿಯು ದಿನ ನಿತ್ಯದ ಚಟುವಟಿಕೆಗಳ ಆಧಾರದ ಮೇಲೆ ಸಂಗ್ರಹವಾದ ಮಾಹಿತಿಯನ್ನು (ಪಟ್ಟಿ 2 ರಲ್ಲಿ ತೋರಿಸಲಾಗಿದೆ) ಪಶು ಸಂಗೋಪನೆ, ಕುರಿ ಮತ್ತು ಮೇಕೆ ಸಾಕಾಣಿಕೆ ಬೆಳೆಸುವುದು ಸುಮಾರು12.5 ರಷ್ಟು ಆದಾಯವು ಪಶು ಸಂಗೋಪನೆಯಿಂದ ಚಟುವಟಿಕೆಯಲ್ಲಿ ಇದೇ ಮೊತ್ತವು ಬಡವರಿಗೆ ಹೆಚ್ಚು ಆದಾಯವಾಗಿ ರುತ್ತದೆ. ಇದೇ ರೀತಿ 56% ರಷ್ಟು ಮೊತ್ತದಲ್ಲಿ ಕುರಿ ಮತ್ತು ಮೇಕೆ ಸಾಕಾಣಿಕೆ ಕೈಗೊಂಡಿರುವ ಬಡವರು ಮತ್ತು ಅತೀ ಬಡವರಿಗೆ ಸಂದಾಯವಾಗುತ್ತಿದೆ. ಅದೇ ರೀತಿ ಜೋಳ ಮತ್ತು ನವಣೆ ಬೆಳೆ ಬೆಳೆಯುವ ಬಡವರು ಗೃಹ ಬಳಕೆಗೆ ಉಪಯೋಗಿಸುತ್ತಿದ್ದು ಮತ್ತು ಸಂಸ್ಥೆಯವರು ಹತ್ತಿ ಬೆಳೆಯ ಮೇಲೆ ಗಮನಹರಿಸಿದಾಗ, ಹತ್ತಿ ಬೆಳೆ ಬೆಳೆಯಿಂದ ಉದ್ಯೋಗ ಲಭ್ಯತೆ ಹೆಚ್ಚುವರಿಯಾಗಿ ಲಭ್ಯವಾಗುವ ಸಾಧ್ಯತೆ ಜೋಳ ಮತ್ತು ನವಣೆಗಿಂದ ಅಧಿಕವಾಗಿರುತ್ತದೆ.

ಈ ಮಾಹಿತಿಯು ಗಣತಿದಾರರ ಮಾಹಿತಿಯಿಂದ ಲಭ್ಯವಾಗಿದೆ.

ಈ ತ್ರಿಕೋನ ಮಾಹಿತಿಯಲ್ಲಿ ದರ್ಜೆ, ಅಂಕ ಮತ್ತು ಚಟುವಟಿಕೆಯಿಂದ ಹೊರ ಹಾಕಬಹುದಾದಂತ ಅತೀ ಕಡಿಮೆ ತ್ರಿಕೋನ ಮಾಹಿತಿಯಿಂದ ಕೈ ಬಿಡಲಾಗಿದ್ದು . ಕೈ ಬಿಡಲಾದ ಕೆಲವೊಂದು ಮಾಹಿತಿಯನ್ನು ವಿಷದವಾಗಿ ಉದಾಹರಣೆ ಸಹಿತ ಪಟ್ಟಿಯಲ್ಲಿ ವಿವರಿಸಲಾಗಿದೆ.

**ಪಟ್ಟಿ:3** ತ್ರಿಕೋನ ಆಕೃತಿ ರಚನೆ

| ಕ್ರ.ಸಂ | ಚಟುವಟಿಕೆ | ಪೂರಕ ಅಂಶ | ಪೂರಕ ಬೇಡಿಕೆ | ಉದ್ಯೋಗ ಸಾಮರ್ಥ್ಯ ಹೆಚ್ಚಳ | ಮಹಿಳೆಯರಿಗೆ & ಬಡವರಿಗೆ ಅನುಕೂಲ | ಸ್ಪರ್ಧಾತ್ಮಕ ಸಂಸ್ಥೆ | ಒಟ್ಟು ಅಂಕ |
|---|---|---|---|---|---|---|---|
| 1 | ಆಯಾ ಕಾಲಕ್ಕೆ ಬೆಳೆಯುವಂತ ತರಕಾರಿ ಬೆಳೆ | 4 | 4 | 4 | 2 | 2 | 1 |
| 2 | ಶುಂಠಿ ಬೆಳೆ | 3 | 4 | 3 | 2 | 3 | 15 |
| 3 | ಆಡು ಸಾಕಾಣಿಕೆ | 5 | 5 | 4 | 4 | 3 | 21 |
| 4 | ಹೈನುಗಾರಿಕೆ | 3 | 3 | 2 | 2 | 3 | 13 |
| 5 | ಹುಲ್ಲಿನ ಮೆದೆ ಸಂಗ್ರಹ | 4 | 5 | 5 | 5 | 4 | 23 |
| | | | | | | | |

**ಮೂಲ : ಉದಯಪುರ 2008ರಲ್ಲಿ ಕೈಗೊಂಡ ಸಮೀಕ್ಷೆಯಂತೆ.**

ಉದಾಹರಣೆಗೆ ಪಟ್ಟಿ 4 ರಲ್ಲಿ ಜೀವನಾಧಾರಿತ ಚಟುವಟಿಕೆಯಂದ ಸಂಸ್ಥೆಯು ಮನವರಿಕೆಯಾದಂತಹ ಕೆಲವೊಂದು ಅಂಶಗಳೇನೆಂದರೆ ಹುಲ್ಲಿನ ಸಂಗ್ರಹ ಮತ್ತು ಆಡು ಸಾಕಾಣಿಕೆ ಮಧ್ಯಸ್ಥಿಕೆ ವಹಿಸಬಹುದಾದಂತಹ ಚಟುವಟಿಕೆಗಳು ದೈನಂದಿನ ಚಟುವಟಿಕೆಯು ತಂಡದ ಗುರಿಯಾಗಿರುತ್ತದೆ. ಬೇರೆ ಮೂರು ಚಟುವಟಿಕೆಗಳಿಗೆ ಹೋಲಿಸಿದರೆ ಇದು ಉತ್ತಮ ಚಟುವಟಿಕೆಯಾಗಿರುತ್ತದೆ.

ತ್ರಿಕೋನ ಆಕೃತಿ ರಚನೆಯು ಸರಳೀಕರಣವಾಗಿದ್ದು ಎಲ್.ಪಿ.ಒ ಸಮಸ್ಯೆಗೆ ಆಯ್ಕೆಯಾದ ಚಟುವಟಿಕೆಯಿಂದ ಸಾಧ್ಯವಾಗಿರುತ್ತದೆ. ಬಾಕಿ ಎಲ್ಲಾ ಹಂತಗಳಿಂದ ಕೂಲಂಕುಷವಾಗಿ ಶ್ರಮ ವಹಿಸಿದರೆ ಮಾತ್ರ ವಿಶ್ಲೇಷಿಸಬಹುದಾಗಿದೆ.

ANS SIRD

# ಅಧ್ಯಾಯ–10

## ಬಾಹ್ಯ ಪರಿಸರದ ಅನ್ವೇಷಣೆ

ಜೀವನಾಧಾರ ಚೌಕಟ್ಟಿನ ರಚನೆಗೆ ಉಲ್ಲೇಖಿಸುವುದಾದರೆ ಈಗ ವಿಚಾರಣೆ ಮಾಡಿ ಸ್ಪಷ್ಟವಾಗಿ ಗ್ರಹಿಸಿರುವುದು ಕೇವಲ ಗಿರಾಕಿ ಬೇಡಿಕೆ ವಿದ್ಯಾಮಾನ ಮತ್ತು ದಳ್ಳಾಳಿ ವಿದ್ಯಮಾನ.

ಉಳಿದ ಮತ್ತೆರಡು ಹೊರಗಿನ ವಿದ್ಯಮಾನಗಳಾದ ಸಂಸ್ಥೆ ಮತ್ತು ಕೈಗಾರಿಕೆ ವಿದ್ಯಮಾನಗಳನ್ನು ಇನ್ನೂ ವಿಚಾರ ಮಾಡಬೇಕಿದೆ. ಪ್ರವರ್ತಕರು ಪ್ರಾಮುಖ್ಯವಾಗಿ ನೋಡುವುದು ಗಿರಾಕಿ ಬೇಡಿಕೆ ಮತ್ತು ದಳ್ಳಾಳಿ ವಿದ್ಯಮಾನ ಇದನ್ನು ಕ್ರಮವಾಗಿ ತಿಳಿದುಕೊಳ್ಳಲು ಮಧ್ಯಸ್ತಿಕೆ ಬಹಳ ಉಪಯುಕ್ತವಾಗುತ್ತದೆ. ಅಗತ್ಯವಾಗಿ ಕಾರ್ಯರೂಪಕ್ಕೆ ತರಲು ಬಾಹ್ಯ ಪರಿಸರದ ಅನ್ವೇಷಣೆ ಅಭ್ಯಾಸ ಮಾಡಬೇಕಾಗಿದೆ. ಈ ಅಭ್ಯಾಸ ನಿರ್ವಹಿಸಲು ಕೆಳಕಂಡ ಕ್ರಮಗಳನ್ನು ನೀಡಿದೆ.

**ಹಂತ–1 ಪ್ರಶ್ನೆಗಳನ್ನು ಸಿದ್ದಪಡಿಸುವುದು:**

ನಾಲ್ಕು ಪ್ರಕರಣಗಳಾದ ವಾಸ್ತವಾಂಶ, ಬೇಡಿಕೆ, ಔದ್ಯಮಿಕ ಹಾಗೂ ಸಾಂಸ್ತಿಕ ಪ್ರಕರಣಗಳಿಗೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ಸಿದ್ದಪಡಿಸುವುದು ತುಂಬಾ ಕ್ಲಿಷ್ಟಕರವಾದ ಹಂತವಾಗಿದೆ. ಈ ಪ್ರಶ್ನೆಗಳನ್ನು ಅಭಿವೃದ್ಧಿ ಸಂಸ್ಥೆಗಳಿಂದ ಸಿದ್ದಪಡಿಸಿಕೊಳ್ಳಬೇಕು. ವಿಷಯವಾರು ವರ್ಗೀಕರಣ ತಯಾರಿಸುವಾಗ ಕಂಡುಬರುವ ಪ್ರಮುಖ ಅಂಶಗಳು ಪ್ರಶ್ನೆಗಳನ್ನು ಸಿದ್ದಪಡಿಸಲು ಮಾರ್ಗದರ್ಶಿಸುತ್ತವೆ. ಆದ್ದರಿಂದ ವಿಷಯವಾರು ವರ್ಗೀಕರಣ ನಕ್ಷೆ ತಯಾರಿಸುವಾಗ ಚರ್ಚಿಸಲ್ಪಡುವ ಪ್ರಮುಖ ಅಂಶಗಳನ್ನು ದಯವಿಟ್ಟು ಗಮನಿಸಿ. ಕೆಲವು ಪ್ರಶ್ನೆಗಳು ಎಲ್.ಪಿ.ಒಗೆ ಸಂಬಂಧಿಸಿದ ಕ್ಷೇತ್ರದಿಂದಲೂ ಸಹ ಉದ್ಭವಿಸುತ್ತವೆ.

ಪ್ರಶ್ನೆಗಳನ್ನು ಸಿದ್ದಪಡಿಸುವಾಗ ಅವುಗಳ ಉತ್ತರಗಳು ಮೌಲ್ಯೀಕರಿಸುವ ರೀತಿಯಲ್ಲಿ ಇರುವಂತೆ ಎಚ್ಚರವಹಿಸಬೇಕು. ಈ ಪ್ರಶ್ನೆಗಳಿಗೆ ಬರುವ ಉತ್ತರಗಳು ಹೌದು ಅಥವಾ ಇಲ್ಲ ಅಥವಾ ಒಪ್ಪಿದೆ ಅಥವಾ ಒಪ್ಪುವುದಿಲ್ಲ ಅಥವಾ ಅಭಿಪ್ರಾಯಗಳನ್ನಾಧರಿಸಿ ಉತ್ತಮ ಮತ್ತು ಚೆನ್ನಾಗಿಲ್ಲ ಅಥವಾ ಪ್ರಶ್ನೆಗಳಿಗೆ ಪ್ರಶ್ನೆಗಳೇ ಉತ್ತರವಾಗುವಂತೆ ಎಷ್ಟು, ಯಾವ, ಏನು ಮುಂತಾದ ಉತ್ತರಗಳನ್ನು ನೀಡುವುದನ್ನು ನಿಯಂತ್ರಿಸಬೇಕು. ಅಭಿವೃದ್ಧಿ ಸಂಸ್ಥೆಯವರು ಈ ಪ್ರಶ್ನೆಗಳನ್ನು ಕನಿಷ್ಠ ಮೂವರು ಅನುಭವಿ ತಜ್ಞವ್ಯಕ್ತಿಗಳಿಗೆ ಕೇಳಬೇಕು.

**ಉತ್ತಮ ಪ್ರಶ್ನೆ:**

ಸ್ಥಳಿಯ ಮಾರುಕಟ್ಟೆಯಲ್ಲಿ ಉತ್ಪನ್ನದ ಬೇಡಿಕೆಯನ್ನು ಹೇಗೆ ಲೆಕ್ಕಚಾರ ಮಾಡುತ್ತೀರಿ?

**ಕೆಟ್ಟ ಪ್ರಶ್ನೆ:**

**ಉತ್ಪನ್ನಕ್ಕೆ ಉತ್ತಮ ಬೇಡಿಕೆ ಇದೆಯೇ?**

ಮೊದಲನೆಯ ಪ್ರಶ್ನೆಗೆ ತಜ್ಞರು ನೀಡುವ ಉತ್ತರವನ್ನು ಮೌಲ್ಯೀಕರಿಸಬಹುದು. ಆದರೆ ಎರಡನೆಯ ಪ್ರಶ್ನೆಗೆ ಉತ್ತರವು ಹೌದು ಅಥವಾ "ಇಲ್ಲಾ" ಆಗಿರುತ್ತದೆ. ಆದ್ದರಿಂದ ಎರಡನೆಯ ರೀತಿಯ ಪ್ರಶ್ನೆಗಳು ಉದ್ಭವವಾಗದಂತೆ ಜಾಗರೂಕತೆ ವಹಿಸಬೇಕು. ಪ್ರಶ್ನೆಗಳಿಗೆ ಬರುವ ಉತ್ತರಗಳನ್ನು ಮೊದಲೇ ವಿವರಿಸಿದ ಐದು ಅಂಶಗಳ ಮಾನಕವನ್ನಾಧರಿಸಿ ಮೌಲ್ಯಮಾಪನ ಮಾಡತಕ್ಕದ್ದು. ಅತಿ ಹೆಚ್ಚಿನ ಅಂಕ–5 ಅನ್ನು ಅತ್ಯುತ್ತುಮ ಪ್ರತಿಕ್ರಿಯೆ ಬರುವಂತಹ ಹಾಗೂ ಆ ಪ್ರಕರಣವು ಚರ್ಚೆಗೆ ಒಳಪಡುವಂತಹುದಕ್ಕೂ ಮತ್ತು ಕನಿಷ್ಠ ಅಂಕ 1ನ್ನು ಯಾವುದೇ ಸಹಾಯವಾಗದಂತಹ ಉತ್ತರ ನೀಡಬೇಕು. ಅಂದರೆ ಪ್ರತಿಕ್ರಿಯೆ–ಉತ್ತರವನ್ನು 5 (ಉತ್ತಮ) ಮತ್ತು 1(ಕನಿಷ್ಠ)ರ

ANSSIRD

ನಡುವೆ ಬರುವಂತೆ ಪ್ರಶ್ನೆಗಳನ್ನು ಸಿದ್ದಪಡಿಸತಕ್ಕದ್ದು. ಅಪೂರ್ಣಾಂಕಗಳನ್ನು ಪರಿಗಣಿಸುವುದಿಲ್ಲವೆಂಬ ಅಂಶವನ್ನು ದಯವಿಟ್ಟು ಗಮನದಲ್ಲಿರಿಸಿಕೊಳ್ಳಿ.

ಪ್ರಶ್ನೆಗಳನ್ನು ಸಿದ್ದಪಡಿಸುವಾಗ ಪ್ರಶ್ನೆಗಳು ಒಂದಕ್ಕಿಂತ ಒಂದು ಬೇರೆಯವೇ ಆಗಿರುವುದನ್ನು ಖಾತ್ರಿ ಪಡಿಸಿಕೊಳ್ಳತಕ್ಕದ್ದು. ಉದಾಹರಣೆಗೆ ವಾಸ್ತವಾಂಶ ಸ್ಥಿತಿಯಲ್ಲಿ ಐದು ಪ್ರಶ್ನೆಗಳು ಐದು ವಿಭಿನ್ನ ಸಂಪನ್ಮೂಲಗಳು ಅಂದರೆ ಭೌತಿಕ,ಆರ್ಥಿಕ, ನೈಸರ್ಗಿಕ, ಸಾಮಾಜಿಕ ಹಾಗೂ ಮಾನವ ಸಂಪನ್ಮೂಲಗಳಿಗೆ ಸಂಬಂಧಿಸಿರಬಹುದು. ಅದೇ ರೀತಿ ಬಾಹ್ಯಸ್ಥಿತಿಗಳ ಮೇಲೆ ಪ್ರಶ್ನೆಗಳನ್ನು ಸಿದ್ದಪಡಿಸುವಾಗ ಆ ವಿದ್ಯಮಾನದ ಸುತ್ತ ಇರುವಂತಹ ವಿಭಿನ್ನ ವಿಶಯಾಂಶಗಳಿಗೆ ಸಂಬಂಧಿಸಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳತಕ್ಕದ್ದು. ಆದ್ದರಿಂದ ಪ್ರಶ್ನಾವಳಿಯನ್ನು ಸಿದ್ದಪಡಿಸುವಾಗ ಈ ಮಾರ್ಗೋಪಾಯವು ಗಮನದಲ್ಲಿರಬೇಕಾದುದು ಅತ್ಯಗತ್ಯ. ಇದನ್ನು ಪರಿಶೀಲಿಸಲು ಸುಲಭವಾದ ಮಾರ್ಗವೆಂದರೆ ನಿರ್ದಿಷ್ಟ ಪ್ರಶ್ನೆಯು ಇತರೆ ಪ್ರಶ್ನೆಗಿಂತ ವಿಭಿನ್ನವಾಗಿದೆಯೇ ಅಥವಾ ಅದು ಇದುವರೆಗಿನ ವೈಶಿಷ್ಟ್ಯಗಳನ್ನು ಒಳಗೊಂಡಿಲ್ಲವೇ ಎಂಬುದನ್ನು ಪರಿಶೀಲಿಸಿ ಉತ್ತರವು ಹೌದು ಎಂದಾದಲ್ಲಿ ಸಿದ್ದಪಡಿಸಿರುವ ಪ್ರಶ್ನೆಗಳು ಚೆನ್ನಾಗಿದೆಯೆಂದು ಅರ್ಥ.

**ಹಂತ–2: ಸೂಕ್ತ ಬಾತ್ಮಿದಾರರು(ತಜ್ಞರು)ನ್ನು ಗುರುತಿಸುವುದು.**

ಒಮ್ಮೆ ಪ್ರಶ್ನೆಗಳನ್ನು ಸಿದ್ದಪಡಿಸಿದ ನಂತರ (ಪ್ರತಿಯೊಂದು ಪ್ರಕರಣಕ್ಕು ಸಂಬಂಧಿಸಿದಂತೆ ಕನಿಷ್ಠ ಐದು ಪ್ರಶ್ನೆಗಳಿರುವಂತೆ ನೋಡಿಕೊಳ್ಳಿ) ಅವುಗಳನ್ನು ತಜ್ಞರಿಂದ ಮೌಲೀಕರಣಕ್ಕೊಳಪಡಿಸಬೇಕು. ಮೂವರು ಸೂಕ್ತ ತಜ್ಞರನ್ನು ಗುರುತಿಸಬಹುದಾಗಿದೆ. "ಸೂಕ್ತ ತಜ್ಞರು" ಎಂದರೆ ಸಂಬಂಧಿಸಿದ ಕ್ಷೇತ್ರ ಹಾಗೂ ಅದರ ಆಗುಹೋಗುಗಳ ಬಗ್ಗೆ ಉತ್ತಮವಾದ ಜ್ಞಾನವುಳ್ಳ ವ್ಯಕ್ತಿಗಳು. ಉದಾಹರಣೆಗೆ ಸೂಕ್ತ ತಜ್ಞನಾಗುವವನು ಯಾವುದೇ ವ್ಯವಸಾಯಿಕ ಪಸಲುಗಳಿಗೆ ಸಂಬಂಧಿಸಿದಂತೆ ಒಬ್ಬ ಕೃಷಿಕ (ಕಾರ್ಯನಿರತ ಅಥವಾ ಕೃಷಿಯ ಬಗ್ಗೆ ಉತ್ತಮ ಜ್ಞಾನವಿರುವ)ಒಬ್ಬ ವ್ಯಾಪಾರಿ (ಕೃಷಿ ಉತ್ಪನ್ನಗಳು ಈ ಪಸಲುಗಳ ದೊಡ್ಡ ವ್ಯಾಪಾರಿ ಹಾಗೂ ಅವುಗಳ ವಹಿವಾಟಿನ ಬಗ್ಗೆ ಜ್ಞಾನವುಳ್ಳವನು) ಹಾಗೂ ಕೃಷಿ ವಿಶ್ವವಿದ್ಯಾಲಯದಲ್ಲಿ ಸೇರ್ಪಡೆಗೊಂಡಿರುವ ಒಬ್ಬ ಕೃಷಿ ವಿಜ್ಞಾನಿ ಅಥವಾ ಕೃಷಿ ಇಲಾಖೆಯ ಒಬ್ಬ ಸರ್ಕಾರೀ ನೌಕರ ಅಥವಾ ಬೀಜೋತ್ಪನ್ನ ಉದ್ದಿಮೆ ಅಥವಾ ನಂತರದ ವಹಿವಾಟಿಗೆ ಸಂಬಂಧಿಸಿದ ಒಬ್ಬ ಹಿರಿಯ ಹುದ್ದೆಯಲ್ಲಿರುವ ವ್ಯಕ್ತಿ ಆಗಿರಬಹುದು. ಈ ಸೂಕ್ತ ತಜ್ಞರನ್ನು ಆಯ್ಕೆ ಮಾಡುವಾಗ ಇವರುಗಳೆಲ್ಲರೂ ಒಂದೇ ಕ್ಷೇತ್ರದ ಮೌಲಿಕ ಸರಪಳಿಯಲ್ಲಿ ವಿಭಿನ್ನ ಸ್ತರಗಳನ್ನು ಪ್ರತಿನಿಧಿಸುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು. ಈ ರೀತಿ ಸೂಕ್ತವ್ಯಕ್ತಿಗಳು ವಿಭಿನ್ನವಾಗಿದಷ್ಟು ಮಟ್ಟಿಗೆ ಆಯಾ ಕ್ಷೇತ್ರದ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಪಡೆದುಕೊಳ್ಳಲು ಹಾಗೂ ಮೌಲ್ಯಮಾಪನದಲ್ಲಿ ವಿಭಿನ್ನತೆಯನ್ನು ಹೊಂದಲು ಸಾಧ್ಯವಾಗುತ್ತದೆ. ಸೂಕ್ತ ತಜ್ಞರಿಂದ ಯಾವ ಅಗತ್ಯತೆಗಳನ್ನು ಕಾರ್ಯಗತಗೊಳಿಸಬಹುದೆಂಬುದನ್ನು ಕಂಡು ಹಿಡಿಯಲು ಈ ಎಲ್ಲಾ ಪ್ರಮುಖ ಅಂಶಗಳನ್ನು ಪರಿಗಣಿಸಬಹುದು.

**ಹಂತ–3 ಸೂಕ್ತ ತಜ್ಞರ ಸಹಾಯದಿಂದ ಪ್ರತಿಕ್ರಿಯೆಗಳನ್ನು ಲೆಕ್ಕಚಾರ ಮಾಡುವುದು.**

ಈ ಹಂತವು ಈಗಾಗಲೇ ಸಿದ್ದಪಡಿಸಿದ ಪ್ರಶ್ನೆಗಳನ್ನು ಆಯ್ಕೆ ಮಾಡಿದ ತಜ್ಞರಿಗೆ ಕೇಳುವುದನ್ನು ಒಳಗೊಂಡಿರುತ್ತದೆ. ಪ್ರಶ್ನೆಗಳನ್ನು ಕೇಳುವ ಮೊದಲು ಈ ಇಡೀ ಪರಿಕಲ್ಪನೆಯನ್ನು ಅವರಿಗೆ ವಿವರಿಸತಕ್ಕದ್ದು. ತಜ್ಞರು ಅವರ ಉತ್ತರಗಳನ್ನು ಅಂದರೆ ಪ್ರತಿಕ್ರಿಯೆಗಳನ್ನು ಪೂರ್ಣ ಅಂಕಗಳ ರೂಪದಲ್ಲಿ ನೀಡತಕ್ಕದ್ದು. ಯಾವುದೇ ಕಾರಣಕ್ಕೂ ಅಪೂರ್ಣ ಅಂಕಗಳನ್ನು ನೀಡತಕ್ಕದಲ್ಲ, ತಜ್ಞರು ನೀಡುವ ಅಂಕಗಳನ್ನು ಸೂಕ್ತವಾಗಿ ದಾಖಲಿಸಿ ಕೊಳ್ಳತಕ್ಕದ್ದು. ತಜ್ಞರು ಪ್ರತ್ಯುತ್ತರ ನೀಡುವಾಗ ಪಕ್ಷಪಾತವಾಗುವುದನ್ನು ನಿಯಂತ್ರಿಸಲು ಅವರು ಯಾವುದೇ ವಿಳಂಬ ಮಾಡಿ ಪ್ರತಿಕ್ರಿಯೆ ನೀಡುವುದನ್ನು ನಿಯಂತ್ರಿಸತಕ್ಕದ್ದು.

**ಹಂತ–4 ಪ್ರತಿಯೊಂದು ವಿದ್ಯಮಾನದ ಬಗ್ಗೆ ಬಂದ ಉದ್ದ ಸಾಲು ಹಾಗೂ ಅಡ್ಡ ಸಾಲಿನ ಅಂಕಗಳನ್ನು ಪ್ರತ್ಯೇಕವಾಗಿ ಸಂಕಲಿಸುವುದು.**

ತಜ್ಞರು ಉದ್ದ ಸಾಲಿನ ಅಂಕಗಳನ್ನು ನೀಡುತ್ತಾರೆ. ಅವನ್ನು ಸಂಕಲನಮಾಡಬೇಕು. ಅಡ್ಡ ಸಾಲಿನ ಅಂಕಗಳು ಅಂದರೆ ಪ್ರತಿಯೊಂದು ಪ್ರಶ್ನೆಗಳಿಗೆ ತಜ್ಞರು ನೀಡಿದ ಅಂಕಗಳು. ಒಂದು ವಿದ್ಯಾಮಾನದ ಬಗ್ಗೆ ಐದು ಪ್ರಶ್ನೆಗಳಿಗೆ ನೀಡಿರುವ ಅಂಕಗಳನ್ನು ಸಹ ಸಂಕಲನ ಮಾಡಬೇಕು. ಯಾವ ವಿದ್ಯಾಮಾನವು ಹೆಚ್ಚಿನ ಅಂಕ



ANSSIRD

ಗಳಿಸುತ್ತದೆಯೋ ಅದು ಅತ್ಯುತ್ತಮ ವಿದ್ಯಮಾನ ಹಾಗೂ ಸದರಿ ವಿದ್ಯಮಾನವನ್ನು ಬೇರೆ ವಿದ್ಯಮಾನಗಳಿಗೆ ಹೋಲಿಸಿದಲ್ಲಿ ಕನಿಷ್ಠ ಸರಾಸರಿ ಅಂಕಗಳಿಸಿದ ಪ್ರಶ್ನೆಯು ದುರ್ಬಲ ಕೊಂಡಿ ಆಗಿರುತ್ತದೆ. ಈ ಕನಿಷ್ಠ ಅಂಕಗಳಿಸಿದ ವಿದ್ಯಮಾನ ಹಾಗೂ ಅನಿಷ್ಠ ಅಂಕ ಗಳಿಸಿದ ಪ್ರಶ್ನೆಗಳು ಮಧ್ಯಂತರದ ಅಂಶಗಳಾಗಿರುತ್ತವೆ. ಅಥವಾ ಸೂಕ್ತವಾಗಿ ಬೇರ್ಪಡಿಸಬಹುದಾದ ಭಾಗವಾಗಿರುತ್ತದೆ. ಇದು ಉತ್ತಮ ಫಲಿತಾಂಶವನ್ನು ಒದಗಿಸುತ್ತದೆ. ಕೆಳಗಿನ 5ನೇ ಕೋಷ್ಠಕದಲ್ಲಿ ಪ್ರಶ್ನೆಗಳ ಪಟ್ಟಿಯನ್ನು ತಜ್ಞರು ನೀಡಿರುವ ಅಂಕಗಳೊಂದಿಗೆ ನಿರ್ದೇಶನಕ್ಕಾಗಿ ನೀಡಲಾಗಿದೆ.

**ಎನ್‌ಟಿಇಡಿಯ ಮೇಲೆ ಮಾಡಲಾದ 3ಇ ಅಭ್ಯಾಸದ ಉದಾಹರಣೆ:**

(ಪ್ರಶ್ನೆಗೆ ನೀಡಬಹುದಾದ ಉತ್ತರವು ಅತ್ಯುತ್ತಮ ಹಾಗೂ ಅದರ ಆಗುಹೋಗುಗಳ ಬಗ್ಗೆ ಚರ್ಚಿಸಲ್ಪಡುವಂತಿದ್ದರೆ ಗರಿಷ್ಠ ಅಂಕವನ್ನು ಕೊಡಿ. ಇಲ್ಲದಿದ್ದರೆ ಕನಿಷ್ಠ ಅಂಕಕೊಡಿ. ನಿಮ್ಮ ಉತ್ತರವನ್ನು 1 ರಿಂದ 5ರವರೆಗೆ ಅಂಕಮಾನಕದಲ್ಲಿ ಮಾತ್ರ ಕೊಡಿ. ಅಪೂರ್ವ ಅಂಕನೀಡಿಕೆಗೆ ಅವಕಾಶವಿಲ್ಲ)

| ವಿವರ | ತಜ್ಞ–1ರ ಉತ್ತರ | ತಜ್ಞ–1ರ ಉತ್ತರ | ತಜ್ಞ–1ರ ಉತ್ತರ | ಒಟ್ಟು ಅಂಕ | ಸರಾಸರಿ |
|---|---|---|---|---|---|
| **ವಾಸ್ತವಾಂಶ** | | | | | |
| 1. ಪರೋಪ ಜೀವಿಗಳ–ಕ್ರಿಮಿಗಳು ಹಾಗೂ ರೋಗಬಾಧನೆಯಿಂದ ಆಗುತ್ತಿರುವ ಮರಗಳ ನಾಶವು ಯಾವ ದರದಲ್ಲಿದೆ? | 3 | 2 | 2 | 7 | 2.33 |
| 2. ಈ ಕ್ಷೇತ್ರದಲ್ಲಿ ಓಖಿಈಕಗೆ ಲಭ್ಯವಾಗುವ ಗೋದಾಮು ಸೌಲಭ್ಯವನ್ನು ನೀವು ಹೇಗೆ ದರಮೌಲ್ಯಮಾಪನ ಮಾಡುವಿರಿ? | 2 | 4 | 3 | 9 | 3 |
| 3. ಮರಗಳ ಸಂರಕ್ಷಣೆಯ ಬಗ್ಗೆ ಸ್ಥಳೀಯ ಜನತೆಯಲ್ಲಿರುವ ಜ್ಞಾನದ ಮಟ್ಟವೇನು? | 4 | 4 | 3 | 11 | 3.67 |
| 4. ವ್ಯಾಪಾರಿಗಳು ಸಂಗ್ರಹಕಾರರಿಗೆ ನೀಡುವ ಆರ್ಥಿಕ ನೆರವನ್ನು ಯಾವರೀತಿ ದರ ಮಾಪನ ಮಾಡುವಿರಿ? | 1 | 2 | 2 | 5 | 1.66 |
| 5. ಓಖಿಈಕ ಮರಗಳ ಬೆಳವಣಿಗೆಗೆ ಅನು ಕೂಲಕರವಾದ ವಾತಾವರಣ ಸ್ಥಿತಿಯನ್ನು ಯಾವರೀತಿ ದರಮಾಪನ ಮಾಡುವಿರಿ? | 5 | 4 | 4 | 13 | 4.33 |
| **ಬೇಡಿಕೆ:** | | | | | |
| 1. ಸ್ಥಳೀಯ ಮಾರುಕಟ್ಟೆಯಲ್ಲಿ ಉತ್ತ ನ್ನವೊಂದರ ಬೇಡಿಕೆಯ ಹೆಚ್ಚಳ ವನ್ನು ಯಾವರೀತಿ ದರ ಮಾಪನ ಮಾಡುವಿರಿ? | 5 | 5 | 5 | 15 | 5 |
| 2. ಇತ್ತೀಚಿನ ದಿನಗಳಲ್ಲಿ ಉತ್ಪನ್ನಗಳ ಬೆಲೆಗಳು ನೀವು ಹೇಳುವ ರೀತಿಯಲ್ಲಿ ಎಷ್ಟುಗಮನಾರ್ಹವಾಗಿ ಹೆಚ್ಚುತ್ತಿವೆ? | 4 | 4 | 4 | 12 | 4 |
| 3. ಈ ಉತ್ಪನ್ನವನ್ನು ಮಾರುಕಟ್ಟೆಯಲ್ಲಿ ಕೊಳ್ಳುವವರನ್ನು ನೀವು ಹೇಗೆ ದರ ಮಾಪನ ಮಾಡುವಿರಿ? | 5 | 3 | 4 | 12 | 4 |
| 4. ಸಂಗ್ರಹಣೆಯ ತಿಂಗಳುಗಳಲ್ಲಿ ಮಾರುಕಟ್ಟೆಯಲ್ಲಿ ಹೊರಗಿನಿಂದ ಬಂದು ಕೊಳ್ಳುವವರ ಹಾಜರಿಯ ನ್ನುಹೇಗೆದರಮಾಪನ ಮಾಡುವಿರಿ? | 3 | 4 | 4 | 11 | 3.7 |
| 5. ಸ್ಥಳೀಯ ಮಾರುಕಟ್ಟೆಯಲ್ಲಿ ಅತ್ಯು ತ್ತಮ ವ್ಯಾಪಾರ/ವಹಿವಾಟಾದ ಬಗ್ಗೆ ಹೇಗೆ ದರಮಾಪನ ಮಾಡುವಿರಿ? | 2 | 2 | 4 | 8 | 2.67 |
| **ಸಾಂಸ್ಥಿಕ:** | | | | | |
| 1. ನ್ಯಾಯಿಕ ವ್ಯವಸ್ಥೆಗಳು ಈ ಅರಣ್ಯ ಉತ್ಪನ್ನಗಳ ವ್ಯಾಪಾರದಲ್ಲಿ ಹೇಗೆ ಉತ್ತೇಜಕವಾಗಿವೆ. | 2 | 4 | 1 | 7 | 2.33 |
| 2. ಈ ಸರಕುಗಳ ವ್ಯಾಪಾರಕ್ಕೆ ಅರಣ್ಯ ಸಹ ಕಾರಿಗಳ ಉತ್ತೇಜನ ಎಷ್ಟು ಉತ್ತಮ ವಾಗಿದೆ? | 1 | 2 | 2 | 5 | 1.67 |
| 3. ನೀವು ಹೇಳುವಂತೆ ಸಂಗ್ರಹಕಾರರಿಗೆ ಅರಣ್ಯ ಇಲಾಖೆಯ ಉತ್ತೇಜನ ಹೇಗಿದೆ? | 1 | 1 | 1 | 3 | 1 |
| 4. ಸ್ಥಳೀಯ ಸನ್ನಿವೇಶದಲ್ಲಿ ಸಂಗ್ರಹಣೆಯಲ್ಲಿ ತೊಡಗುವ ಸಂಪ್ರದಾಯಿಕ ಸಂಸ್ಥೆಗಳ ಇರುವಿಕೆಯನ್ನು ಹೇಗೆ ದರ ಮಾಪನ ಮಾಡುವಿರಿ? | 1 | 1 | 1 | 3 | 1 |
| 5. ಈ ಅರಣ್ಯ ಉತ್ಪನ್ನಗಳ ವಹಿವಾಟಿನಲ್ಲಿ ವ್ಯಾಪಾರ ನಿಬಂಧನೆಗಳ ಬೆಂಬಲ ಹೇಗಿದೆ? | 1 | 3 | 2 | 6 | 2 |

| | | | | | |
|---|---|---|---|---|---|
| **ಔದ್ಯಮಿಕ:** 1. ನಿಮ್ಮ ಅಭಿಪ್ರಾಯದಂತೆ ಸಮೀಪದ ಪ್ರದೇಶದಲ್ಲಿ ನಿರ್ವಹಣಾ ಘಟಕ ವಿರುವುದರ ಬಗ್ಗೆ ಯಾವ ಅಂಕ ನೀಡಲು ಇಚ್ಛಿಸುವಿರಿ? | 3 | 3 | 2 | 8 | 2.67 |
| 2. ಸ್ಥಳೀಯ ಪ್ರದೇಶದಲ್ಲಿ ನಿರ್ವಹಣಾ ಘಟಕಗಳ ಬೆಳವಣಿಗೆಯನ್ನು ಯಾವ ರೀತಿ ದರಮಾಪನ ಮಾಡುವಿರಿ? | 3 | 3 | 3 | 9 | 3 |
| 6. ಸ್ಥಳೀಯ ಸನ್ನಿವೇಶದಲ್ಲಿ ಸಾಗಾಣಿಕೆ ಉದ್ಯಮದ ಬಗ್ಗೆ ಎಷ್ಟು ಅಂಕ ನೀಡಲು ಇಚ್ಛಿಸುವಿರಿ? | 4 | 4 | 3 | 11 | 3.67 |
| 7. ದಾಸ್ತಾನು ತಾಂತ್ರಿಕತೆಯ ಲಭ್ಯತೆಯನ್ನು ಹೇಗೆ ದರಮಾಪನ ಮಾಡುವಿರಿ? | 2 | 4 | 5 | 11 | 3.67 |
| 8. ಔಷಧಿ ಉದ್ದಿಮೆಗಳಿಂದ ಸೃಷ್ಟಿಯಾದ ಬೇಡಿಕೆ ಎಷ್ಟರ ಮಟ್ಟಿಗೆ ಉಚಿತವಾಗಿದೆ. | 2 | 2 | 3 | 7 | 2.33 |

ಮೇಲೆ ನೀಡಿರುವ ಉದಾಹರಣೆಯು ಒಂದು ಚಟುವಟಿಕೆಗೆ ಸಂಬಂಧಿಸಿದ್ದಾಗಿದೆ. ಕನಿಷ್ಠ ಮೂವರು ತಜ್ಞರನ್ನು ಗುರಿಯಾಗಿಸಿಕೊಂಡು ತ್ರಿಕೋಣಾತ್ಮಕ ಅಭ್ಯಾಸ ನಡೆಸಿದ ನಂತರ ಗುರುತಿಸಲ್ಪಟ್ಟ ಎಲ್ಲಾ ಚಟುವಟಿಕೆಗಳ ಬಗ್ಗೆಯೂ ಸಹ ಇದೇ ರೀತಿಯ ಪ್ರಶ್ನೆಗಳನ್ನು ಅಭಿವೃದ್ಧಿ ಪಡಿಸುವುದು ಅಗತ್ಯವಾಗಿದೆ. ಪ್ರತಿಯೊಬ್ಬರು ಆಯ್ಕೆಮಾಡಿಕೊಳ್ಳುವ ಪ್ರತಿಯೊಂದು ಚಟುವಟಿಕೆ (ಉದಾಹರಣೆ: ಕೃಷಿ, ಪಶು ಸಂಗೋಪನೆ) ಬೇರೆಬೇರೆ ತಜ್ಞವೃಂದವನ್ನು ಹಾಗೂ ಬೇರೆಬೇರೆ ಪ್ರಶ್ನಾವಳಿಗಳನ್ನು ಹೊಂದಿರುವುದು ಅತ್ಯಗತ್ಯವೆಂಬುದನ್ನು ನೆನಪಿನಲ್ಲಿಡಿ. ಉದಾಹರಣೆಗೆ ಗೋದಿ ಹಾಗೂ ಭತ್ತಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ಅರ್ಥೈಸಿಕೊಳ್ಳಲು ವಿಭಿನ್ನ ಪ್ರಶ್ನಾವಳಿಗಳನ್ನು ಹೊಂದಿರತಕ್ಕದಾಗಿದೆ.

**ಹಂತ–5: ಮಧ್ಯಂತರಗೊಳಿಸುವ ಅಂಶವನ್ನು ಗುರುತಿಸುವುದು.**

" ಕನಿಷ್ಠ ಸರಾಸರಿ ಅಂಕ" ಗಳಿಸುವ ವಿದ್ಯಮಾನಗಳು ಪ್ರಮುಖ ಅಂಶಗಳೆಂದು ಪರಿಗಣಿಸಲ್ಪಡುತ್ತವೆ. ಮೇಲೆ ತಿಳಿಸಿದ ಉದಾಹರಣೆಗಳು ಸಾಂಖ್ಯಿಕ ವಿದ್ಯಮಾನಗಳಲ್ಲಿ ವ್ಯಕ್ತವಾಗಿರುವ ಪ್ರಮುಖ ಅಂಶಗಳಾಗಿವೆ.

**ಉದಾಹರಣೆ:**

ಅ) ಸಂಗ್ರಹಣೆಯಲ್ಲಿ ಅರಣ್ಯ ಇಲಾಖೆಯ ಬೆಂಬಲವು ತುಂಬಾ ಕಡಿಮೆ ಇದೆ.

ಆ) ಈ ಸರಕುಗಳ ವಹಿವಾಟಿನಲ್ಲಿ ಸರ್ಕಾರದಿಂದ ಉತ್ತೇಜಿಸಲ್ಪಡುವ ಸಂಗ್ರಹಕಾರರ ಸಹಕಾರ ಸಂಘಗಳ ಲಭ್ಯತೆ ಇರುವುದಿಲ್ಲ,

ಇ) ಮಾರುಕಟ್ಟೆ ಪ್ರದೇಶದಲ್ಲಿ ನಡೆಯುವ ವ್ಯಾಪಾರ ವಹಿವಾಟು ಈ ಚಟುವಟಿಕೆಗಳಿಗೆ ನೆರವಾಗುವಂತೆ ತೋರುತ್ತಿಲ್ಲ.

ಈ ಮೂರು ಅಂಶಗಳು ಜೀವನಾಂಶಗಳ ವಹಿವಾಟುದಾರರ ಮೇಲೆ ಲೆಕ್ಕ ಹಾಕಿದಾಗ ಈ ಚಟುವಟಿಕೆಯಲ್ಲಿ ಒಳಗೊಂಡಿರುವ ಜೀವನಾಂಶ ವಹಿವಾಟಿನ ಬಗ್ಗೆ ಉತ್ತೇಜನ ನೀಡಲು ಸಹಕಾರಿಯಾಗುತ್ತದೆ. ಈ ಅಂಶಗಳನ್ನು ಮಧ್ಯಂತರಗೊಳಿಸುವ ಅಂಶಗಳೆಂದು ಕರೆಯಬಹುದು.

ANS SIRD

**ಹಂತ–6: ವಿಭಿನ್ನ ಚಟುವಟಿಕೆಗಳ ಅಂಕಗಳನ್ನು ಹೋಲಿಸಿ ನೋಡುವುದು.**

(ಕ್ಷೇತ್ರ–ವಲಯವನ್ನು ಈಗಾಗಲೇ ಆಯ್ಕೆ ಮಾಡಿಕೊಂಡಿದ್ದಲ್ಲಿ ಈ ಹಂತವನ್ನು ಅನ್ವಯಿಸುವ ಅಗತ್ಯವಿರುವುದಿಲ್ಲ)

- ಪ್ರತಿಯೊಂದು ಚಟುವಟಿಕೆಗೆ ತಜ್ಞರು ನೀಡಿದ ಅಂಕಗಳನ್ನು ಸಂಕಲನ ಮಾಡಿರಿ (ಮೇಲಿನ ಕೋಷ್ಟಕದಲ್ಲಿ ಪ್ರಶ್ನೆಗಳು ಇವೆ) ಹಾಗೂ ಪ್ರತಿಯೊಂದು ಉದ್ದ ಸಾಲಿನ ಮೊತ್ತವನ್ನು ಅಡ್ಡ ಸಾಲಿನ ಕೊನೆಯಲ್ಲಿ ಬರೆಯಿರಿ. ಪ್ರತಿಯೊಂದು ಅಡ್ಡಸಾಲಿನ ಅಂಕಗಳ ಸರಾಸರಿಯನ್ನು ಲೆಕ್ಕ ಹಾಕಿ ಸಂಬಂಧಿಸಿದ ಉದ್ದ ಸಾಲಿನಲ್ಲಿ ಬರೆಯಿರಿ(ಸರಾಸರಿ) ( ಉತ್ತರಿಸುವವರು ಮೂವರು ಇರುವುದರಿಂದ ಮೊತ್ತವನ್ನು 3 ರಿಂದ ಭಾಗಿಸಿ.
- ಉದ್ದ ಸಾಲಿನ ಮೊತ್ತಗಳನ್ನು ಪರಿಶೀಲಿಸಿ ಯಾವ ಚಟುವಟಿಕೆಗೆ ಹೆಚ್ಚಿನ ಅಂಕ ಬಂದಿದೆ ಎಂದು ಹೋಲಿಸಿ ನೋಡಿ.
- ಹೆಚ್ಚಿನ ಮೊತ್ತ ಅಂಕ ಗಳಿಸಿರುವ ಚಟುವಟಿಕೆಯು ಎಲ್ಲಾ ಪರಿಸ್ಥಿತಿಯಲ್ಲಿಯೂ ಅತ್ಯುತ್ತಮ ವಹಿವಾಟು ಎಂದು ಪರಿಗಣಿಸುವುದು. ಅನೇಕ ವಹಿವಾಟುಗಳು ಅತ್ಯುತ್ತಮವಲ್ಲದಿದ್ದರೂ ಸಹ ಅವುಗಳ ಬಗ್ಗೆ ಲೆಕ್ಕಚಾರ ಹಾಕುವುದು ಸುಲಬವೆಂದು ಬಹಳಷ್ಟು ಮಂದಿಯ ಅನಿಸಿಕೆ.

ANS SIRD

# ಅಧ್ಯಾಯ–11

## ಜೀವನಾಧಾರದ ಯೋಜನೆಗಳ ನಿರ್ವಹಣೆ

ಇತ್ತೀಚಿನ ವರ್ಷದಲ್ಲಿ ಉದ್ಯಮಕ್ಷೇತ್ರಗಳ ನಿರ್ವಹಣೆಯನ್ನು ಯೋಜನೆಗಳಾಗಿ ವಿಂಗಡಿಸಿದ್ದಾರೆ, ಸಂಸ್ಥೆ, ಸಂಘಗಳು ಮತ್ತು ಸರ್ಕಾರದ ಉದ್ಯಮ ಕ್ಷೇತ್ರಗಳಲ್ಲಿ ನಿರ್ವಹಣೆಯ ಯೋಜನೆಗಳಾಗಿ ಹೊರಹೊಮ್ಮಿದೆ. ಯೋಜನಾ ಚಿಂತಕರು PEETER DUCKER ಇವರ ಕೃತಿ MANAGING FOR FUTURE ಮತ್ತು Fhomus peter ರವರ ಕೃತಿ Liberation Management ಗಳ ಎಲ್ಲಾ ಭವಿಷ್ಯದ ಕೆಲಸಗಳನ್ನು ಯೋಜನೆಗಳಾಗಿ ವಿಂಗಡಿಸಿ ಅದನ್ನು ತಂಡಗಳಲ್ಲಿ ಪೂರ್ಣಗೊಳಿಸುವುದು, ಸದರ ತಂಡಗಳಲ್ಲಿ ವಿವಿಧ ಒಕ್ಕೂಟದ ಜನರನ್ನು ಒಳಗೊಂಡಿರುತ್ತದೆ. ಎಲ್ಲಾ ಜೀವನಾಧಾರದ ಅಭಿವೃದ್ಧಿ ಮತ್ತು ಆಶ್ರಯ ಕಾರ್ಯಗಳು ಕೂಡಾ ಯೋಜನೆಗಳಾಗಿರುತ್ತವೆ.

ಜೀವನಾಧಾರ ಮಧ್ಯಸ್ಥಿಕೆಯಲ್ಲಿ ಯೋಜನೆ ಆಗುಬಹುದೆಂದು ಕಾಳಜಿವಹಿಸಿಬೇಕು. ಆದರೆ ಜೀವನಾಧಾರದ ಚಟುವಟಿಕೆಯು ಅದನ್ನು ಸೃಷ್ಟಿಸುತ್ತದೆ. ಕಾರ್ಯಾಚರಣೆಯ ಆಧಾರದ ಮೇಲೆ ಮುಂದುವರಿಯುತ್ತದೆ. ಇವರಡನ್ನು ಪರಿಗಣಿಸಿ ಯೋಜನೆಗಳನ್ನು ನಿರ್ವಹಿಸುವುದು ಪ್ರಯೋಜನಕಾರಿಯಾಗಬಹುದು.

### ಯೋಜನೆ ಎಂದರೇನು?

**ಯೋಜನೆಯ ಪ್ರಮುಖ ಗುಣಧರ್ಮಗಳು:**

- ತಾತ್ಕಾಲಿಕ ಪ್ರಯತ್ನ
- ನಿರ್ಧಿಷ್ಟ ಪ್ರಾರಂಭ ಹಾಗೂ ಕೊನೆಯ ದಿನಾಂಕ ನಿಗಧಿಪಡಿಸಿದೆ.
- ಅನನ್ಯವಾಗಿರುತ್ತದೆ, ಯಾವುದೇ 02 ಯೋಜನೆಗಳು ಸೌಮ್ಯತೆ ಇರುವುದಿಲ್ಲ
- ಇದು ಅವಶ್ಯಕ ಜನರ ಗುಂಪಾಗಿದ್ದು, ಗುಂಪು ತಾತ್ಕಾಲಿಕವಾಗಿರುತ್ತದೆ. ಯೋಜನೆ ಕೊನೆಗೊಂಡ ನಂತರ ವಿಲೀನಗೊಳ್ಳುತ್ತವೆ.
- ಯೋಜನೆಗಳು ಆಯವ್ಯಯಗಳನ್ನು ಒಳಗೊಂಡಿರುತ್ತದೆ.
- ಇದಕ್ಕೆ ಪ್ರಯೋಜಕತ್ವದವರು ಇರುತ್ತಾರೆ. ಯೋಜನೆ ಅನುಷ್ಠಾನ ಹಾಗೂ ಮಾರ್ಗದರ್ಶನ ನೀಡಿ ಯೋಜನೆ ಸಾರ್ಥಕತೆಯೋಗುವಂತೆ ನೋಡಿಕೊಳ್ಳುತ್ತಾರೆ.
- ಇದಕ್ಕೆ ನಿಶ್ಚಿತ ವಾಸ್ತವತೆ ಗುರಿ ಹಾಗೂ ಕಾಲಾವಧಿ ಇರುತ್ತದೆ.

### ಯೋಜನೆ ನಿರ್ವಹಣೆ ಎಂದರೇನು?

ಯೋಜನೆಗಳ ಅವಶ್ಯಕತೆ, ಪೂರೈಸಕಲಾದ ವ್ಯವಹಾರ ಜ್ಞಾನ ಕೌಶಲ್ಯ, ಯಂತ್ರೋಪಕರಣ ಮತ್ತು ತಂತ್ರಜ್ಞಾನಗಳ ಅನ್ವಯ ಅಳವಡಿಕೆ.

### ಪ್ರೋಗ್ರಾಮ್ ಎಂದರೇನು?

ಯೋಜನೆಗಳ ಸಮೂಹವನ್ನು ಸಮುಚ್ಚಾಯವಾಗಿ ನಿರ್ವಹಿಸುವದು ಅದರ ಲಾಭವು ಒಂದು ಯೋಜನೆ ನಿರ್ವಹಿಸುವದಕ್ಕಿಂತ ಅಧಿಕವಾಗಿರುತ್ತದೆ.

ANS SIRD

## Operation (ಕಾರ್ಯಾಚರಣೆ) ಎಂದರೇನು?

- ಕಾರ್ಯಾಚರಣೆ ಜನರಿಂದ ನಿರ್ವಹಿಸಲ್ಪಟ್ಟಿರುತ್ತದೆ
- ಕಾರ್ಯಾಚರಣೆ ಪುನರಾವರ್ತನೆಗಳ ಆಗಬಹುದು ಆದರೆ ಕಾರ್ಯಕ್ರಮ ತಾತ್ಕಾಲಿಕವಾಗಿರುತ್ತದೆ.

ಕಾರ್ಯಕ್ರಮ (Programme)ಕಾರ್ಯಾಚರಣೆ (Operation) ಸಮಾನತೆಗಳೇನು?

- ಇವರೆಡು ಜನರಿಂದ ನಿರ್ವಹಿಸಲ್ಪಡುತ್ತದೆ.
- ಇವರೆಡು ರಕ್ಷಿಸಲ್ಪಡುತ್ತವೆ.
- ಇವರಡರ ಸಂಪನ್ಮೂಲ ಮಿತಿಯಾಗಿರುತ್ತವೆ.
- ಇವುಗಳ ಅನುಷ್ಠಾನ ನಿರ್ವಹಣೆ ನಿಯಂತ್ರಣಕ್ಕೆ ಒಳಪಟ್ಟಿರುತ್ತದೆ.

ಕಾರ್ಯಾಚರಣೆ (Operation) ಮತ್ತು ಕಾರ್ಯಕ್ರಮ (Programme) ಅಸಮಾನತೆಗಳೇನು?

(Project) ತಾತ್ಕಾಲಿವಾಗಿದ್ದು (Operation) ಪುನರಾವರ್ತಿಸುತ್ತದೆ. ಯೋಜನೆಗಳಲ್ಲಿ ತಾತ್ಕಾಲಿಕ ತಂಡಗಳಿರುತ್ತವೆ. ಆದರೆ ದಲ್ಲಿ ಸ್ಥಿರವಾದ ತಂಡಗಳಿರುತ್ತವೆ.

ಪ್ರತಿ ಯೋಜನೆ ಸ್ವಭಾವತ ಅನನ್ಯವಾಗಿರುತ್ತದೆ, ಆದರೆ Operation ಗಳ ಹಂತಗಳು ತದ್ರೂಪವಾಗಿರುತ್ತವೆ.

## Project ನಿರ್ವಹಣೆ ಒಕ್ಕೂಟ:

ಯೋಜನೆಗಳಿಗೆ, ನಿರ್ಧಿಷ್ಟ ಸಮಯಬದ್ಧ ಚಟುವಟಿಕೆಗಳು ಮತ್ತು ಯೋಗ್ಯ ಸಾಮರ್ಥ್ಯ ಅಗತ್ಯವಿರುತ್ತದೆ. ಹಾಗೂ ಸಾಂಸ್ಥಿಕ ಸಹ ಯೋಜನೆ ಕೆಲಸ ಕೂಡಾ ನಿರ್ಧಿಷ್ಟವಾಗಿ ಅಳವಳಡಿಸುವುದು ಅವಶ್ಯವಿದೆ. ವಿವಿಧ ಇಲಾಖೆಗಳಿಗೆ ಸೇರಿರುವ ಜನರು ಸಾಮರ್ಥ್ಯ ಒಟ್ಟಿಗೆ ಸೇರಿಸಿ ಅವರ ಜವಾಬ್ದಾರಿಯನ್ನು ವಹಿಸಿ ನಿರ್ವಹಣೆ ಮಾಡುವುದು.

## ಯೋಜನೆ ಸಂಸ್ಥೆಗಳ ಪ್ರಯೋಜನಗಳು:

- ತಂಡದ ಸದಸ್ಯರಿಗೆ ಕಾರ್ಯಗಳ ಬಗ್ಗೆ ಸ್ಪಷ್ಟ ವ್ಯಾಖ್ಯಾನಿಸುವುದು
- ತಂಡದ ಸದಸ್ಯರು ಯೋಜನೆಗೆ ಹೆಚ್ಚು ಬದ್ಧರಾಗಿರುತ್ತಾರೆ.
- ಯೋಜನೆ ಹೆಚ್ಚ ಪರಿಣಾಮಕಾರಿ ಮತ್ತು ಸಂವಹನ ಹೊಂದುತ್ತದೆ.
- ಕಾರ್ಯಸಾಧ್ಯವಿರುತ್ತದೆ, ಹಾಗೂ ನಿರ್ದಿಷ್ಠ ಪ್ರತಿಫಲ, ನಿಷ್ಫಲಗಳು ಇರುತ್ತವೆ.

ANS SIRD

## ಯೋಜನಾ ಸಂಸ್ಥೆಯ ದುಷ್ಪರಿಣಾಮಗಳು:

- ಯೋಜನೆಗಳು ಮುಗಿದ ಮೇಲೆ, ಅಲ್ಪಾವಧಿ ಭದ್ರತಾ ಕೊರತೆಗಳಿಂದ ತಂಡಗಳು ವಿಸರ್ಜಿಸಲ್ಪಡುತ್ತವೆ.
- ಸೌಲಭ್ಯ ಮತ್ತು ಕೆಲಸದ ಕರ್ತವ್ಯಗಳು ದ್ವಿಗುಣಗೊಳ್ಳುತ್ತವೆ.(ಪ್ರತಿಯೊಂದು ಯೋಜನೆಗೆ ಆಡಳಿತಾಧಿಕಾರಿ HR ಕೋರ್ಡಿನೇಟರ್, ಇತರೆ ಸೌಲಭ್ಯ ದ್ವಿಗುಣಗೊಳ್ಳುತ್ತದೆ.)
- ಸಂಪನ್ಮೂಲಗಳ ಅಸಮರ್ಪಕ ಬಳಕೆ, ಸಂಪನ್ಮೂಲ ವಸ್ತುಗಳು ಮಾನವ ಸಂಪನ್ಮೂಲ ಅಗತ್ಯದ ನಂತರವು ಸ್ಥಗಿತಗೊಳ್ಳದ ಪ್ರವೃತ್ತಿ ಹೊಂದುತ್ತದೆ. (ಯೋಜನೆಯ ನಿರ್ವಾಹಕರು ತಮ್ಮ ತಂಡದ ಸದಸ್ಯರ ಮೇಲೆ ಹೆಮ್ಮೆ ಇರುತ್ತದೆ. ಆದರೆ ಅದು ತಂಡದ ಸದಸ್ಯರು ಕುಗ್ಗುವದರಿಂದ ಅವರಲ್ಲಿ ಬಯನಿರ್ಮಾಣವಾಗುತ್ತದೆ.)

## ಯೋಜನೆಯ ನಿಯಂತ್ರಣದ ಅಂಶಗಳು

ಯೋಜನಾ ನಿರ್ವಹಣೆಯ 05 ಅಂಶಗಳ ಮೇಲೆ ನಿಯಂತ್ರಣ ಪಡೆಯಲು ಯತ್ನಿಸುತ್ತದೆ.

**ಸಮಯ:**

ಯೋಜನೆ ಪೂರ್ಣಗೊಳಿಸು ಸಮಯ ಅಗತ್ಯತೆ ಇದೆ. ವಿಶೇಷವಾಗಿ ಯೋಜನೆಯ ಘಟಕಗಳನ್ನು ಪೂರ್ಣಗೊಳಿಸಲು ಸಮಯ ವಿಭಜಿಸಲಾಗಿದೆ. ನಂತರ ಪ್ರತಿ ಘಟಕ, ಕೆಲಸಕಾರ್ಯ ಪೂರ್ಣಗೊಳಿಸಲು ಸಮಯದ ಹಂತಗಳನ್ನು ವಿಭಜಿಸಲಾಗುತ್ತಿದೆ.

**ವೆಚ್ಚ:**

ಇದನ್ನು ಸಮಯದ ಅಂಶಗಳಿಂದ ಗುರ್ತಿಸಲ್ಪಡುತ್ತದೆ, ಆಂತರಿಕ ಯೋಜನೆಯ ಅಭಿವೃದ್ದಿ ವೆಚ್ಚವು ಸಮಯ ಮತ್ತು ಯೋಜನೆ ಒಳಗೊಂಡಿರುವ ತಂಡದ ಸದಸ್ಯರ ವೆಚ್ಚವನ್ನು ಗುಣಿಸಲ್ಪಡುತ್ತದೆ. ಯೋಜನೆಗೆ ಸ್ವತಂತ್ರ ಸಮಲೋಚಕವನ್ನು ನೇಮಕ ಮಾಡುವಾಗ ವೆಚ್ಚವನ್ನು ಸಾಮಾನ್ಯವಾಗಿ ಸಮಾಲೋಚಕರು ಅಥವಾ ಗಂಟೆಗೊಮ್ಮೆ ಯಂತೆ ದರ ಪರಿಗಣಿಸಬೇಕಾಗುತ್ತದೆ.

**ಗುಣಮಟ್ಟ:**

ಯೋಜನೆ ಪ್ರತಿ ಸದಸ್ಯರ ವೈಯಕ್ತಿಕ ಕೆಲಸದ ಮೇಲೆ ಗುಣಮಟ್ಟ ತಿಳಿಯಬಹುದು ಕೆಲವು ಕೆಲಸಗಳು ನಿಗಧಿ ಪಡಿಸಿದ ಸಮಯದೊಳಗೆ ಸಮರ್ಪಕವಾಗಿ ಪೂರ್ಣಗೊಳಿಸುವುದು ಗುಣಮಟ್ಟವನ್ನು ಗುರ್ತಿಸಬಹುದು ದೊಡ್ಡ ಯೋಜನೆಗಳು ವೇಳೆ ಮತ್ತು ವೆಚ್ಚವನ್ನು ಅವಲಂಬಿಸಿರುತ್ತದೆ.

**ಅಪಾಯ:**

ಅಂತ್ವಂರಿತ ಅಪಾಯ ಅಥವಾ ಸಂಬಾವ್ಯ ವೈಫಲ್ಯಗಳನ್ನು ನಿರ್ಧಿಷ್ಟವಾದ ಸಮಯ ಮತ್ತು ಸಂಪನ್ಮೂಲಗಳನ್ನು ಒದಗಿಸಿ ಅಪಾಯ ನಿವಾರಿಸಹುದು. ಕೆಲವು ಬಾರಿ ಅಪಾಯವು ಅಲ್ಲೋಂದ ಅವಾಕಾಶವಿದೆ ಎಂದು ನಕಾರತ್ಮಕವು ಆಗಿರುಬಹುದು (ಉದಾ. ನಿರೀಕ್ಷಿಸದಕ್ಕಿಂತ ವೇಗವಾಗಿ ಯೋಜನೆಯನ್ನು ಪೂರ್ಣಗೊಳಿಸುವುದು.)

ANSSIRD

## ಜೀವನಾಧಾರದ ಮಧ್ಯಸ್ಥಿಕೆ ನಿಯಮ(Intervention)

ಒಬ್ಬ ವ್ಯಕ್ತಿ ಅಥವಾ ಸಂಸ್ಥೆಯ ಪ್ರಜ್ಞಾ ಪೂರ್ವ ಪ್ರಯತ್ನದಿಮದ ಇತರರ ಜೀವನವನ್ನು ಒಂದು ಸುಸ್ಥಿರ ಸುಧಾರಣೆ ತರುವ ಕಡಿಮೆ ದೋಷಗಳ ನಿರ್ವಹಣೆ ಮಾಡಲು ಸಾಧ್ಯವಾಗುತ್ತದೆ.

## ಜೀವನಾಧಾರದ ಮಧ್ಯಸ್ಥಿಕೆಯು (Intervention) ಯೋಜನೆಯಾಗಿ ಪರಿಗಣಿಸಲಾಗುವುದೇ?

ನಿಯಮಗಳ ಹಾಗೂ ಕಾರ್ಯಾನಿರ್ವಹಣೆ ಉದ್ದೇಶವನ್ನು ಯೋಜನೆಯಾಗಿ ಪರಿಗಣಿಸಬಹುದು ನಿರ್ಧಿಷ್ಠ ಪ್ರಾರಂಭ ಮತ್ತು ಮುಕ್ತಾಯ ಅಂಶಗಳು ಮುಖ್ಯವಾಗಿರುತ್ತವೆ. ವೆಚ್ಚ ಮತ್ತು ಉತ್ತಮ ನಿರ್ವಹಣೆ ಮಾನದಂಡಗಳನ್ನೊಳಗೊಂಡಿರುತ್ತದೆ. ಜೀವನಾಧಾರದ ಮಧ್ಯಸ್ಥಿಕೆಯನ್ನು ಒಂದು ದೀರ್ಘಕಾಲದ ಕಾರ್ಯಕ್ರಮ ಎಂದು ಪರಿಗಣಿಸಲಾಗುವುದು ವೃತ್ತಿಪರ ಶಾಲೆ ಇದ್ದರೂ, ಹೆಚ್ಚಿನ ವೃತ್ತಿಪರರು ಯೋಜನೆಯ ಹೀತಾಸಕ್ತಿ ವಿಮರ್ಶೇ ನಿರ್ವಹಣೆ ಮತ್ತು ಪ್ರಭಾವದ ನಿರ್ಧಾರಕ್ಕೆ ಹೆಚ್ಚ ಆಧ್ಯತೆ ಇರುತ್ತದೆ.

## ಜೀವನಾಧಾರದ ಮಧ್ಯಸ್ಥಿಕೆಯ ಯೋಜನೆಗಳ ವೈಶಿಷ್ಟಗಳೇನು?

ಒಂದು ಯೋಜನೆ ಯಶಸ್ವಿಗೆ ಕಾಯಾನುಕೂಲತೆ ಅಥವಾ ಕಾರ್ಯತಂತ್ತದ ಹೇಗೆ ಇರುತ್ತದೆಯೇ ಹಾಗೆಯೆ ಒಂದು ಜೀವನಾಧಾರದ ಚಟುವಟಿಕೆ ನಿರ್ಧಿಷ್ಠ ಗುರಿ–ಉದ್ದೇಶ ಉತ್ಪಾದಕ ಚಟುವಟಿಕೆಗಳು ಕ್ರಮವಾಗಿ ಹೊಮದಿರಬೇಕು. ಸಂಬಂಧ ಪಟ್ಟ ಚಟುವಟಿಕೆ ವಸ್ತು ನಿಷ್ಚಿತೆ ಸರಿಯಾದ ಸೂಚಕಗಳು ಮತ್ತು ಕಲ್ಪನೆಗಳನ್ನು ಸರಿಯಾಗಿ ಹೊರತರಬೇಕು, ಯಾರ ಮೂಲಕ ಏನು ಮಾಡಲ್ಪಡುತ್ತದೆಯೋ ಅದು ಯೋಜನೆಯ ಅನುಷ್ಠಾನ ಮತ್ತು ನಿರ್ವಹಣೆಯಲ್ಲಿ ಪಾತ್ರ ನಿರ್ವಹಿಸುತ್ತದೆ.

ಯಾವುದೇ ಯೋಜನೆಯು ಒಳಗೊಂಡಿರುವ ವಿವಿಧ ಕಾರ್ಯಗಳನ್ನು ಅರ್ಥಗರ್ಭಿತವಾಗಿ ತಿಳಿಸಿದೆ.

1) ಕೆಲಸದ ರಚನಾಕ್ರಮ
2) ಸಂಪನ್ಮೂಲಗಳ ಅಂದಾಜು
3) ಕೆಲಸವನ್ನು ಸಂಘಟಿಸುವುದು
4) ಮಾನವ ಸಂಪನ್ಮೂಲ ಆಯ್ಕೆ ಹಾಗೂ ಅಭಿವೃದ್ದಿ
5) ವಸ್ತು (ಸಾಮಾಗ್ರಿ) ಸಂಪನ್ಮೂಲ ಪಡೆಯುವುದು
6) ಕೆಲಸಗಳ ವಿಕಾಸ ಮತ್ತು ಸಂವಹನ
7) ಯೋಜನೆ ನಿರ್ವಹಣೆಯ ಮಾರ್ಗದರ್ಶನ ಮತ್ತು ನಿಯಂತ್ರಣ
8) ನಿಯತಕಾಲಿಕವಾಗಿ ಪ್ರಗತಿ ಅವಲೋಕಿಸುವುದು
9) ವಿನ್ಯಾಸ ಸರಿಪಡಿಸುವಿಕೆ
10) ವಸ್ತು ಸ್ಥಿತಿಗಳ ಆದರಿಸಿ, ಪಲಿತಾಂಶ ವಿಶ್ಲೇಷಿಸುವುದು

ಪ್ರತಿಯೊಂದು ಕಾರ್ಯಗಳು ಪೂರ್ಣ ಸ್ವರೂಪದ ಯೋಜನೆಯನ್ನಾಗಿ ಮಾಡಲು ಸೂಚಿಸುತ್ತದೆ. ಪ್ರತಿಯೊಂದು ಕಾರ್ಯವು ಇತರೆ ಕಾರ್ಯಗಳೊಂದಿಗೆ ಸಹಯೋಗದಿಂದರಬೇಕು ಹಾಗೂ ಸಂಶೋಧನೆ ಮತ್ತು ಅಭಿವೃದ್ದಿ ಪ್ರಮಾಣದ ಹಂತಗಳ ಮಧ್ಯಸ್ಥಿಕೆಯನ್ನು ಗೃಹಿಸುವುದು ಪ್ರಮುಖವಾಗಿರುತ್ತದೆ.

ANS SIRD

1) ಜೀವನಾಧಾರದ ಮಧ್ಯಸ್ಥಿಕೆ ಅಪೇಕ್ಷಿತ ಫಲಾನುಭವಿಗಳ, ಸಂಪನ್ಮೂಲಗಳ ಕೊರತರೆ ಮತ್ತು ರಾಜಕೀಯ ಘೋಷಿತ ಗುರಿಯಾಗಿರುತ್ತದೆ. ಇದರ ಪರಿಣಾಮವಾಗಿ ಭಾಹ್ಯ ಪರಸರದ ಮಧ್ಯಸ್ಥಿಕೆ ಅಚಿತಿಮ ಪಲಿತಾಂಶದಲ್ಲಿ ಹೆಚ್ಚಿನ ಪಾತ್ರವಹಿಸುತ್ತದೆ. ಬಾಹ್ಯ ವಾತಾವರಣವನ್ನು ನಿರ್ವಹಿಸಲು ಬಾಹ್ಯ ಪರಿಸರ ಮತ್ತು ಸಮುದಾಯದ ಸಾಮರ್ಥ್ಯವನ್ನು ಸಕ್ರೀಯಾಗಿಸಲು ಜೀವನಾಧಾರದ ಮಧ್ಯಸ್ಥಿಕೆಯ ಅವಿಭಾಜ್ಯ ಅಂಶಗಳಾಗಿರುತ್ತವೆ.

2) ಜೀವನಾಧಾರವು ಇದೊಂದು ಸಂಕೀರ್ಣ ವಿಷಯವಾಗಿದ್ದು ಇದು ಕುಟುಂಬದ ಅಗತ್ಯಗಳನ್ನು ಪೂರೈಸಲು ಸಂಪತ್ತು ಬಳಕೆ ಆದಾಯ ಉತ್ಪಾದಿಸುವ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ. ಒಮದು ಚಟುವಟಿಕಯ ಬದಲಾವಣೆಗೆ ಇತರರ ಮೇಲೆ ನಿರ್ಧಿಷ್ಠವಾಗಿ ಅವಲಂಬಿತರಾಗುತ್ತದೆ. ಆದ್ದರಿಂದ ವೆಚ್ಚ, ಭತ್ಯೆ ಸಮುದಾಯದ ಗೃಹಿಕೆಯನ್ನು ಪರಿಗಣಿಸಬೇಕು. ಜೀವನಾಧಾರಿತ ಮಧ್ಯಸ್ಥಕೆಯೆಯು ಲಾಭ ಆಧಾರಿತ ಸಾರ್ವಜನಿಕ ಉದ್ದೇಶದ ಯೋಜನೆಯಾಗಿದೆ. ಜೀವನಾಧಾರದ ವೃತ್ತಿಗಾಗರರು ಅವನು/ಅವಳು ಸ್ವಂತ ಲಾಭಕ್ಕಾಗಿ ಅಲ್ಲದೆ ಇತರರ ಲಾಭಕ್ಕಾಗಿ ಕೆಲಸ ಮಾಡುವರು ಹಾಗೂ ಇದು ಸರ್ಕಾರದ ಉದ್ಯಮಗಳ ಒಂದು ಸಾಂಪ್ರಾದಾಯಕ ಪರ್ಯಾಯವಾಗಿದೆ. ಜೀವನಾಧಾರದ ವೃತ್ತಿಗಾರರ ಸಾಮರ್ಥ್ಯದ ಮೇಲೆ ಪರಿಣಾಮ ಹೊಂದುವುದು.

## ಯೋಜನೆಯ ರಚನಾಕ್ರಮ(Formulation)

ಜೀವನಾಧಾರದ ಯೋಜನೆ ರಚಿಸಲು, ಯೋಜನೆಯ ಕಲ್ಪನೆ ರೂಪಿಸಬೇಕು. ಆರಂಭಿಕ ಹಂತ ಮತ್ತು ಕೊನೆಯ ಹಂತವನ್ನು ಸೂಚಿಸಬೇಕು ಯೋಜನೆಯನ್ನು ಒಂದು ಕಾಲಮಿತಿಗೆ ಒಳಪಡಿಸಬೇಕು. ಯೋಜನೆ ಧ್ಯೇಯವು ಅಚಿತಿಮ ಪಲಿತಾಂಶ ವಿಶೇಷಣಗಳ ಮೇಲೆ ಅವಲಂಬಿತವಾಗಿರುತ್ತದೆ.

ಉದಾ:30 ಜನ SHG ಯವರಿಗೆ ಬುಕ್ ಕೀಪಿಂಗ್ ತರಬೇತಿಯನ್ನು ರಾಮಾವರಂ ಕ್ಲಸ್ಟರ್ ಏರ್ಪಡಿಸಲಾಗುತ್ತದೆ. ಸದರ ಗುಂಪಿನವರು ಮುಂದಿನ 03 ತಿಂಗಳಲ್ಲಿ ಅವರು ಪ್ರಾಥಾಮಿಕ ಲೆಕ್ಕ ಬರೆಯಲು, ಬ್ಯಾಲೆನ್ಸ್ ತೆಗೆದುಕೊಳ್ಳುಲು ಶಕ್ತಗೊಳಿಸಲಾಗುವುದು, ಇದನ್ನು ಯೋಜನೆ ಎಂದು ರೂಪಿಸಲಾಗುವುದು.

## ಯೋಜನೆ ಪರಿಕಲ್ಪನೆ:

______________________________

______________________________

## ಜೀವನಾಧಾರದ ಯೋಜನೆಯನ್ನು ರಚಿಸುವ ಕ್ರಮ:

1) ಆಭಿವೃದ್ದಿಸಲು ಜೀವನಾಧಾರದ ನಕ್ಷೆ ತಯಾರಿಕೆ
2) ಜೀವನೋದ್ದಾರದ ಮಧ್ಯಸ್ಥಿಕೆ ಯೋಜನೆಯ ಉಪ–ಅಂಶಗಳನ್ನು ವಿವರಿಸಬೇಕು.
3) ನಿರ್ಧಿಷ್ಟ ಚಟುವಟಿಕೆ ಮತ್ತು ಮೈಲುಗಲ್ಲುಗಳನ್ನು ಗುರ್ತಿಸಬೇಕು.
4) ಚಟುವಟಿಕೆಯ ಸರಿಯಾದ ಕ್ರಮಗಳನ್ನು ನಿರ್ದರಿಸಬೇಕು.
5) ಜಾಲಬಂಧ ಚಿತ್ರವನ್ನು ನಿರ್ಮಿಸಬೇಕು()
6) ಪ್ರತಿ ಚಟುವಟಿಕೆಗೆ ಬೇಕಾದ ಸಮಯವನ್ನು ಅಂದಾಜು ಮಾಡಬೇಕು.
7) ವಿಮಾರ್ಶಾತ್ಮಕ ಮಾರ್ಗವನ್ನು ನಿರ್ಧರಿಸಬೇಕು
8) ಯೋಜನೆ ಮುಂದುವರಿದಂತೆ PERT ಪಟ್ಟಿಯನ್ನು ನವೀಕರಸಬೇಕು.



ANS SIRD

## STEP - ಜೀವನಾಧಾರದ ಅಭಿವೃದ್ಧಿ ನಕ್ಷೆ (LP Map)

ಚಟುವಟಿಕೆಯು ಮೂಲಭೋತ ಪರಿಕಲ್ಪನೆಗೆ ಗುರಿಪಡಿಸಿದ ಕುಟುಂಬಗಳ ಪ್ರಸ್ತುತ ಸ್ಥಿತಿಯಿಂದ ಬಯಸಿದ ಸ್ಥಿತಿಗೆ ವರ್ಗಾಯಿಸಬೇಕು, ಸ್ಥಳೀಯ ಆರ್ಥಿಕತೆಯನ್ನು ಆಧರಿಸಿ, ಆ ಪ್ರದೇಶದ ಬಡವರಿಗೆ ಸೂಕ್ತ ಚಟುವಿಕೆಗಳ ಆಯ್ಕೆ 3E ಪ್ರಯೋಗ ಮತ್ತು ಅಗತ್ಯವಿದ್ದಲ್ಲಿ ಉಪವಲಯ ವಿಶ್ಲೇಷಿ, ಈ ಕೆಳಗಿನ ಮೂಲ ಪ್ರಶ್ನೆಗಳಿಗೆ ಉತ್ತರಿಸಬೇಕು.

1) ಸೂಕ್ತವಾದ ಚಟುವಟಿಕೆ ಜನರ ಜೀವನ ಬೆಂಬಲಿಸುತ್ತದೆ.
2) ಪ್ರತಿ ಚಟುವಟಿಕೆಯಲ್ಲಿ ಮಧ್ಯಸ್ಥಿಕೆ () ವಿಚಾರ/ಪ್ರತಿಬಂಧಕಗಳಾವವು/ನಿರ್ಬಂಧ/ ಸಮಸ್ಯೆಗಳಾವವು?
3) ಯಾವ ಕಾರ್ಯತಂತ್ರ ಪ್ರತಿಬಂಧಕ/ನಿರ್ಬಂದಗಳ ತಿಳಿಸುವು ಕೆಲಸ ಮಾಡುತ್ತದೆ.
4) ಯಾವ ಬದಲಾವಣೆಗಳು, ವೈಯಕ್ತಿಕವಾಗಿ, ಗುಂಪಾಗಿ ಅವರ ಆದಾಯ ದೋಷಗಳನ್ನು ಸೇರಿದಂತೆ ಜೀವನಾಧಾರದ ವ್ಯವಸ್ಥೆ ನಿರೀಕ್ಷಿಸಲಾಗಿದೆ
5) ಯಾರ ಮಧ್ಯಸ್ಥಿಕೆ ಕಾರ್ಯತಂತ್ರಗಳು ಅವಿಭಾಜ್ಯ ಅಂಗಗಳೆಂದು ಹೇಳಲಾಗುದು
6) ಜೀವನಾಧಾರ ಚಟುವಟಿಕೆ ಅಥವಾ ಉದ್ಯಮ ಮಾಲಿಕತ್ವ ಯಾರು ಹೊಂದಿರುತ್ತಾರೆ.?
7) ಜೀವನಾಧಾರದ ಚಟುವಟಿಕೆಯರು ಹೊಂದಿರುತ್ತಾರೆಯೇ ?
8) ಮಧ್ಯಸ್ಥಿಕೆ(Intervention)ಪ್ರಮಾಣವೇನು?
9) ಎಲ್ಲಾ ಜೀವನಾಧಾರದ ಚಟುವಟಿಕೆ ಅಥವಾ ಮಧ್ಯಸ್ಥಿಕೆ (Intervention)ಯು ಹಣಕಾಸಿನ ಯೋಜನೆ ರಚಿಸುತ್ತದೆ?

ಈ 09 ಉತ್ತರಗಳು ಸಂಗ್ರಹವು LP ನಕ್ಷೆಯನ್ನು ಸಾಕಾರಗೊಳಿಸಲು ನೆರವಾಗುತ್ತದೆ.

**ಜೀವನಾಧಾರದ ಮಧ್ಯಸ್ಥಿಕೆಯು ಯೋಜನೆಯ ಉಪಅಂಶಗಳ ವಿವರಣೆ:**

LP Map ಒಪ್ಪಿಕೊಂಡು, ಮಧ್ಯಸ್ಥಿಕೆ ಯೋಜನೆಯ ಈ ಕೆಳಗಿನ ಉಪ–ಘಟಕಗಳ ಕಲ್ಪಿಸಿಕೊಂಡು ಸ್ಪಷ್ಟಪಡಿಸಬೇಕು

1. ಸಮುದಾಯ ಸಂಸ್ಥೆಯ ಯೋಜನೆ
2. ನಿರ್ಮಾಣ ನಿರ್ವಹಣೆ ಮತ್ತು ತಂತ್ರಜ್ಞಾನದ ಯೋಜನೆ
3. ವ್ಯವಸ್ಥೆಗಳು ಮತ್ತು ಮಾನವ ಸಂಪನ್ಮೂಲಗಳ ಯೋಜನೆ
4. ಹಣಕಾಸು ನಿರ್ವಹಣೆ ಯೋಜನೆ
5. ವ್ಯಾಪಾರೋದ್ಯಮ ಯೋಜನೆ
6. ಯೋಜನೆ ಮೇಲ್ವಿಚಾರಣೆ

ಈ ಹಂತಗಳಲ್ಲಿ ಪ್ರತಿಯೊಂದು ಉಪಯೋಜನೆಗಳು ಎಂದು ಪರಿಗಣಿಸಬೇಕು. ಮೇಲಿನ ಶಿಶು ಯೋಜನೆಗಳಲ್ಲಿ ಯಾವುದೇ ಒಂದು ಉಪಯೋಜನೆಯನ್ನಾಗಿ ನಿರೂಪಿಸಬೇಕು.

ANS SIRD

## ಚಟುವಟಿಕೆ/ಕೆಲಸಗಳು ಹಾಗೂ ಮೈಲುಗಲ್ಲುಗಳು

ಯೋಜನೆಯ ಅಚಿತಿಮ ಗುರಿ ಸಾಧಿಸಲು ಹಲವಾರು ಕೆಲಸಗಳನ್ನು ಮಾಡಬೇಕಾಗುತ್ತದೆ. ಉದಾ: ಪೂರ್ಣ ಯೋಜನೆಯು ತರಬೇತಿ ಕಾರ್ಯ ಸಂಘಟಿಸಿದರೆ, ಅದರಲ್ಲಿ ಕೆಲವು ಕಾರ್ಯವನ್ನು ಕೈಗತ್ತಿಕೊಳ್ಳಬೇಕು.

I. ಪಠ್ಯಕ್ರಮದ ಅಭಿವೃದ್ದಿ
II. ತರಬೇತಿ ಸಲಕರಣೆಗಳ ಅಭಿವೃದ್ದಿ
III. ಬೋದಿತ ವರ್ಗಗಳ ಗುರ್ತಿಸುವಿಕೆ
IV. ಭೋಜನ ಗೃಹ, ವಸತಿ ಗೃಹ ಗುರ್ತಿಸುವಿಕೆ
V. ಭಾಗವಹಿಸಿದವರಿಗೆಲ್ಲಾ ಮಾಹಿತಿ ಒದಗಿಸುವಿಕೆ
VI. ಭಾಗವಹಿಸದವರಿಗೆ ಸಂಬಂಧಿಸಿದ ವಸ್ತುಗಳನ್ನು ವಿತರಿಸುವುದು
VII. ಕಾರ್ಯಕ್ರಮ ನಡೆಸುವುದು
VIII. ಭಾಗವಹಿಸಿದವರ ಅಭಿಪ್ರಾಯ ಪರಿಗಣಿಸುವುದು.

ANS SIRD